ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 3 ಸೋಮವಾರ 2023

43

ಸಂಪುಟ: 43 | ಸಂಚಿಕೆ: 343 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನಂಜನಗೂಡಲ್ಲಿ ವಿಜೃಂಭಣೆಯ
ಪಂಚ ಮಹಾರಥೋತ್ಸವ

ಶ್ರೀಕಂಠೇಶ್ವರನ ದರ್ಶನಕ್ಕೆ ಹರಿದು ಬಂದ ಭಕ್ತ ಸಾಗರ



ನಂಜನಗೂಡು, ಏ.2– ದಕ್ಷಿಣಕಾಶಿ, ಗರಳಾಪುರಿ ಕ್ಷೇತ್ರವೆಂದೇ ಪ್ರಸಿದ್ಧಿ ಪಡೆದಿರುವ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ (ದೊಡ್ಡಜಾತ್ರೆ) ಗೌತಮ ಪಂಚ ಮಹಾರಥೋತ್ಸವ ಭಾನುವಾರ ಲಕ್ಷಾಂತರ ಭಕ್ತರ ಉದ್ಘೋಷ, ಜಯಘೋಷಗಳ ನಡುವೆ ವಿಜೃಂಭಣೆಯಿಂದ ನೆರವೇರಿತು.

ದೊಡ್ಡಜಾತ್ರೆ ಅಂಗವಾಗಿ ಭಾನುವಾರ ಮುಂಜಾನೆ 2 ಗಂಟೆಯಿಂದಲೇ ದೇವಾಲಯದಲ್ಲಿ ಕ್ಷೀರಾಭಿಷೇಕ, ಫಲಪಂಚಾಮೃತಾಭಿಷೇಕ, ಮಹೋನ್ನತಪೂರ್ವಕ ಏಕದಶಾವರ ರುದ್ರಾಭಿಷೇಕ, ಪ್ರಾತಃಕಾಲ ಪೂಜೆ ನೆರವೇರಿಸಿ ನಂತರ ಹೋಮ ಹವನಾದಿಗಳನ್ನು ನೆರವೇರಿಸಲಾಯಿತು. ನಂತರ ರಥದ ಬಳಿ ಬಲಿ ಪೂಜೆ ನೆರವೇರಿಸಿದ ನಂತರ ಉತ್ಸವಮೂರ್ತಿಯನ್ನು ವಿಶೇಷ ಹೂ, ವಜ್ರ, ವೈಢೂರ್ಯಗಳಿಂದ ಅಲಂಕರಿಸಲಾಯಿತು. ಬಳಿಕ ಉದಯಾತ್ಪೂರ್ವ 6ರಿಂದ 6.40ರೊಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ದೇವಾಲಯದ ಆಗಮಿಕ ಅರ್ಚಕ ಹಾಗೂ ದೇವಾಲಯದ ಪ್ರಧಾನ ಅರ್ಚಕ ಜೆ.ನಾಗಚಂದ್ರ ದೀಕ್ಷಿತ್ ಮತ್ತು ದೇಗುಲದ ಅರ್ಚಕ ವೃಂದವರು ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿದ ನಂತರ ಶ್ರೀಕಂಠೇಶ್ವರ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು. ▶ 6ನೇ ಪುಟಕ್ಕೆ

ಕರ್ನಾಟಕದಲ್ಲಿ ಅಧಿಕಾರಕ್ಕೇರಲು ಗುಜರಾತ್ ಮಾದರಿ ತಂತ್ರಗಾರಿಕೆ ಅಳವಡಿಕೆಗೆ ಮುಂದಾದ ಬಿಜೆಪಿ

ಬೆಂಗಳೂರು,ಏ.2–ಮೇ 10ರಂದು ನಡೆಯಲಿರುವ ವಿಧಾನಸಭೆ ಚುನಾವಣೆಗೆ ಬಿಜೆಪಿ ಪ್ರಚಾರದಲ್ಲಿ ಎಲ್ಲಾ ರಾಜ್ಯಗಳ ನಾಯಕರನ್ನು ಕಣಕ್ಕೆ ಇಳಿಸುವ ಗುಜರಾತ್ ಚುನಾವಣೆ ಸಮಯದಲ್ಲಿ ಬಳಸಿದ ಅದೇ ತಂತ್ರವನ್ನು ಅಳವಡಿಸಿಕೊಳ್ಳಲು ಮುಂದಾಗಿದೆ.



ಕೇಂದ್ರ ಮತ್ತು ರಾಜ್ಯ ಸಚಿವರು, ಸಂಸದರು ಮತ್ತು ಶಾಸಕರು ಸೇರಿದಂತೆ ವಿವಿಧ ರಾಜ್ಯಗಳ 50–60 ನಾಯಕರಿಗೆ ಕರ್ನಾಟಕ ಚುನಾವಣಾ ಪ್ರಚಾರದ ಉಸ್ತುವಾರಿಯನ್ನು ಪಕ್ಷ ವಹಿಸಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಮೂಲಗಳ ಪ್ರಕಾರ, ಬಿಜೆಪಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿಎಲ್ ಸಂತೋಷ್ ಮತ್ತು ರಾಜ್ಯ ಚುನಾವಣಾ ಉಸ್ತುವಾರಿ ಮತ್ತು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ನಡುವೆ ಸಭೆ ನಡೆದಿದೆ. ರಾಜ್ಯದಲ್ಲಿ ಪಕ್ಷವನ್ನು ಗೆಲ್ಲಿಸುವಂತೆ ಸಭೆಯಲ್ಲಿ ಮುಖಂಡರಿಗೆ ಸೂಚಿಸಲಾಯಿತು. ಕೇಂದ್ರ ರಾಜ್ಯ ಸಚಿವ ಪಂಕಜ್ ಚೌಧರಿ, ಸಂಸದ ನಿಶಿಕಾಂತ್ ದುಬೆ, ರಮೇಶ್ ಬಿಧುರಿ, ಸಂಜಯ್ ಭಾಟಿಯಾ, ಬಿಹಾರ ಶಾಸಕ ಸಂಜೀವ್ ಚೌರಾಸಿಯಾ, ಯುಪಿ ಶಾಸಕ ಸತೀಶ್ ದ್ವಿವೇದಿ ಮತ್ತು ▶ 8ನೇ ಪುಟಕ್ಕೆ

ಇಡಿಯಿಂದ ಕಾವೇರಿ ನೀರಾವರಿ ನಿಗಮದ ಮಾಜಿ ಎಂಡಿಗೆ ಸೇರಿದ 1.1 ಕೋಟಿ ರೂ. ಮೌಲ್ಯದ ಆಸ್ತಿ ಮುಟ್ಟುಗೋಲು

ಬೆಂಗಳೂರು,ಏ.2–ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಕಾವೇರಿ ನೀರಾವರಿ ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಟಿ.ಎನ್.ಚಿಕ್ಕರಾಯಪ್ಪ ಅವರ 1.10 ಕೋಟಿ ರೂ. ಮೌಲ್ಯದ ಎರಡು ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಬೆಂಗಳೂರಿನ ಜಾರಿ ನಿರ್ದೇಶನಾಲಯ (ಇಡಿ) ಆದೇಶ ಹೊರಡಿಸಿದೆ.

ಚಿಕ್ಕರಾಯಪ್ಪ ಇತರ ಆರೋಪಿಗಳ ನೆರವಿನೊಂದಿಗೆ ಅಕ್ರಮವಾಗಿ 5.33 ಕೋಟಿ ರೂ. ಮೌಲ್ಯದ ಅಕ್ರಮ ಆಸ್ತಿ ಸಂಪಾದಿಸಿದ್ದಾರೆ ಎಂದು ತನಿಖೆಯಿಂದ ತಿಳಿದುಬಂದಿದೆ ಎಂದು ಕೇಂದ್ರೀಯ ತನಿಖಾ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ. ಅಕ್ರಮ ಹಣದಿಂದ ಪರಿಚಿತ ವ್ಯಕ್ತಿಗಳ ಹೆಸರಿನಲ್ಲಿ ಸ್ಥಿರಾಸ್ತಿ ಖರೀದಿಸಿ, ಅವುಗಳನ್ನು ತಮ್ಮ ಕುಟುಂಬದ ಸದಸ್ಯರ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದ್ದಾರೆ. ಭ್ರಷ್ಟಾಚಾರ ತಡೆ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಚಿಕ್ಕರಾಯಪ್ಪ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ (ಈಗ ಕರ್ನಾಟಕ ಲೋಕಾಯುಕ್ತ ಬೆಂಗಳೂರು) ದಾಖಲಿಸಿದ ಎಫ್‌ಐಆರ್ ಆಧಾರದ ಮೇಲೆ ಇಡಿ ತನಿಖೆ ಆರಂಭಿಸಿದೆ.

ಚಿಕ್ಕರಾಯಪ್ಪ ಮತ್ತು ಇತರ ಆರೋಪಿಗಳ ವಿರುದ್ಧ ಐಪಿಸಿ ಮತ್ತು ಪಿಸಿ ಕಾಯ್ದೆಯ ಸೆಕ್ಷನ್‌ಗಳ ಅಡಿಯಲ್ಲಿ ಎಸಿಬಿ ಸಿಟಿ ಸಿವಿಲ್ ಮತ್ತು ಸೆಷನ್ ನ್ಯಾಯಾಲಯದ ಮುಂದೆ ಚಾರ್ಜ್‌ಶೀಟ್ ಕೂಡ ಸಲ್ಲಿಸಿತ್ತು.

"ಸಾತನೂರು ಬಳಿ ಜಾನುವಾರು ಸಾಗಿಸುತ್ತಿದ್ದ ಕಾರಣಕ್ಕೆ ಯುವಕನೊಬ್ಬ ಹತ್ಯೆಗೀಡಾಗಿರುವುದು ಕಳೆದ ಮೂರೂವರೆ ವರ್ಷದಲ್ಲಿ ಬಿಜೆಪಿ ಸರ್ಕಾರ ವ್ಯವಸ್ಥಿತವಾಗಿ ಬೆಳೆಸಿ ಪೋಷಿಸಿರುವ ಅಸಹನೆ, ಅಸಹಿಷ್ಣುತೆಯೇ ಕಾರಣ. ಯುವಕನ ಕೊಲೆಯಾದ ರಾತ್ರಿ ಆರೋಪಿ ಮತ್ತವನ ಸಹಚರರು ರಸ್ತೆಯಲ್ಲಿ ಕ್ರಿಕೆಟ್ ಬ್ಯಾಟುಗಳನ್ನು ಹಿಡಿದು ಗೋರಕ್ಷಕನ ಸೋಗು ಹಾಕಿಕೊಂಡು ಪಹರೆ ಕಾಯುವ ನಾಟಕದ ವಿಡಿಯೋ ಮಾಡಿ ತನ್ನ ಜಾಲತಾಣದಲ್ಲಿಯೇ ಹಾಕಿಕೊಂಡಿದ್ದಾನೆ. ಅವರ ಉದ್ದೇಶವೇ ಬೇರೆ ಇತ್ತು ಎನ್ನುವುದು ಸ್ಪಷ್ಟ. ಇದಕ್ಕಿಂತ ಸಾಕ್ಷಿ ಬೇಕೆ. ಕೂಡಲೇ ಪೊಲೀಸರು ಆರೋಪಿಗಳನ್ನು ಬಂಧಿಸಬೇಕು. –ಹೆಚ್.ಡಿ.ಕುಮಾರಸ್ವಾಮಿ

"ಧರ್ಮ ರಕ್ಷಣೆಯ ಹೆಸರಲ್ಲಿ ಬಿಜೆಪಿ ರಾಜ್ಯದಲ್ಲಿ ಬೆಳೆಸಿದ ಗೂಂಡಾ ಸಂಸ್ಕೃತಿಗೆ ಸಾತನೂರು ಬಳಿ ನಡೆದ ಯುವಕನ ಹತ್ಯೆ ಸಾಕ್ಷಿ. ಈ ಹತ್ಯೆಯ ಹೊಣೆಯನ್ನು ಗೃಹ ಸಚಿವರೇ ಹೊರಬೇಕು. ಕರ್ನಾಟಕ ಇಂತಹ ಸಮರ್ಥ, ಅದಕ್ಷ ಮತ್ತು ಬೇಜವಾಬ್ದಾರಿ ಗೃಹಸಚಿವರನ್ನು ಎಂದೂ ನೋಡಿರಲಿಲ್ಲ. ತನ್ನ ಇಲಾಖೆ ಮೇಲೆ ನಿಯಂತ್ರಣ ಇಲ್ಲದ ಸಚಿವರಿಗೆ ರಾಜ್ಯದ ಶಾಂತಿ ಮತ್ತು ಸುವ್ಯವಸ್ಥೆ ನಿರ್ವಹಿಸಲು ಸಾಧ್ಯವೇ? ಮೊದಲು ಇವರನ್ನು ಸಂಪುಟದಿಂದ ಕಿತ್ತು ಹಾಕಿ. ಗೋರಕ್ಷಣೆಯ ಹೆಸರಲ್ಲಿ ನಡೆದ ಹತ್ಯೆ ಕೇವಲ ಹುಚ್ಚಾಟವಲ್ಲ. ಇದು ಚುನಾವಣಾ ದಿನಗಳಲ್ಲಿ ಕೋಮು ದ್ವೇಷ ಬಡಿದೆಬ್ಬಿಸುವ ಯೋಜಿತ ಸಂಚಿನ ಭಾಗ. ಪೊಲೀಸರು ಕೂಲಂಕುಷ ತನಿಖೆ ನಡೆಸಬೇಕು. –ಸಿದ್ದರಾಮಯ್ಯ ಟ್ವೀಟ್

ಅಕ್ರಮವಾಗಿ ಸಾಗಿಸುತ್ತಿದ್ದ ಜಾನುವಾರುಗಳ ರಕ್ಷಿಸಿದ ರಾಷ್ಟ್ರ ರಕ್ಷಣಾ ಪಡೆ

ಗೋ ಸಾಗಾಣಿಕೆದಾರ ಸಾವು, ಪುನೀತ್ ಕೆರೆಹಳ್ಳಿ ವಿರುದ್ಧ ಕೊಲೆ ಕೇಸ್

- ಸಾತನೂರು ಪೊಲೀಸ್ ಠಾಣೆ ಮುಂಭಾಗ ಘಟನೆ
- ಪುನೀತ್ ಬಂಧನಕ್ಕೆ ಆಗ್ರಹಿಸಿ ಮಂಡ್ಯದಲ್ಲಿ ಮೆರವಣಿಗೆ



ಪುನೀತ್ ಕೆರೆಹಳ್ಳಿ



ಇದ್ರೀಶ್ ಪಾಷಾ

ಮಂಡ್ಯ/ಸಾತನೂರು, ಏ.2– ಕ್ಯಾಂಟರ್‌ನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಜಾನುವಾರುಗಳನ್ನು ರಾಷ್ಟ್ರ ರಕ್ಷಣಾ ಪಡೆ ಕಾರ್ಯಕರ್ತರು ಹಿಡಿದು ಪೊಲೀಸರಿಗೆ ಒಪ್ಪಿಸಿದ ಬೆನ್ನಲ್ಲೇ ಗೋ ಸಾಗಾಣಿಕೆದಾರ ಸಾವನ್ನಪ್ಪಿದ್ದು, ರಾಷ್ಟ್ರ ರಕ್ಷಣಾ ಸಮಿತಿ ಪಡೆಯ ಮುಖ್ಯಸ್ಥ ಪುನೀತ್ ಕೆರೆಹಳ್ಳಿ ಹಾಗೂ ಸಂಗಡಿಗರ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ.

ಸಾತನೂರು ಪೊಲೀಸ್ ಠಾಣೆ ಎದುರೇ ಪುನೀತ್ ಕೆರೆಹಳ್ಳಿ ಹಾಗೂ ಸಂಗಡಿಗರು ಶನಿವಾರ ಮಧ್ಯರಾತ್ರಿ ಕ್ಯಾಂಟರ್‌ವೊಂದನ್ನು ತಡೆದು ಅದರಲ್ಲಿ ಸಾಗಿಸುತ್ತಿದ್ದ 16 ಜಾನುವಾರುಗಳನ್ನು ಪೊಲೀಸರಿಗೆ ಒಪ್ಪಿಸಿದ್ದರು. ಈ ವೇಳೆ ಕ್ಯಾಂಟರ್‌ನಲ್ಲಿದ್ದ ಮೂವರು ಪರಾರಿಯಾಗಿದ್ದು, ಅವರಲ್ಲಿ ಓರ್ವನನ್ನು ಪುನೀತ್ ಕೆರೆಹಳ್ಳಿ ತಂಡ ಹಿಡಿದು ಪೊಲೀಸರಿಗೆ ಒಪ್ಪಿಸಿತ್ತು. ಈ ಸಂಬಂಧ ಇಂದು ಬೆಳಗ್ಗೆ ಪ್ರಕರಣ ದಾಖಲಾಗಿತ್ತು.

ಅದೇ ವೇಳೆ ತಮ್ಮ ವಾಹನವನ್ನು ಕಾನೂನು ಬಾಹಿರವಾಗಿ ಅಡ್ಡಗಟ್ಟಿದ್ದಾರೆ ಎಂದು ಕ್ಯಾಂಟರ್ ವಾಹನ ಚಾಲಕ, ಪುನೀತ್ ಕೆರೆಹಳ್ಳಿ ತಂಡದ ವಿರುದ್ಧ ದೂರೊಂದನ್ನು ದಾಖಲಿಸಿದ್ದ. ಬೆಳಗ್ಗೆ 9 ಗಂಟೆ ಸುಮಾರಿನಲ್ಲಿ ಕ್ಯಾಂಟರ್ ಹಿಡಿದಿದ್ದ ಸ್ಥಳದ ಅನತಿ ದೂರದಲ್ಲಿ ಪೊದೆಯೊಂದರ ಬಳಿ ಗೋ ಸಾಗಾಣಿಕೆದಾರ ಮಂಡ್ಯ ನಗರದ ಗುತ್ತಲು ಬಡಾವಣೆ ನಿವಾಸಿ ಇದ್ರೀಶ್ ಪಾಷಾ(35) ಎಂಬಾತನ ಶವ ಪತ್ತೆಯಾಗಿತ್ತು. ಈತನನ್ನು ಪುನೀತ್ ಕೆರೆಹಳ್ಳಿ ತಂಡದವರೇ ಹತ್ಯೆ ಮಾಡಿದ್ದಾರೆ ಎಂದು ಪೊಲೀಸ್ ಠಾಣೆ ಮುಂದೆ ಆತನ ಸಂಬಂಧಿಕರು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಪುನೀತ್ ಕೆರೆಹಳ್ಳಿ ಹಾಗೂ ಸಂಗಡಿಗರ ವಿರುದ್ಧ ಪೊಲೀಸರು ಕೊಲೆ ಪ್ರಕರಣ ದಾಖಲಿಸಿದ್ದಾರೆ.

ಈ ಕುರಿತು ಯೂನಿಷ್ ಪಾಷಾ ಎಂಬಾತ ಪೊಲೀಸರಿಗೆ ದೂರು ಸಲ್ಲಿಸಿದ್ದು, ತಾವು ಮದ್ದೂರು ತಾಲೂಕು ಶಿವಪುರ ಬಳಿಯ ತಂಡೆಕೆರೆ ಸಂತೆಯಲ್ಲಿ ಜಾನುವಾರುಗಳನ್ನು ಕಾನೂನುಬದ್ಧವಾಗಿ ಖರೀದಿಸಿದ್ದು, ಅದಕ್ಕೆ ನಮ್ಮ ಬಳಿ ರಶೀದಿಯೂ ಇತ್ತು. ಆದರೂ ಗೋ ರಕ್ಷಣೆ ಹೆಸರಿನಲ್ಲಿ ನಮ್ಮ ವಾಹನವನ್ನು ತಡೆದ ಪುನೀತ್ ಕೆರೆಹಳ್ಳಿ ▶ 8ನೇ ಪುಟಕ್ಕೆ

'ಸಂವಿಧಾನ ಬಚಾವೋ, ದೇಶ ಬಚಾವೋ' ಪ್ರತಿಭಟನಾ ಧರಣಿ

ಜನಸಂಖ್ಯೆಗನುಗುಣವಾಗಿ ಎಲ್ಲರಿಗೂ ಮೀಸಲಾತಿ

- ಮಾಜಿ ಸಿಎಂ ಸಿದ್ದರಾಮಯ್ಯ ಘೋಷಣೆ
- ಬಿಜೆಪಿ ಸರ್ಕಾರದ ವಿರುದ್ಧ ಮೀಸಲಾತಿ ದುರ್ಬಳಕೆ ಆರೋಪ
- ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ



ಮೈಸೂರಿನ ಪುರಭವನದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಭಾನುವಾರ ಬಿಜೆಪಿ ವಿರುದ್ಧ ಮಾಜಿ ಸಿಎಂ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಪ್ರತಿಭಟನೆ ನಡೆಸಿದರು

ಮೈಸೂರು,ಏ.2(ಪಿಎಂ)– ರಾಜ್ಯ ಬಿಜೆಪಿ ಸರ್ಕಾರದ ದುರಾಡಳಿತ, ಭ್ರಷ್ಟಾಚಾರದಿಂದ ಬೇಸತ್ತಿರುವ ಜನತೆ ಈ ಬಾರಿ ಕಾಂಗ್ರೆಸ್‌ಗೆ ಅಧಿಕಾರ ನೀಡಲು ತೀರ್ಮಾನಿಸಿದ್ದು, ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ. ಆ ಬಳಿಕ ಒಕ್ಕಲಿಗರು, ಲಿಂಗಾಯತರು, ಪರಿಶಿಷ್ಟ ಜಾತಿ–ಪಂಗಡ, ಹಿಂದುಳಿದವರು, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲರಿಗೂ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸುತ್ತೇವೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದರು.

ಮೈಸೂರಿನ ಪುರಭವನದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಬಿಜೆಪಿ ಮೀಸಲಾತಿಯನ್ನು ಚುನಾವಣೆಗಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ವತಿಯಿಂದ ಭಾನುವಾರ 'ಸಂವಿಧಾನ ಬಚಾವೋ, ದೇಶ ಬಚಾವೋ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಪ್ರತಿಭಟನಾ ಧರಣಿಯಲ್ಲಿ ಅವರು ಮಾತನಾಡಿದರು.

ನಾವು ಅಧಿಕಾರಕ್ಕೆ ಬಂದ ಬಳಿಕ ಒಟ್ಟು ಮೀಸಲಾತಿ ಶೇ.50ಕ್ಕಿಂತಲೂ ಹೆಚ್ಚು ಮಾಡಿ ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸಿ, ಎಲ್ಲಾ ಸಮುದಾಯಗಳಿಗೂ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕೊಡುತ್ತೇವೆ ಎಂದರು.

ಚುನಾವಣೆ ಹತ್ತಿರ ಬರುತ್ತಿದ್ದಂತೆ ರಾಜ್ಯ ಬಿಜೆಪಿ ಸರ್ಕಾರ ತರಾತುರಿಯಲ್ಲಿ ಮೀಸಲಾತಿ ಹಂಚಿಕೆ ಮಾಡಿದೆ. ಆದರೆ ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸದೇ ಹಂಚಿರುವ ಮೀಸಲಾತಿ ಊರ್ಜಿತವಾಗದು. ಹಾಗಾದರೆ ಇವರ ಉದ್ದೇಶವೇನು? ಎಂದು ಪ್ರಶ್ನಿಸಿದ ಅವರು, ಮೀಸಲಾತಿ ಬಗ್ಗೆ ರಾಜ್ಯ ಬಿಜೆಪಿ ಸರ್ಕಾರ ಗೊಂದಲ ಸೃಷ್ಟಿಸಿದೆ ಅದನ್ನು ವಿರೋಧಿಸಿ ಕಾಂಗ್ರೆಸ್‌ನಿಂದ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಪ್ರತಿಭಟನೆ ನಡೆಸಲಾಗಿದೆ. ವಿಭಾಗೀಯ ಮಟ್ಟದಲ್ಲೂ ಪ್ರತಿಭಟನೆ ಮಾಡಬೇಕೆಂದು ತೀರ್ಮಾನಿಸಿ, ಇಂದು ಮೈಸೂರಿನಲ್ಲಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಹೇಳಿದರು. ▶ 8ನೇ ಪುಟಕ್ಕೆ

"ರಾಜ್ಯದಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಸಂವಿಧಾನ ಕಡೆಗಣಿಸುವ ಪ್ರಯತ್ನ ಮಾಡುತ್ತಿದೆ. ಬಿಜೆಪಿಯ ಡಿಎನ್‌ಎ ಅಲ್ಲೇ ಸಂವಿಧಾನ, ಮೀಸಲಾತಿ, ಎಸ್‌ಸಿ–ಎಸ್‌ಟಿ ವಿರೋಧಿ ನೀತಿ ಇದೆ. ಬಿಜೆಪಿ ಈ ರಾಜ್ಯದ ಬಡವರು, ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರ ನ್ಯಾಯಸಮ್ಮತ ಬೇಡಿಕೆಗಳನ್ನು ಕಡೆಗಣಿಸಿದೆ. ಒಕ್ಕಲಿಗ ಸಮುದಾಯಕ್ಕೆ ಅಪಮಾನ ಮಾಡಿದೆ. ಲಿಂಗಾಯತ ಸಮಾಜದ ನ್ಯಾಯಸಮ್ಮತ ಬೇಡಿಕೆ ಗಾಳಿಗೆ ತೂರಿದೆ. ಅಲ್ಪಸಂಖ್ಯಾತರ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ. ಹಾಗಾದರೆ ಇವರು ಯಾರ ಪರವಾಗಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಮಾ.14ರಂದು ರಾಜ್ಯಸಭೆಯಲ್ಲಿ ಕರ್ನಾಟಕದ ಪರಿಶಿಷ್ಟ ಜಾತಿ–ಪಂಗಡದ ಮೀಸಲಾತಿ ಹೆಚ್ಚಳದ ಪ್ರಸ್ತಾವನೆ ರಾಜ್ಯ ಸರ್ಕಾರದಿಂದ ಬಂದಿಲ್ಲವೆಂದು ಪ್ರಧಾನಿಯವರು ಉತ್ತರ ನೀಡಿದ್ದಾರೆ. ಜೊತೆಗೆ ಶೇ.50ರಷ್ಟು ಮೀರಿ ಮೀಸಲಾತಿ ಕೊಡಲು ಸಾಧ್ಯವಿಲ್ಲ ಎಂದೂ ಹೇಳಿದ್ದಾರೆ.
–ರಣದೀಪ್ ಸುರ್ಜೇವಾಲ, ಎಐಸಿಸಿ ಪ್ರಧಾನ ಕಾರ್ಯದರ್ಶಿ

"ಅವೈಜ್ಞಾನಿಕ ಮತ್ತು ಅಸಂವಿಧಾನಿಕ ಮೀಸಲಾತಿ ನಿರ್ಧಾರಗಳಿಂದ ರಾಜ್ಯ ಬಿಜೆಪಿ ಸರ್ಕಾರವು ಜನತೆ ದಾರಿ ತಪ್ಪಿಸಿದೆ. ಅಲ್ಲದೆ, ಸಂವಿಧಾನಕ್ಕೆ ಅಪಚಾರ ಮಾಡಿದೆ. ಇದು ಖಂಡನೀಯ. ದೇಶದ ಜನತೆಯಲ್ಲಿ ಧರ್ಮದ ಹೆಸರಿನಲ್ಲಿ ಗೊಂದಲ ಸೃಷ್ಟಿಸಿ ಸಂವಿಧಾನದ ಆಶಯಕ್ಕೆ ಮಸಿ ಬಳಿಸುವ ಕೆಲಸ ಮಾಡುತ್ತಿದೆ.
–ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ

ಉನ್ನತ ಸ್ಥಾನಕ್ಕೇರಿದವರಿಗೆ ನಾಯಕತ್ವ ಒಂಟಿತನ ಭಾವನೆ ಮೂಡಿಸುತ್ತೆ

ಅಹಮದಾಬಾದ್, ಏ.2– ನಾಯಕತ್ವವು ವ್ಯಕ್ತಿಯೊಬ್ಬ ಉನ್ನತ ಸ್ಥಾನಕ್ಕೇರಿದ



ನಂತರ ಆತನಲ್ಲಿ ಒಂಟಿತನದ ಭಾವನೆ ಮೂಡಿಸುತ್ತದೆ. ನಾನು ಇದನ್ನು ಅನುಭವಿಸಿದ್ದೇನೆ ಎಂದು ಇನ್ಫೋಸಿಸ್ ಸಹಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಭಾನುವಾರ ಹೇಳಿದರು.

ಅಂಜನಾ ದತ್ತ ಅವರು ರಚಿಸಿರುವ, ಉದ್ಯಮಿ ಮದನ ಮೋಹಂಕ ಅವರ ಜೀವನಚರಿತ್ರೆ 'ಐ ಡಿಡ್‌ವಾಟ್ ಐ ಹ್ಯಾಡ್‌ಟು ಡು' ಬಿಡುಗಡೆ ಮಾಡಿ ಮಾತನಾಡಿದರು. ಮದನ್ ಅವರು ಕೂಡ ನಿನ್ನೆ ಇದೇ ಮಾತನ್ನು ಹೇಳಿದರು. ಈಗ ಅವರ ಪುತ್ರ ಮೆಹುಲ್ ಅವರಲ್ಲಿ ಕೂಡ ಇಂಥದೇ ಭಾವನೆ ಮನೆ ಮಾಡಿರುತ್ತದೆ ಎನಿಸುತ್ತದೆ ಎಂದರು.

ಮಾರ್ಗದರ್ಶನ ಕೋರಿ ನಿಮ್ಮತ್ತ ನೋಡುತ್ತಿರುವ ಲಕ್ಷಾಂತರ ಜನರ ಆತ್ಮವಿಶ್ವಾಸವನ್ನು ಹೆಚ್ಚಿಸುವುದು. ಅವರಿಗಾಗಿ ಸರಿಯಾದದ್ದನ್ನೇ ಮಾಡುವುದೇ ನಾಯಕತ್ವ ಎನಿಸುತ್ತದೆ. ಮದನ್‌ಮೋಹಂಕ ಅವರು ತೇಗಾಇಂಡಸ್ಟ್ರೀಜ್‌ಸಂಸ್ಥಾಪಕರು. ಅದರ ಚೇರಮನ್ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಅವರ ಪುತ್ರ ಮೆಹುಲ್ ಈಗ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಆಗಿದ್ದಾರೆ.

ದೇಶದ ಅತೀ ದೊಡ್ಡ ಡೇಟಾ ಕನ್ನ ಪ್ರಕರಣ

ಸುಮಾರು 66.9 ಕೋಟಿ ಭಾರತೀಯರ ಮಾಹಿತಿ ಕದ್ದಿದ್ದ ಖದೀಮನ ಬಂಧನ



ಹೈದರಾಬಾದ್,ಏ.2–ಇಲ್ಲಿನ 56 ಲಕ್ಷ ಜನರು ಸೇರಿದಂತೆ 8 ಮೆಟ್ರೋ ನಗರಗಳು, 24 ರಾಜ್ಯಗಳ 44 ವಿಭಾಗಗಳಲ್ಲಿ 66.9 ಕೋಟಿ ಜನರ ಮಾಹಿತಿಯನ್ನು ಕಳ್ಳತನ ಮಾಡಿರುವ ದೇಶದ ಅತೀ ದೊಡ್ಡ ಡೇಟಾ ಕಳವು ಪ್ರಕರಣವೊಂದನ್ನು ಹೈದರಾಬಾದ್ ಪೊಲೀಸರು ಪತ್ತೆ ಮಾಡಿದ್ದಾರೆ.


66.9 ಕೋಟಿ ಜನರ ಮತ್ತು ಖಾಸಗಿ ಸಂಸ್ಥೆಗಳ ವೈಯಕ್ತಿಕ ಮತ್ತು ಗೌಪ್ಯ ಮಾಹಿತಿಯನ್ನು ಕದ್ದಿದ್ದ ವ್ಯಕ್ತಿಯೊಬ್ಬನನ್ನು ಸೈಬರಾಬಾದ್ ಪೊಲೀಸರು ಬಂಧನಕ್ಕೊಳಪಡಿಸಿದ್ದಾರೆ. ಬಂಧಿತ ಆರೋಪಿಯನ್ನು ವಿನಯ್ ಭಾರದ್ವಾಜ್ ಎಂದು ಗುರ್ತಿಸಲಾಗಿದೆ. ಈತನಿಂದ ಶಿಕ್ಷಣ–ತಂತ್ರಜ್ಞಾನ ಸಂಸ್ಥೆಗಳ ವಿದ್ಯಾರ್ಥಿಗಳ ದತ್ತಾಂಶವನ್ನು ಪಡೆಯಲಾಗಿದೆ ಎಂದು ಪೊಲೀಸರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದರಲ್ಲಿ ಜಿಎಸ್‌ಟಿ, ವಿವಿಧ ರಾಜ್ಯಗಳ ರಸ್ತೆ ಸಾರಿಗೆ ಸಂಸ್ಥೆಗಳು, ಪ್ರಮುಖ ಇ–ಕಾಮರ್ಸ್ ಪೋರ್ಟಲ್‌ಗಳು, ಸಾಮಾಜಿಕ ಮಾಧ್ಯಮ ವೇದಿಕೆಗಳು ಮತ್ತು ಫಿನ್‌ಟೆಕ್ ಕಂಪನಿಗಳಂತಹ ಪ್ರಮುಖ ಸಂಸ್ಥೆಗಳ ಗ್ರಾಹಕರ ಮಾಹಿತಿಗಳೂ ಇವೆ ಎಂದು ಹೇಳಿದೆ.

ಬಂಧಿತ ಆರೋಪಿಗಳು 104 ವಿಭಾಗಗಳಲ್ಲಿ ಇರಿಸಲಾದ ಸುಮಾರು 66.9 ಕೋಟಿ ವ್ಯಕ್ತಿಗಳು ಮತ್ತು ಸಂಸ್ಥೆಗಳ ಖಾಸಗಿ ಮತ್ತು ಗೌಪ್ಯ ಡೇಟಾವನ್ನು ಮಾರಾಟ ಮಾಡುತ್ತಿರುವುದು ಕಂಡುಬಂದಿದೆ. ಆರೋಪಿ ಬಳಿ ಇರುವ ಕೆಲವು ಪ್ರಮುಖ ಮಾಹಿತಿಗಳಲ್ಲಿ ರಕ್ಷಣಾ ಸಿಬ್ಬಂದಿ, ಸರ್ಕಾರಿ ನೌಕರರು, ಪ್ಯಾನ್ ಕಾರ್ಡ್ ಹೊಂದಿರುವವರು, 9, 10, 11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಡಿ–ಮ್ಯಾಟ್ ಖಾತೆದಾರರು, ವಿವಿಧ ವ್ಯಕ್ತಿಗಳ ವಿವರಗಳು ಸೇರಿವೆ. ನೀಟ್ ವಿದ್ಯಾರ್ಥಿಗಳು, ಶ್ರೀಮಂತ ವ್ಯಕ್ತಿಗಳು, ವಿಮಾದಾರರು, ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್ ಹೊಂದಿರುವವರ ಡೇಟಾ ಮತ್ತು ಮೊಬೈಲ್ ಸಂಖ್ಯೆಗಳು ಕೂಡ ಆರೋಪಿ ಬಳಿ ಇರುವುದು ಕಂಡು ಬಂದಿದೆ.

ಆರೋಪಿಯಿಂದ ಪೊಲೀಸರು ಎರಡು ಮೊಬೈಲ್ ಫೋನ್‌ಗಳು ಮತ್ತು ಎರಡು ಲ್ಯಾಪ್‌ಟಾಪ್‌ಗಳು ಮತ್ತು ಸರ್ಕಾರಿ, ಖಾಸಗಿ ಸಂಸ್ಥೆಗಳು ಮತ್ತು ವ್ಯಕ್ತಿಗಳ ಸೂಕ್ಷ್ಮ ಮಾಹಿತಿಯನ್ನು ಒಳಗೊಂಡಿರುವ ನೂರಕ್ಕೂ ಹೆಚ್ಚು ವಿಭಾಗಗಳ ಡೇಟಾವನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿಯು ಹರಿಯಾಣದ ಫರಿದಾಬಾದ್‌ನಲ್ಲಿ "InspireWebz" ವೆಬ್‌ಸೈಟ್ ಮೂಲಕ ಕಾರ್ಯನಿರ್ವಹಿಸುತ್ತಿದ್ದು, ಕ್ಲೌಡ್ ಡ್ರೈವ್ ಲಿಂಕ್‌ಗಳ ಮೂಲಕ ಗ್ರಾಹಕರಿಗೆ ಡೇಟಾವನ್ನು ಮಾರಾಟ ಮಾಡುತ್ತಿದ್ದ. ಪೊಲೀಸರು ಎರಡು ಮೊಬೈಲ್ ಫೋನ್‌ಗಳು, ಎರಡು ಲ್ಯಾಪ್‌ಟಾಪ್ ಹಾಗೂ ಸರಕಾರಿ, ಖಾಸಗಿ ಸಂಸ್ಥೆಗಳು ಮತ್ತು ವ್ಯಕ್ತಿಗಳ ಸೂಕ್ಷ್ಮ ಮಾಹಿತಿಯನ್ನು ವಶಪಡಿಸಿಕೊಂಡಿದ್ದಾರೆ.



ಶನಿವಾರ ಕಾರ್ಯ ನಿಮಿತ್ತ ಮೈಸೂರಿಗೆ ಆಗಮಿಸಿದ ಬಿ.ವೈ. ವಿಜಯೇಂದ್ರ ಅವರನ್ನು ಬಿಜೆಪಿ ಯುವ ಮುಖಂಡರಾದ ಅರ್ಜುನ್, ಪಾರ್ಥ ಮತ್ತು ಲೋಹಿತ್ ಶರ್ಮ ಸನ್ಮಾನಿಸಿದರು.

ಜಿಲ್ಲಾ ಕಾಯಕ ಸಮಾಜಗಳ ಒಕ್ಕೂಟದ ಜಿಲ್ಲಾಧ್ಯಕ್ಷರಾಗಿ ಬೋರಪ್ಪ ಶೆಟ್ಟಿ ಆಯ್ಕೆ

ಮೈಸೂರು, ಏ.2– ಮೈಸೂರು ಜಿಲ್ಲಾ ಕಾಯಕ ಸಮಾಜಗಳ ಒಕ್ಕೂಟದ ಜಿಲ್ಲಾಧ್ಯಕ್ಷರನ್ನಾಗಿ ಬೋರಪ್ಪ ಶೆಟ್ಟಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.



ಬೋರಪ್ಪ ಶೆಟ್ಟಿ




ಡಾ.ವಿಜಯಕುಮಾರ್

ಕಾಯಕ ಸಮಾಜಗಳ ಮೈಸೂರು ಜಿಲ್ಲಾ ಅಧ್ಯಕ್ಷ ಸ್ಥಾನದಲ್ಲಿದ್ದ ಪುಟ್ಟಸಿದ್ದಶೆಟ್ಟರು, ಬಹುಜನ ಸಮಾಜ ಪಕ್ಷ ಸೇರ್ಪಡೆಯಾದ ಹಿನ್ನೆಲೆಯಲ್ಲಿ ಅವರನ್ನು ಇತ್ತೀಚೆಗೆ ನಡೆದ ಸಭೆಯಲ್ಲಿ ಜಿಲ್ಲಾ ಅಧ್ಯಕ್ಷ ಸ್ಥಾನದಿಂದ ಉಚ್ಛಾಟಿಸಿ, ಪ್ರಧಾನ ಕಾರ್ಯದರ್ಶಿಯಾಗಿದ್ದ ಬೋರಪ್ಪ ಶೆಟ್ಟಿ ಅವರನ್ನು ಜಿಲ್ಲಾಧ್ಯಕ್ಷ ಸ್ಥಾನಕ್ಕೆ ನೇಮಿಸಲಾಗಿದೆ.

ಹಾಗೆಯೇ ಮಾದೇವ ಗಾಣಿಗ ಅವರನ್ನು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ಡಾ.ಕೆ.ವಿಜಯಕುಮಾರ್ ಅವರನ್ನು ಗೌರವಾಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ.

1960ರ ದಶಕದ ಸ್ಟಾರ್ ಕ್ರಿಕೆಟಿಗ ಸಲೀಂ ದುರಾನಿ ನಿಧನ

ನವದೆಹಲಿ, ಏ.2– 1960ರ ದಶಕದಲ್ಲಿ ಭಾರತದ ಸ್ಟಾರ್ ಕ್ರಿಕೆಟಿಗರಾಗಿದ್ದ ಸಲೀಂ ದುರಾನಿ ನಿಧನರಾಗಿದ್ದಾರೆ. ಅವರಿಗೆ 88 ವರ್ಷ ವಯಸ್ಸಾಗಿತ್ತು. ಆಲ್‌ರೌಂಡರ್ ಕ್ರಿಕೆಟಿಗರಾಗಿದ್ದ ದುರಾನಿ ಅವರು ಬಾಲಿವುಡ್ ಸಿನಿಮಾದಲ್ಲೂ ನಟಿಸಿದ್ದಾರೆ. 1934ರ ಡಿಸೆಂಬರ್ 11ರಂದು ಅಫ್ಘಾನಿಸ್ತಾನದ ಕಾಬೂಲ್‌ನಲ್ಲಿ ಜನಿಸಿದ್ದ ಸಲೀಂ ದುರಾನಿ, ಈಗ ಗುಜರಾತ್‌ನ ಜಮ್ನಾಗರ್‌ದಲ್ಲಿ ತಮ್ಮ ಸಹೋದರ ಜಹಾಂಗೀರ್ ದುರಾನಿಯೊಂದಿಗೆ ವಾಸವಾಗಿದ್ದರು. ಈ ವರ್ಷದ ಜನವರಿಯಲ್ಲಿ ಕುಸಿದು ಬಿದ್ದು ತೊಡೆಯ ಮೂಳೆ ಮುರಿತಕ್ಕೆ ಒಳಗಾಗಿದ್ದರು. ಪ್ರಾಕ್ಸಿಮಲ್ ತೊಡೆ ಎಲುಬಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.



ದುರಾನಿ ಭಾರತ ತಂಡದಲ್ಲಿ ಬ್ಯಾಟ್ ಮತ್ತು ಬೌಲಿಂಗ್‌ನಿಂದಲೇ ಖ್ಯಾತಿ ಗಳಿಸಿದ್ದರು. ಎಡಗೈ ಬೌಲರ್ ಆಗಿದ್ದ ಸಲೀಂ, ಟೀಂ ಇಂಡಿಯಾ ಪರವಾಗಿ 29 ಟೆಸ್ಟ್‌ಗಳನ್ನು ಆಡಿದ್ದು, 1961– 62ರಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ 5 ಪಂದ್ಯಗಳ ಸರಣಿಯಲ್ಲಿ ಭಾರತ 2–0 ಅಂತರದಲ್ಲಿ ಗೆಲುವು ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಟೆಸ್ಟ್ ಸರಣಿಯ ಐತಿಹಾಸಿಕ ಗೆಲುವಿನಲ್ಲಿ ಕೋಲ್ಕತ್ತಾ ಮತ್ತು ಚೆನ್ನೈನಲ್ಲಿ ನಡೆದ ಪಂದ್ಯಗಳಲ್ಲಿ ಸಲೀಂ ಕ್ರಮವಾಗಿ 8 ಮತ್ತು 10 ವಿಕೆಟ್‌ಗಳನ್ನು ಪಡೆದಿದ್ದರು. ಇದು ಭಾರತ 2–0 ಅಂತರದಲ್ಲಿ ಇಂಗ್ಲೆಂಡ್ ವಿರುದ್ಧ ಗೆಲ್ಲಲು ಕಾರಣವಾಗಿತ್ತು. ದೇಶದ ಪರವಾಗಿ ಆಡಿದ 50 ಇನ್ನಿಂಗ್ಸ್ ಪೈಕಿ 7 ಅರ್ಧಶತಕ, ಒಂದು ಶತಕ ಬಾರಿಸಿರುವ ಸಲೀಂ ದುರಾನಿ 1,202 ರನ್ ಗಳಿಸಿದ್ದಾರೆ. ಇಂಗ್ಲೆಂಡ್ ವಿರುದ್ಧದ ಐತಿಹಾಸಿಕ ವಿಜಯದ ಒಂದು ದಶಕದ ನಂತರ, ಪೋರ್ಟ್ ಆಫ್ ಸ್ಪೇನ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಭಾರತ ತಂಡವನ್ನು ಗೆಲ್ಲಿಸುವಲ್ಲಿ ಶ್ರಮ ವಹಿಸಿದ್ದರು. ಅಂದಿನ ದೈತ್ಯ ದಂತಕಥೆಗಳಾದ ಕ್ಲೈವ್ ಲಾಯ್ಡ್ ಮತ್ತು ಸರ್ ಗಾರ್ಫೀಲ್ಡ್ ಸೋಬರ್ಸ್ ಇಬ್ಬರನ್ನೂ ಪಂದ್ಯದಲ್ಲಿ ಔಟ್ ಮಾಡಿದ್ದರು. ಇದಲ್ಲದೇ, ಸಲೀಂ ಅವರು ಉತ್ತಮ ಡ್ರೆಸ್ಸಿಂಗ್ ಶೈಲಿ ಮತ್ತು ಭಂಗಿಗೆ ಹೆಸರುವಾಸಿಯಾದ್ದರು.

ಸಮ್ಮಿಶ್ರ ಸರ್ಕಾರ ಉರುಳಿಸಿ, ಬಿಜೆಪಿ ಅಧಿಕಾರ ತಂದಿದ್ದಕ್ಕೆ ಇಂದು ವಿಶ್ವನಾಥ್ 'ಪಶ್ಚಾತ್ತಾಪ ಸತ್ಯಾಗ್ರಹ'

ಮೈಸೂರು, ಏ.2 (ಎಸ್‌ಪಿಎನ್)–ಜೆಡಿಎಸ್–ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರ ಉರುಳಿಸಿ, ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಕ್ಕೆ ಬಿಜೆಪಿ ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ನಾಳೆ (ಏ.3) 'ಪಶ್ಚಾತ್ತಾಪ ಸತ್ಯಾಗ್ರಹ' ನಡೆಸಲಿದ್ದಾರೆ.

ಈ ಸರ್ಕಾರ ರಚನೆಗೆ ನಾವೇ ಕಾರಣವಾಗಿದ್ದರಿಂದ ಸಾರ್ವಜನಿಕರ ಮುಂದೆ ಪಶ್ಚಾತ್ತಾಪ ವ್ಯಕ್ತಪಡಿಸಲು ಸಾಂಕೇತಿಕವಾಗಿ ಜಿಲ್ಲಾ ನ್ಯಾಯಾಲಯ ಎದುರಿನ ಮಹಾತ್ಮ ಗಾಂಧೀಜಿ ಪ್ರತಿಮೆ ಬಳಿ ಸೋಮವಾರ ಬೆಳಗ್ಗೆ 11.30ರಿಂದ 12.30ರವರೆಗೆ 'ಪಶ್ಚಾತ್ತಾಪ ಧರಣಿ' ಹಮ್ಮಿಕೊಳ್ಳಲಾಗಿದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 2018ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಸೋತು ಬಹುಮತ ಕಳೆದುಕೊಂಡಿತು. ಆಗ ಅನಿವಾರ್ಯವಾಗಿ ಜೆಡಿಎಸ್–ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರ ರಚನೆ ಮಾಡಲಾಯಿತು. ಈ ಸರ್ಕಾರದಲ್ಲೂ ಉಭಯ ಪಕ್ಷದ ಸದಸ್ಯರಿಗೆ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗದ ಪರಿಸ್ಥಿತಿಯಿತ್ತು. ಈ ಮನಸ್ಥಿತಿಯಲ್ಲೇ 2019ರಲ್ಲಿ ನಡೆದ ಲೋಕಸಭಾ ಚುನಾವಣೆ ಎದುರಿಸಲಾಯಿತು. ಆಗ ಕಾಂಗ್ರೆಸ್–ಜೆಡಿಎಸ್ ತಲಾ ಒಂದೊಂದು ಸ್ಥಾನಗಳನ್ನು ಗೆದ್ದು, ಹೀನಾಯ ಸೋಲು



ಕಂಡಿತಲ್ಲದೆ, ರಾಜ್ಯದ ಅಭಿವೃದ್ಧಿ ಕುಂಠಿತಗೊಂಡಿತು. ಆಗ ರಾಕ್ಷಸ ಮನಸ್ಥಿತಿಯ ಸರ್ಕಾರ ರಚನೆಯಾಯಿತು ಎಂಬ ಭಾವನೆ ಶಾಸಕರಲ್ಲಿ ಮೂಡಿತು.

ಆಗ ಅಂದಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಧೋರಣೆಯನ್ನು ವಿರೋಧಿಸಿ ಸಮಾನ ಮನಸ್ಕ ಶಾಸಕರೆಲ್ಲಾ ಸೇರಿ, ಸಮ್ಮಿಶ್ರ ಸರ್ಕಾರದಿಂದ ಹೊರಬಂದು ಬಿಜೆಪಿ ಸರ್ಕಾರ ರಚನೆಗೆ ಕಾರಣವಾದೆವು. ಅಲ್ಲದೆ, ಕೇಂದ್ರದಲ್ಲೂ ಬಿಜೆಪಿ, ರಾಜ್ಯದಲ್ಲೂ ಬಿಜೆಪಿ ಸರ್ಕಾರ ರಚನೆಯಾದರೆ, ರಾಜ್ಯದ ಅಭಿವೃದ್ಧಿ ಇಮ್ಮಡಿಗೊಳಿಸುವ ಕನಸ್ಸಿನೊಂದಿಗೆ ಸಮ್ಮಿಶ್ರ ಸರ್ಕಾರಕ್ಕೆ ಕಾರಣವಾದೆವು. ಆದರೆ, ನಮ್ಮ ಕನಸುಗಳೆಲ್ಲಾ ನುಚ್ಚು ನೂರಾಗಿದೆ ಎಂದು ಬೇಸರ ಹೊರ ಹಾಕಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚನೆಯಾದ ಮೇಲೆ, ಡಬಲ್ ಇಂಜಿನ್ ಸರ್ಕಾರದಲ್ಲಿ ರಾಜ್ಯ ಅಭಿವೃದ್ಧಿಗೆ ಹೆಸರುವಾಸಿಯಾಗಬೇಕಿತ್ತು. ಆದರೆ, ಹೆಸರುವಾಸಿಯಾಗಿದ್ದು, ಭ್ರಷ್ಟಾಚಾರ, ಕೋಮು ಸಂಘರ್ಷಕ್ಕೆ ಸಾಕ್ಷಿಯಾಗಿದೆ. ಈ ಹಿಂದೆ ಮಹಾತ್ಮಗಾಂಧೀಜಿಯವರು ತಮ್ಮ ಕೆಲಸದಲ್ಲಿ ಸ್ವಲ್ಪ ಏರುಪೇರಾದರು ಆ ಘಟನೆಗಳನ್ನು ತಮ್ಮ ಆತ್ಮದಲ್ಲಿ ಪರಿಶೀಲಿಸಿಕೊಂಡು ತಪ್ಪಾಗಿದ್ದರೆ, ತಮ್ಮ ತಪ್ಪಿನ ಅರಿವಾಗಿದ್ದರೆ, ಪ್ರಾಯಶ್ಚಿತ್ತವಾಗಿ ಪಶ್ಚಾತ್ತಾಪ ಸತ್ಯಾಗ್ರಹ ಹಮ್ಮಿಕೊಳ್ಳುತ್ತಿದ್ದರು. ಈ ಹಿನ್ನೆಲೆಯಲ್ಲಿ ನಾನೂ ಸಹ ಬಿಜೆಪಿ ಸರ್ಕಾರ ರಚನೆಗೆ ಮುಂಚೂಣಿಯಲ್ಲಿದ್ದು, ಕಾರಣವಾಗಿರುವುದರಿಂದ ಮಹಾತ್ಮ ಗಾಂಧೀಜಿಯವರಂತೆ ನಾನೂ ಸಹ 'ಪಶ್ಚಾತ್ತಾಪ ಸತ್ಯಾಗ್ರಹ'ವನ್ನು ಪ್ರಗತಿಪರರು, ಕನ್ನಡ ಪರ ಹೋರಾಟಗಾರರು ಹಾಗೂ ಸಾಹಿತಿಗಳ ಸಮ್ಮುಖದಲ್ಲಿ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಅಡಗೂರು ಹೆಚ್.ವಿಶ್ವನಾಥ್ ತಿಳಿಸಿದರು.

ತನಿಖಾ ಸಂಸ್ಥೆಗಳ ದುರ್ಬಳಕೆ: ಏ.5ಕ್ಕೆ ಅರ್ಜಿ ವಿಚಾರಣೆ

ನವದೆಹಲಿ,ಏ.2–ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂದು ದೂರಿ ಕಾಂಗ್ರೆಸ್ ನೇತೃತ್ವದಲ್ಲಿ 14 ಪಕ್ಷಗಳು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಏ.5ರಂದು ನಡೆಸಲಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ.ಪಾರ್ದೀವಾಲಾ ಅವರಿರುವ ನ್ಯಾಯಪೀಠವು ಅರ್ಜಿ ವಿಚಾರಣೆ ನಡೆಸಲಿದೆ ಎಂದು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಕೇಂದ್ರ ಸರ್ಕಾರವು ವಿರೋಧ ಪಕ್ಷಗಳ ನಾಯಕರ ವಿರುದ್ಧ ಈ ತನಿಖಾ ಸಂಸ್ಥೆಗಳನ್ನು ಮನಬಂದಂತೆ ಬಳಸಿಕೊಳ್ಳುತ್ತಿದೆ ಎಂದು ಅರ್ಜಿಯಲ್ಲಿ ದೂರಲಾಗಿದೆ. ಭವಿಷ್ಯದಲ್ಲಿ ಇಂತಹ ದುರ್ಬಳಕೆ ತಡೆಯುವ ಸಲುವಾಗಿ ಮಾರ್ಗಸೂಚಿಗಳನ್ನು ರಚಿಸುವಂತೆಯೂ ವಿಪಕ್ಷಗಳು ಕೋರಿವೆ.



ಮೈಸೂರಿನ ಹಿನಕಲ್‌ನಲ್ಲಿರುವ ವಾತ್ಸಲ್ಯ ಸೇವಾಶ್ರಮದಲ್ಲಿ ತ್ರಿವಿಧ ದಾಸೋಹಿ ಡಾ.ಶಿವಕುಮಾರ ಸ್ವಾಮೀಜಿ ಜಯಂತಿ ಆಚರಿಸಲಾಯಿತು. ಇದೇ ವೇಳೆ ಆಶ್ರಮದ ಹಿರಿಯರಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಸಿಹಿ ವಿತರಿಸಲಾಯಿತು. ಚಿತ್ರದಲ್ಲಿ ಸಂಸ್ಥೆಯ ಅಧ್ಯಕ್ಷ ಎ.ಸಿ. ರವಿಕುಮಾರ್, ಸಿಸ್ಟರ್ ಶ್ರೀಮತಿ ನಾಗರತ್ನ, ಡಾ.ವೆಂಕಟೇಶ್, ಶಶಿಕಲಾ, ಲಕ್ಷ್ಮಿ, ಯಶೋಧ ಅವರನ್ನು ಕಾಣಬಹುದು.



ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಪಕ್ಷದ ಮುಖಂಡರು ಶಾಸಕ ಎಲ್.ನಾಗೇಂದ್ರ ಅವರ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಯಾದರು. ಲೋಕನಾಯಕನಗರದ ನೆಲಮನೆ ಕೃಷ್ಣೇಗೌಡ, ಭೈರವೇಶ್ವರನಗರದ ಲಾರಿ ಮಂಜಣ್ಣ, ಬಿ.ಎಂಶ್ರೀನಗರದ ನಾಗರಾಜು, ಗೋಪಾಲಕೃಷ್ಣ, ನಾಗರಾಜ, ಕುಮಾರ್, ಶಿವಮಾದಪ್ಪ, ಸಿ.ಎಂ.ಕೃಷ್ಣ, ಯೋಗೇಶ್ ಇನ್ನಿತರರಿದ್ದಾರೆ.

'ಮುಕ್ತಕ ವಚನ ಭಾರತ', 'ಮುಕ್ತಕ ಪಂಚರತ್ನ ಮಾಲೆ' ಕೃತಿ ಬಿಡುಗಡೆ

ಮೈಸೂರು,ಏ.2(ಎಸ್‌ಪಿಎನ್)–ಲೇಖಕ ಎಂ.ಮುತ್ತುಸ್ವಾಮಿ ರಚಿತ 'ಮುಕ್ತಕ ವಚನ ಭಾರತ' ಮತ್ತು ಕವಯತ್ರಿ ಕಮಲ ರಾಜೇಶ್ ಸಂಪಾದಿತ 'ಮುಕ್ತಕ ಪಂಚರತ್ನ ಮಾಲೆ' ಪುಸ್ತಕವನ್ನು ಹಿರಿಯ ಸಾಹಿತಿ ಜಿ.ಎಸ್.ಭಟ್ ಬಿಡುಗಡೆಗೊಳಿಸಿದರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕಸಾಪ, ಹಿಮಾಲಯ ಪ್ರತಿಷ್ಠಾನ ಹಾಗೂ ರೋಟರಿ ಕ್ಲಬ್ ಆಫ್ ಮೈಸೂರು ಸ್ಟಾರ್ಸ್ ಸಹಯೋಗದೊಂದಿಗೆ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿ, ಮಾತನಾಡಿದರು.

ಇಂದು ಬಿಡುಗಡೆಗೊಂಡಿರುವ ಲೇಖಕ ಎಂ.ಮುತ್ತುಸ್ವಾಮಿ ರಚಿತ 'ಮುಕ್ತಕ ವಚನ ಭಾರತ' ಮತ್ತು ಕವಯತ್ರಿ ಕಮಲ ರಾಜೇಶ್ ಸಂಪಾದಿತ 'ಮುಕ್ತಕ ರತ್ನ' ಕೃತಿಗಳು ಓದುಗರಿಗೆ ಉಪಯುಕ್ತವಾಗಿವೆ. ಇಂತಹ ಕೃತಿಗಳನ್ನು ಸರ್ಕಾರವೇ ಸಗಟು ಖರೀದಿ ಯೋಜನೆಯಡಿ ಖರೀದಿಸಬೇಕು. ಆದರೆ, ಇತ್ತೀಚೆಗೆ ಇದು ಸಾಧ್ಯವಾಗುತ್ತಿಲ್ಲ. ಹಾಗಾಗಿ ಪುಸ್ತಕ ಪ್ರಕಟಣೆಗೆ ಪ್ರೋತ್ಸಾಹ ಇಲ್ಲದಿರುವುದರಿಂದ ಕವನ ಸಂಕಲನ, ಸಾಹಿತ್ಯ ಬರೆದು ಪ್ರಕಟಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಸಾಹಿತ್ಯ ರಚನೆಗೆ ಮುಂದಾಗುವ ಯುವಕರನ್ನು ಸದಾ ಬೆನ್ನುಲುಬವಾಗಿ ನಿಂತು ಪ್ರೋತ್ಸಾಹಿಸುವುದು ಕಸಾಪದ ಉದ್ದೇಶವಾಗಿದೆ. ಯುವ ಸಾಹಿತಿಗಳನ್ನು ಪ್ರೋತ್ಸಾಹಿಸುವುದರಿಂದ ಕನ್ನಡ ನಾಡು–ನುಡಿ, ಜಲ ಹಾಗೂ ನೆಲದ ಸಮಸ್ಯೆ ಬಗ್ಗೆ ಬರಹಗಾರರು ಸಮಾಜಮುಖಿಗೊಳಿಸುತ್ತಾರೆ. ಇದಕ್ಕೆ ಪ್ರೋತ್ಸಾಹಿಸುವುದು ನನ್ನ ಆದ್ಯ ಕರ್ತವ್ಯ ಎಂದು ಹೇಳಿದರು.

ಈ ವೇಳೆ ಕವಯತ್ರಿ ಕಮಲ ರಾಜೇಶ್, ಹಿರಿಯ ಸಾಹಿತಿಗಳಾದ ಮಾಲತಿ ಕೃಷ್ಣಪ್ರಸಾದ್, ಲಲಿತಾ, ಪ್ರತಿಮಾ, ಎಂ.ಮುತ್ತುಸ್ವಾಮಿ ಹಾಗೂ ರಾಷ್ಟ್ರೀಯ ಕಬ್ಬಡಿ ಕ್ರೀಡಾಪಟು ಹರ್ಷಿತಾ ಇವರಿಗೆ ಅಭಿನಂದನೆ ಸಲ್ಲಿಸಲಾಯಿತು. ವೇದಿಕೆಯಲ್ಲಿ ಕವಯತ್ರಿ ಡಾ.ಲತಾ ರಾಜಶೇಖರ್ ಅವರು ಮುಕ್ತಕ ಪಂಚರತ್ನಗಳು ಕೃತಿ ಕುರಿತು ಮಾತನಾಡಿದರು. ಮುಕ್ತಕ ವಚನ ಭಾರತ ಕೃತಿ ಕುರಿತು ಹಿರಿಯ ಸಾಹಿತಿ ಡಾ.ಲೀಲಾ ಪ್ರಕಾಶ್ ಮಾತನಾಡಿದರು. ವಿಪ್ರ ಮುಖಂಡರಾದ ಕೆ.ರಘುರಾಂ ವಾಜಪೇಯಿ, ನಟರಾಜ್ ಜೋಯಿಸ್, ರೋಟರಿ ಕ್ಲಬ್ ಆಫ್ ಮೈಸೂರು ಸ್ಟಾರ್ಸ್ ಅಧ್ಯಕ್ಷ ಸಂತೋಷ ಗೌಡ, ಹಿಮಾಲಯ ಪ್ರತಿಷ್ಠಾನದ ಎಸ್.ಅನಂತ ಇನ್ನಿತರರಿದ್ದರು.

ಜೆಡಿಎಸ್ ಶಾಸಕ ಶಿವಲಿಂಗೇಗೌಡ ರಾಜೀನಾಮೆ

ಶಿರಸಿ, ಏ.2–ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡಿದ್ದ ಅರಸಿಕೆರೆ ಜೆಡಿಎಸ್ ಶಾಸಕ ಶಿವಲಿಂಗೇಗೌಡ ಭಾನುವಾರ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರ್ಪಡೆಯ ದಾರಿ ಸುಗಮ ಮಾಡಿಕೊಂಡರು. ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಶಿರಸಿ ಕಚೇರಿಗೆ ಬಂದ ಶಿವಲಿಂಗೇಗೌಡ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಿದರು. ಶಿವಲಿಂಗೇಗೌಡರ ಜೊತೆ 300ಕ್ಕೂ ಅಧಿಕ ಬೆಂಬಲಿಗರು ಆಗಮಿಸಿದ್ದರು. 2008ರಲ್ಲಿ ಮೊದಲ ಬಾರಿ ಶಾಸನ ಸಭೆಗೆ ಆಯ್ಕೆಯಾಗಿದ್ದ ಅವರು 2018ರ ಚುನಾವಣೆಯಲ್ಲಿ ಅರಸಿಕೆರೆ ಕ್ಷೇತ್ರದಲ್ಲಿ 93,986 ಮತಗಳನ್ನು ಪಡೆದು ಜಯಗಳಿಸಿದ್ದರು. ಪಕ್ಷದಲ್ಲಿ ನಿರೀಕ್ಷಿತ ಮನ್ನಣೆ, ಸ್ಥಾನಮಾನ ಸಿಗದ ಕಾರಣ ಅವರು ಜೆಡಿಎಸ್ ತೊರೆಯಲು ನಿರ್ಧರಿಸಿದ್ದರು. ನಾಯಕರ ಜೊತೆ ಭಿನ್ನಮತ ಇತ್ತು. ಸಾಕಷ್ಟು ಮಾತುಕತೆಯ ನಂತರವೂ ಯಾವುದೇ ಪ್ರಯೋಜನವಾಗಲಿಲ್ಲ. ಪಕ್ಷ ಬಿಡುವುದು ಇಲ್ಲವೇ ಪಕ್ಷಾಂತರವೇ ಉಳಿದ ಮಾರ್ಗವಾಗಿದೆ. ಕ್ಷೇತ್ರದ ಜನರ ಅಭಿಪ್ರಾಯದಂತೆ ಕಾಂಗ್ರೆಸ್ ಸೇರಲಿದ್ದೇನೆ ಎಂದರು.



ಕ್ಷೇತ್ರಕ್ಕೆ ತೆರಳಿ ಜನರ ಬಳಿ ಬಹುಮತ ಕೇಳುತ್ತೇನೆ. ಈಗಾಗಲೇ ಕಾಂಗ್ರೆಸ್ 2ನೇ ಪಟ್ಟಿಯಲ್ಲಿ ನನ್ನ ಹೆಸರು ಅಂತಿಮವಾಗಿದ್ದು, ನಿಶ್ಚಿತವಾಗಿ ಗೆಲುವು ಪಡೆಯುತ್ತೇನೆ. ಜೆಡಿಎಸ್ ಪಕ್ಷಕ್ಕೆ ಭವಿಷ್ಯವಿಲ್ಲ ಎಂದರು. ರಾಜಕೀಯದಲ್ಲಿ ಯಾರು ಬೇಕಾದರೂ ಪಕ್ಷಾಂತರ ಮಾಡುತ್ತಾರೆ. ಅಣ್ಣತಮ್ಮಂದಿರೇ ಋಣ ತೀರಿದ ಮೇಲೆ ಅವರವರ ದಾರಿಗೆ ಹೋಗುತ್ತಾರೆ. ನಾನು ಕ್ಷೇತ್ರದ ಜನರು ಹೇಳಿದಂತೆ ರಾಜೀನಾಮೆ ನೀಡಿದ್ದೇನೆ. ಪಕ್ಷಾಂತರದ ಬಗ್ಗೆ ಯಾರೂ ತಪ್ಪು ತಿಳಿಯಬಾರದು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ವಿಜ್ಞಾನಿ ಡಾ.ಪ್ರಸನ್ನ ಸಂತೇಕಡೂರು ಅವರಿಗೆ ಸರ್ ಸಿ.ವಿ. ರಾಮನ್ ಪ್ರಶಸ್ತಿ

ಮೈಸೂರು,ಏ.2– ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕ, ವಿಜ್ಞಾನಿ, ಲೇಖಕ ಡಾ. ಪ್ರಸನ್ನ ಸಂತೇಕಡೂರು ಅವರು ಪ್ರತಿಷ್ಠಿತ ಸರ್ ಸಿ.ವಿ.ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು ವೈದ್ಯಕೀಯ ವಿಜ್ಞಾನ ಕ್ಷೇತ್ರಕ್ಕೆ ಅದರಲ್ಲೂ ಲಿವರ್ ಕ್ಯಾನ್ಸರ್ ಕುರಿತ ಪ್ರಸನ್ನ ಅವರ ಸಂಶೋಧನೆ ಮತ್ತು ಪ್ರಮುಖ ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ಕಳೆದ ವಾರ ಭಾರತ ರತ್ನ ಡಾ.ಸಿ.ಎನ್.ಆರ್.ರಾವ್, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್, ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ಗೋವಿಂದನ್ ರಂಗರಾಜನ್, ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಕಾರ್ಯದರ್ಶಿ ಡಾ.ಅಶೋಕ್ ರಾಯಚೂರು ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್ ನಾರಾಯಣ ಅವರ ಸಮ್ಮುಖದಲ್ಲಿ ಭಾರತೀಯ ವಿಜ್ಞಾನ ಮಂದಿರದ ಜೆ.ಎನ್.ಟಾಟಾ ಸಭಾಂಗಣದಲ್ಲಿ ಈ ಪ್ರಶಸ್ತಿಯನ್ನು ನೀಡಲಾಯಿತು.



ಡಾ. ಪ್ರಸನ್ನ ಅವರು ಕಳೆದ ಇಪ್ಪತ್ತು ವರ್ಷಗಳಿಂದ ಕ್ಯಾನ್ಸರ್ ಅದರಲ್ಲೂ ಲಿವರ್ ಕ್ಯಾನ್ಸರಿಗೆ ಸಂಬಂಧಪಟ್ಟ ಹಲವಾರು ಮಹತ್ತರವಾದ ಲೇಖನಗಳನ್ನು ಪ್ರಕಟಿಸಿ ಅಮೆರಿಕಾದಲ್ಲಿ ನೆಲೆಸಿರುವ ಭಾರತೀಯ ಮೂಲದ ಕ್ಯಾನ್ಸರ್ ವಿಜ್ಞಾನಿಗಳ ಒಕ್ಕೂಟದಿಂದ ಯುವ ವಿಜ್ಞಾನಿ ಪ್ರಶಸ್ತಿ, ಅಮೆರಿಕಾದ ಕ್ಯಾನ್ಸರ್ ಅಸೋಸಿಯೇಷನ್‌ನಿಂದ ಸ್ಕಾಲರ್ ಇನ್ ಟ್ರೈನಿಂಗ್ ಪ್ರಶಸ್ತಿ, ಮ್ಯಾಸ್ಸಿ ಕ್ಯಾನ್ಸರ್ ಸೆಂಟರಿನಿಂದ ಎಕ್ಸಲೆನ್ಸ್ ಇನ್ ಕ್ಯಾನ್ಸರ್ ರಿಸರ್ಚ್ ಅವಾರ್ಡ್ ಪಡೆದಿದ್ದಾರೆ.

ಸುಮಾರು ಹತ್ತು ವರ್ಷಗಳ ಕಾಲ ಅಮೇರಿಕಾದಲ್ಲಿ ನೆಲೆಸಿದ್ದ ಪ್ರಸನ್ನ ಅವರು ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯಿಂದ ವಿದೇಶಗಳಲ್ಲಿರುವ ಭಾರತೀಯ ಪ್ರತಿಭಾವಂತ ವಿಜ್ಞಾನಿಗಳಿಗೆ ಕೊಡಲ್ಪಡುವ ಹೆಸರಾಂತ ರಾಮಲಿಂಗಸ್ವಾಮಿ ಫೆಲೋಶಿಪನ್ನು ಪಡೆದು ಮಾತೃಭೂಮಿಗೆ ಹಿಂತಿರುಗಿ ತಮ್ಮ ಸಂಶೋಧನೆಯನ್ನು ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯದ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಮಾಲಿಕ್ಯುಲರ್ ಬಯಾಲಜಿ ಅಂಡ್ ರಿಜೆನೆರೇಟಿವ್ ಮೆಡಿಸಿನ್ ಮತ್ತು ಜೀವರಸಾಯನ ಶಾಸ್ತ್ರ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಮುಂದುವರೆಸಿದ್ದಾರೆ.

ರಾಮಲಿಂಗಸ್ವಾಮಿ ಫೆಲೋಶಿಪನ್ನು ಪಡೆದಿರುವ ಕನ್ನಡಿಗರ ಸಂಖ್ಯೆಯೂ ಬೆರಳೆಣಿಕೆಯಷ್ಟು ಮಾತ್ರ. ಮೈಸೂರಿನಲ್ಲಿ ವಿಜ್ಞಾನ ಪ್ರಚಾರದಲ್ಲಿ ತೊಡಗಿಸಿಕೊಳ್ಳುವ ಮೂಲಕ ಮೈಸೂರು ಸೈನ್ಸ್ ಫೌಂಡೇಶನ್ ಪ್ರಶಸ್ತಿ ಕೂಡ ಪಡೆದಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

3.4.2023 ಸೋಮವಾರ, ಮಳೆ ನಕ್ಷತ್ರ: ರೇವತಿ, 31.03.2023 ರಿಂದ 13.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

- **ಬಸವ ಜಯಂತ್ಯೋತ್ಸವ ಆಚರಣಾ ಸಮಿತಿ :** 'ಬಸವ ಜಯಂತಿ' ಆಚರಣೆ ಕುರಿತು ಚರ್ಚಿಸಲು ಪೂರ್ವಭಾವಿ ಸಭೆ, ಸಾನ್ನಿಧ್ಯ: ಶ್ರೀ ಹೊಸಮಠದ ಶ್ರೀ ಚಿದಾನಂದ ಮಹಾಸ್ವಾಮಿಗಳು, ಸ್ಥಳ: ಶ್ರೀ ಹೊಸಮಠದ ನಟರಾಜ ಸಭಾ ಭವನ, ಬೆಳಗ್ಗೆ 10 ಗಂಟೆಗೆ.
- **ನೃತ್ಯಗಿರಿ, ಪ್ರದರ್ಶನ ಕಲೆಗಳ ಸಂಶೋಧನಾ ಕೇಂದ್ರ, ಮೈಸೂರು :** ಶ್ರೀ ವಿದ್ಯಾ ವಿಶಾರದ ಶ್ರೀ ಜಯಚಾಮರಾಜೇಂದ್ರ ವಾಗ್ಗೇಯ ವೈಭವ ಗ್ರಂಥ ಲೋಕಾರ್ಪಣೆ, ಗ್ರಂಥ ಲೋಕಾರ್ಪಣೆ: ಅಂತರರಾಷ್ಟ್ರೀಯ ಖ್ಯಾತಿಯ ಪಿಟೀಲು ವಾದಕರಾದ ಮೈಸೂರು ಎಂ. ನಾಗರಾಜ್ ಮತ್ತು ಡಾ. ಮೈಸೂರು ಎಂ. ಮಂಜುನಾಥ್, ಕೃತಿ ಪರಿಚಯ: ನೂಪುರ ಸಂಸ್ಥೆಯ ನಿರ್ದೇಶಕ ಪ್ರೊ. ಕೆ. ರಾಮಮೂರ್ತಿ ರಾವ್, ಅಧ್ಯಕ್ಷತೆ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾಂತ ಕಾರ್ಯಕಾರಿಣಿ ಸದಸ್ಯ ಮ. ವೆಂಕಟರಾಮು, ಸ್ಥಳ: ಗಾನಭಾರತೀ, ರಮಾ ಗೋವಿಂದ ಕಲಾವೇದಿಕೆ, ಸಂಜೆ 5.30ಕ್ಕೆ.

ನಗರದಲ್ಲಿ ವಿವಿಧೆಡೆ ಶ್ರೀರಾಮೋತ್ಸವ



- **ಶ್ರೀ ರಾಮ ಭಕ್ತವೃಂದ ಸೇವಾ ಟ್ರಸ್ಟ್ :** ಶ್ರೀ ರಾಮನವಮಿ, ಬೆಳಗ್ಗೆ 8 ಗಂಟೆಗೆ ಶ್ರೀ ಹನುಮಂತೋತ್ಸವ, ಶ್ರೀ ಹನುಮಂತ ದೇವರಿಗೆ ಅಭಿಷೇಕ, ಅಲಂಕಾರ, ಶ್ರೀ ಹನುಮಾನ್ ಚಾಲೀಸ್ ಪಾರಾಯಣ, ಭಜನೆ ಕಾರ್ಯಕ್ರಮ, ಬೆಳಗ್ಗೆ 11ಕ್ಕೆ ದೇವಸ್ಥಾನದ ಪ್ರಾಂಗಣದಲ್ಲಿ ಶ್ರೀ ಹನುಮಂತ ದೇವರಿಗೆ ರಥೋತ್ಸವ, ಮಧ್ಯಾಹ್ನ 12 ಗಂಟೆಗೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಟ್ರಸ್ಟ್ ಆವರಣ, ಜೆ.ಪಿ.ನಗರ.
- **ಶ್ರೀ ರಾಮ ಸೇವಾ ಚಾರಿಟಬಲ್ ಟ್ರಸ್ಟ್‌ನ ಅಂಗ ಸಂಸ್ಥೆ ಶ್ರೀ ರಾಮ ಸೇವಾ ಮಂಡಲಿ :** 70ನೇ ವರ್ಷದ ಶ್ರೀ ರಾಮೋತ್ಸವ, ಸಂಜೆ 6.30ಕ್ಕೆ ದ್ವಂದ್ವ ಗಾಯನ: ವಿದುಷಿ ಶ್ರೀಮತಿ ವಿಪಂಚೀ ರಘುರಾಮ್ (ಬೆಂಗಳೂರು) ಮತ್ತು ವಿದುಷಿ ಕುಮಾರಿ ಮಹಿತೀ ರಘುರಾಮ್ (ಮೈಸೂರು) ಅವರಿಂದ, ಪಿಟೀಲು– ವಿದ್ವಾನ್ ಅಮೋಘ್ ನಡದೂರ್, ಮೃದಂಗ– ವಿದ್ವಾನ್ ಎಸ್. ಕುಮಾರಸ್ವಾಮಿ, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ,
- **ಶ್ರೀ ಕಾಶೀಮಠದ ಶ್ರೀರಾಮ ಮಂದಿರ :** ರಾಮನವಮಿ ವಿಶೇಷ ಕಾರ್ಯಕ್ರಮ, ಮೈಸೂರಿನ ಕುಮಾರಿ ಸಂಧ್ಯಾ ಭಟ್ ಅವರಿಂದ ಭಜನೆ, ಸ್ಥಳ: ಶ್ರೀರಾಮ ಮಂದಿರ, ಶಿವರಾಮ ಪೇಟೆ, ಸಂಜೆ 6.30ರಿಂದ.
- **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ಶೋಭಕೃತ್ ಸಂವತ್ಸರದ 133ನೇ ವರ್ಷದ ಶ್ರೀ ರಾಮೋತ್ಸವ, ಶಾಸ್ತ್ರೀಯ ಸಂಗೀತ– ಮಲ್ಲಾಡಿ ಬ್ರದರ್ಸ್, ಸ॥ ವಿ॥ ಶ್ರೀರಾಮ ಪ್ರಸಾದ್ ಮತ್ತು ಸ॥ ವಿ॥ ರವಿಕುಮಾರ್ ಅವರಿಂದ, ಪಿಟೀಲು: ವಿ॥ ಎಂಬರ್ ಕಣ್ಣನ್, ಮೃದಂಗ: ವಿ॥ ಕೆ.ವಿ. ಪ್ರಸಾದ್, ಖಂಜೀರ: ವಿ॥ ಗಿರಿಧರ್ ಉಡುಪ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮ ಪೇಟೆ, ಸಂಜೆ 6.30ಕ್ಕೆ.
- **ಶ್ರೀ ರಾಮ ಮಂದಿರ :** ಶ್ರೀ ರಾಮನವಮಿ, ಕುಮಾರಿ ಅರ್ಚನ ಮತ್ತು ಕುಮಾರಿ ಅನುಷಾ ಅವರಿಂದ ಸ್ಯಾಕ್ಸೋಫೋನ್ ವಾದನ, ಸ್ಥಳ: ಶ್ರೀ ರಾಮ ಮಂದಿರ, ಜಯನಗರ, ಸಂಜೆ 7 ಗಂಟೆಗೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ– ಡಾ. ಗಜಾನನ ಶರ್ಮ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಕೆ.ಟಿ. ಉದಯಕಿರಣ್, ಕೆ.ಬಿ. ಸುನೀತಾ ಆಚಾರ್ಯ, ವ್ಯಾಖ್ಯಾನ– ಡಾ. ಜ್ಯೋತಿ ಶಂಕರ್, 7.15 ಭಾವಗೀತೆ– ರಾಜು ಅನಂತಸ್ವಾಮಿ, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಮೃದಂಗ ಕಲಾವಿದರಾದ ಟಿ.ಎಂ. ಪುಟ್ಟಸ್ವಾಮಯ್ಯ ಅವರೊಂದಿಗೆ ಆರ್.ಎ. ಕೇಸರಿ ಅವರು ನಡೆಸಿದ್ದ ಸಂವಾದ, 10.00 ಲಯ ಸಂಭ್ರಮ– "ಜನಪದ ಲಯಕ್ಕೆ ಹೊಸ ಜಾಯಮಾನ" ಭಾಗವಹಿಸುವವರು, ಖ್ಯಾತ ಹಿನ್ನಲೆ ಗಾಯಕರಾದ ರಘುದೀಕ್ಷಿತ್, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ.

ಮಧ್ಯಾಹ್ನ: 12.30 ದೇವರನಾಮ: ನಿತಿನ್ ರಾಜಾರಾಂ ಶಾಸ್ತ್ರಿ, 12.45 ನಮ್ಮ ಆರೋಗ್ಯ: ರಾಷ್ಟ್ರೀಯ ಅಂಧತ್ವ ನಿವಾರಣಾ ಸಪ್ತಾಹದ ಸಂದರ್ಭದಲ್ಲಿ ಮಕ್ಕಳ ಕಣ್ಣಿನ ಆರೋಗ್ಯ ರಕ್ಷಣೆ ಕುರಿತು ಡಾ. ಎಸ್. ಬಾಲಸುಬ್ರಹ್ಮಣ್ಯ ಅವರೊಂದಿಗೆ ಮಾತುಕತೆ, 1.20 ಭಾವಗೀತೆ– ಸಾವಿತ್ರಿ ಪ್ರಭಾಕರ್, 3.00 ಎಂ.ಕೆ. ಸರಸ್ವತೀ– ವೀಣಾವಾದನ, 4.00 ಮಹಿಳಾರಂಗ 'ಡಾಕ್ಟರ್ ಸಮಯ' ನೇರ ಫೋನ್ ಇನ್ ಕಾರ್ಯಕ್ರಮ, ವಿಷಯ– ಮಹಿಳೆಯರ ಸಾಮಾನ್ಯ ಆರೋಗ್ಯ ಸಮಸ್ಯೆಗಳು, ಭಾಗವಹಿಸುವವರು ಡಾ– ಪಂಕಜ, ಪ್ರಸ್ತುತಿ– ಕೆ.ಬಿ. ಮೀನಾ.

ಸಂಜೆ: 6.50 ಕೃಷಿರಂಗ 'ಕಿಸಾನ್ ವಾಣಿ' ಟೊಮ್ಯಾಟೋ ಹಾಗೂ ಇತರೆ ತರಕಾರಿ ಬೆಳೆಗಳ ಬೇಸಾಯದಲ್ಲಿ ನಿರತರಾಗಿರುವ ಶ್ಯಾದನಹಳ್ಳಿಯ ಕೃಷಿಕ ಸಿದ್ದರಾಜು ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎಸ್.ಸಿ. ಹೇಮಕುಮಾರ್. **ರಾತ್ರಿ:** 9.30 ಹಳ್ಳಿ ಹಾಡು: ಭಾಗವಹಿಸುವವರು– ಹಳೇಪುರದ ತಂಬೂರಿ ಮಾದಶೆಟ್ಟಿ, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸವಿನೆನಪು.

ತ್ರಿವೇಣಿ ಸಂಗಮದ ಪುಣ್ಯಕ್ಷೇತ್ರ ತಿ.ನರಸೀಪುರದಲ್ಲಿ ಕದನ ಕುತೂಹಲ



2018ರ ಮತದಾನ

ಒಟ್ಟು ಮತ
1,98,434

ಚಲಾವಣೆಯಾಗಿದ್ದು
1,54,736

ಶೇಕಡ **77.98**

ವರ್ಷ	ಗೆದ್ದವರು	ಪಕ್ಷ	ಪಡೆದ ಮತ
1952	ಎಸ್.ಶ್ರೀನಿವಾಸ ಅಯ್ಯಂಗಾರ್	ಕೆಎಂಪಿಪಿ	....
1957	ಎಂ.ರಾಜಶೇಖರ ಮೂರ್ತಿ	ಕಾಂಗ್ರೆಸ್	14,028
1962	ಎಂ.ರಾಜಶೇಖರಮೂರ್ತಿ	ಕಾಂಗ್ರೆಸ್	15,469
1967	ಎಂ.ರಾಜಶೇಖರಮೂರ್ತಿ	ಕಾಂಗ್ರೆಸ್	21,455
1972	ಎಂ.ರಾಜಶೇಖರಮೂರ್ತಿ	ಕಾಂಗ್ರೆಸ್	24,002
1978	ಪಿ.ವೆಂಕಟರಮಣ	ಕಾಂಗ್ರೆಸ್	28061
1983	ವಿ.ವಾಸುದೇವ	ಜನತಾ ಪಕ್ಷ	28817
1985	ಡಾ.ಹೆಚ್.ಸಿ.ಮಹದೇವಪ್ಪ	ಜನತಾ ಪಕ್ಷ	33954
1989	ಎಂ.ಶ್ರೀನಿವಾಸಯ್ಯ	ಕಾಂಗ್ರೆಸ್	38915
1994	ಡಾ.ಹೆಚ್.ಸಿ.ಮಹದೇವಪ್ಪ	ಜನತಾದಳ	51874
1999	ಡಾ.ಭಾರತಿ ಶಂಕರ್	ಬಿಜೆಪಿ	28858
2004	ಡಾ.ಹೆಚ್.ಸಿ.ಮಹದೇವಪ್ಪ	ಜೆಡಿಎಸ್	37956
2008	ಡಾ.ಹೆಚ್.ಸಿ.ಮಹದೇವಪ್ಪ	ಕಾಂಗ್ರೆಸ್	42,593
2013	ಡಾ.ಹೆಚ್.ಸಿ.ಮಹದೇವಪ್ಪ	ಕಾಂಗ್ರೆಸ್	53219
2018	ಎಂ.ಅಶ್ವಿನ್ ಕುಮಾರ್	ಜೆಡಿಎಸ್	83624

ಈಗಿನ ಮತದಾರರ ವಿವರ	
ಪುರುಷರು	1,00,394
ಮಹಿಳೆಯರು	1,02,357
ಇತರೆ	14

ಒಟ್ಟು	2,02,765
ಮತಗಟ್ಟೆಗಳು	227

● ಎಸ್.ಬಿ.ದೇವರಾಜ

ತ್ರಿವೇಣಿ ಸಂಗಮ ಪುಣ್ಯಕ್ಷೇತ್ರವಾದ ತಿ.ನರಸೀಪುರ ವಿಧಾನಸಭಾ ಕ್ಷೇತ್ರ 15 ಚುನಾವಣೆಗಳನ್ನು ಕಂಡಿದ್ದು, 8 ಬಾರಿ ಕಾಂಗ್ರೆಸ್ ಗೆದ್ದಿದೆ. 3 ಬಾರಿ ಜನತಾ ಪಕ್ಷ, 2 ಬಾರಿ ಜೆಡಿಎಸ್, ಜನತಾದಳ ಹಾಗೂ ಬಿಜೆಪಿ ತಲಾ ಒಂದು ಬಾರಿ ಜಯಗಳಿಸಿದೆ.

1952ರಲ್ಲಿ ನಂಜನಗೂಡು ತಾಲೂಕಿನ ಬಿಳಿಗೆರೆ ಹಾಗೂ ಛತ್ರ ಹೋಬಳಿ ಒಳಗೊಂಡಂತೆ ತಿ.ನರಸೀಪುರ ಕ್ಷೇತ್ರ ರಚನೆಯಾಯಿತು. 1978ರವರೆಗೂ ಇದು ಸಾಮಾನ್ಯ ಕ್ಷೇತ್ರವಾಗಿತ್ತು. 78ರಲ್ಲಿ ತಾಲೂಕಿನ ಕಸಬಾ ಹಾಗೂ ಮೂಗೂರು ಹೋಬಳಿ ಮತ್ತು ಪಟ್ಟಣ ಪ್ರದೇಶ ಸೇರಿಸಿಕೊಂಡು ಪರಿಶಿಷ್ಟ ಮೀಸಲು ವಿಧಾನ ಸಭಾ ಕ್ಷೇತ್ರವಾಗಿ ಪರಿವರ್ತಿಸಲಾಯಿತು.

ನಂತರ 2008ರಲ್ಲಿ ಬನ್ನೂರು ವಿಧಾನ ಸಭಾ ಕ್ಷೇತ್ರವನ್ನು ವಿಲೀನಗೊಳಿಸಿ, ಬಿಳಿಗೆರೆ, ಕಸಬಾ ಹಾಗೂ ಛತ್ರ ಹೋಬಳಿಯನ್ನು ನೂತನ 'ವರುಣ ವಿಧಾನಸಭಾ' ಕ್ಷೇತ್ರಕ್ಕೆ ಸೇರ್ಪಡೆ ಮಾಡಿ, ಬನ್ನೂರು, ತಲಕಾಡು, ಸೋಸಲೆ, ಮೂಗೂರು ಹೋಬಳಿ ಹಾಗೂ ಪಟ್ಟಣ ಪ್ರದೇಶ ಸೇರಿದಂತೆ ತಿ.ನರಸೀಪುರ ಮೀಸಲು ವಿಧಾನಸಭಾ ಕ್ಷೇತ್ರವನ್ನು ಪುನರ್ ವಿಂಗಡಿಸಲಾಯಿತು. ಸಾಮಾನ್ಯ ಕ್ಷೇತ್ರವಾಗಿದ್ದಾಗ ಎಂ.ರಾಜಶೇಖರ ಮೂರ್ತಿ 4 ಬಾರಿ ಗೆಲುವು ದಾಖಲಿಸಿದರೆ, ಮೀಸಲು ಕ್ಷೇತ್ರವಾದ ಬಳಿಕ ಡಾ.ಹೆಚ್.ಸಿ.ಮಹದೇವಪ್ಪ 5 ಬಾರಿ ಗೆದ್ದಿದ್ದಾರೆ.

ಸದ್ಯ ತಿ.ನರಸೀಪುರ ಪುರಸಭೆ, ಮೂಗೂರು, ತಲಕಾಡು, ಸೋಸಲೆ ಮತ್ತು ಬನ್ನೂರು ಹೋಬಳಿ, ಬನ್ನೂರು ಪುರಸಭೆ ವ್ಯಾಪ್ತಿಯನ್ನು ತಿ.ನರಸೀಪುರ ವಿಧಾನಸಭಾ ಕ್ಷೇತ್ರ ಒಳಗೊಂಡಿದೆ. ಇಲ್ಲಿ ಪರಿಶಿಷ್ಟ ಜಾತಿ ಸಮುದಾಯದವರು ಹೆಚ್ಚಿದ್ದು, ವೀರಶೈವ ಲಿಂಗಾಯತ, ಒಕ್ಕಲಿಗ, ಕುರುಬ, ನಾಯಕ ಸಮುದಾಯದವರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. 15 ಸಾವಿರಕ್ಕೂ ಹೆಚ್ಚು ಮುಸ್ಲಿಂ ಮತದಾರರಿದ್ದಾರೆ ಎಂದು ಹೇಳಲಾಗಿದೆ. ಹಾಗಾಗಿ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾದರೂ ಎಲ್ಲಾ ಸಮುದಾಯಗಳ ಮತದಾರರೂ ಫಲಿತಾಂಶದ ನಿರ್ಣಾಯಕರೆನಿಸಿದ್ದಾರೆ.

ಮೊದಲ ಸ್ಪರ್ಧೆಯಲ್ಲೇ ಗೆಲುವು: ಕಳೆದ 2018ರ ಸಾರ್ವತ್ರಿಕ ಚುನಾವಣೆಯಲ್ಲಿ ಜೆಡಿಎಸ್‌ನ ಎಂ.ಅಶ್ವಿನ್ ಕುಮಾರ್ ಅವರು 83,929 ಮತಗಳೊಂದಿಗೆ ಆಯ್ಕೆಯಾಗಿ ಶಾಸಕರಾದರು. ಸಿದ್ದರಾಮಯ್ಯನವರ ಸಂಪುಟದಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಡಾ.ಹೆಚ್.ಸಿ.ಮಹದೇವಪ್ಪ (55,451 ಮತ) 28,324 ಮತಗಳ ಅಂತರದಲ್ಲಿ ಮಣಿಸುವ ಮೂಲಕ ಮೊದಲ ಸ್ಪರ್ಧೆಯಲ್ಲೇ 'ಕೈ' ಕಟ್ಟಿ ಹಾಕಿದರು. ಅಂದಿನ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣದಲ್ಲಿದ್ದ ಎಸ್.ಶಂಕರ್ 11,812 ಮತಗಳೊಂದಿಗೆ ಮೂರನೇ ಸ್ಥಾನ ಪಡೆದರು.

ನಾಲ್ಕೈದು ಬಾರಿ ಗೆಲುವು: ತಿ.ನರಸೀಪುರ ಕ್ಷೇತ್ರದಿಂದ ಇಬ್ಬರು ನಾಯಕರು ಹೆಚ್ಚು ಬಾರಿ ಗೆಲುವು ದಾಖಲಿಸಿದ್ದಾರೆ. ಎಂ.ರಾಜಶೇಖರಮೂರ್ತಿಯವರು 1957, 1962 ಹಾಗೂ 1967ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಮತ್ತು 1972ರಲ್ಲಿ ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿಯಾಗಿ ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾದರು. ಹಾಗೆಯೇ ಒಟ್ಟು 8 ಬಾರಿ ಸ್ಪರ್ಧಿಸಿದ್ದ ಡಾ.ಹೆಚ್.ಸಿ.ಮಹದೇವಪ್ಪ, 1985ರಲ್ಲಿ ಜನತಾ ಪಕ್ಷದಿಂದ, 1994ರಲ್ಲಿ ಜನತಾ ದಳದಿಂದ, 2004, 2008 ಹಾಗೂ 2013ರಲ್ಲಿ ಕಾಂಗ್ರೆಸ್‌ನಿಂದ ಸೇರಿ ಐದು ಬಾರಿ ಗೆಲುವು ದಾಖಲಿಸಿದ್ದಾರೆ. ಇನ್ನು 1952ರ ಮೊದಲ ಚುನಾವಣೆಯಲ್ಲಿ ಕಿಸಾನ್ ಮಜ್ದೂರ್ ಪ್ರಜಾಪಾರ್ಟಿ (ಕೆಎಂಪಿಪಿ) ಅಭ್ಯರ್ಥಿ ಎಸ್.ಶ್ರೀನಿವಾಸ ಅಯ್ಯಂಗಾರ್ ಅವರು ಕಾಂಗ್ರೆಸ್‌ನ ಟಿ.ಪಿ.ಬೋರಯ್ಯ ವಿರುದ್ಧ ಗೆದ್ದರು. 1978ರಲ್ಲಿ ಇಂದಿರಾ ಕಾಂಗ್ರೆಸ್‌ನ ಪಿ.ವೆಂಕಟರಮಣ ಅವರು ಜನತಾ ಪಕ್ಷದಿಂದ ಸ್ಪರ್ಧಿಸಿದ್ದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಸೋಲಿಸಿ ಶಾಸಕರಾಗಿ ಆಯ್ಕೆಯಾದರು. 1983ರಲ್ಲಿ ಜನತಾ ಪಕ್ಷದ ವಿ.ವಾಸುದೇವ, 1989ರಲ್ಲಿ ಕಾಂಗ್ರೆಸ್‌ನ ಎಂ.ಶ್ರೀನಿವಾಸಯ್ಯ ಹಾಗೂ 2018ರಲ್ಲಿ ಜೆಡಿಎಸ್‌ನ ಎಂ.ಅಶ್ವಿನ್ ಕುಮಾರ್ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಒಂದಷ್ಟು ವಿಶೇಷಗಳು: ಮೊದಲ ಶಾಸಕರಾಗಿ ಆಯ್ಕೆಯಾದ ಎಸ್.ಶ್ರೀನಿವಾಸ ಅಯ್ಯಂಗಾರ್ ಅವರು 2ನೇ ಚುನಾವಣೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷ(ಪಿಎಸ್‌ಪಿ) ಅಭ್ಯರ್ಥಿಯಾಗಿ ಸ್ಪರ್ಧಿಸಿ ಕಾಂಗ್ರೆಸ್‌ನ ಎಂ.ರಾಜಶೇಖರಮೂರ್ತಿ ವಿರುದ್ಧ ಸೋತರು. 1978ರ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಅಭ್ಯರ್ಥಿಯಾಗಿ ಜನತಾ ಪಕ್ಷದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಮಣಿಸಿ ಶಾಸಕರಾದ ಪಿ.ವೆಂಕಟರಮಣ ಅವರು ಸ್ಪೀಕರ್ ಹಾಗೂ ಸಮಾಜ ಕಲ್ಯಾಣ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಆದರೆ 83ರ ಚುನಾವಣೆಯಲ್ಲಿ ಜನತಾ ಪಕ್ಷದ ವಿ.ವಾಸುದೇವ್, ವೆಂಕಟರಮಣ ಅವರನ್ನು ಸೋಲಿಸಿದರು. ಕಾಂಗ್ರೆಸ್ ಹಾಗೂ ಜನತಾ ಪರಿವಾರದ ಪ್ರಾಬಲ್ಯದ ನಡುವೆ 199ರಲ್ಲಿ ಬಿಜೆಪಿ ಅಭ್ಯರ್ಥಿ ಡಾ.ಭಾರತಿಶಂಕರ್, ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಮಾಜಿ ಸಚಿವ ಟಿ.ಎನ್.ನರಸಿಂಹಮೂರ್ತಿ ಅವರನ್ನು ಪರಾಭವಗೊಳಿಸಿ ಶಾಸಕರಾಗಿ ಆಯ್ಕೆಯಾಗುವ ಮೂಲಕ ಬಿಜೆಪಿ ಖಾತೆ ತೆರೆದರು. 2013ರ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಎಂ.ಸಿ.ಸುಂದರೇಶನ್ ಅವರು ಕಾಂಗ್ರೆಸ್‌ನ ಡಾ.ಹೆಚ್.ಸಿ.ಮಹದೇವಪ್ಪ ವಿರುದ್ಧ ಕೇವಲ 323 ಮತಗಳಿಂದ ಪರಾಜಿತರಾದರು.

2023ರ ಚುನಾವಣೆಗೆ ಅಖಾಡ ಸಿದ್ಧ; ಬಿಜೆಪಿ ಅಭ್ಯರ್ಥಿ ಘೋಷಣೆ ಬಾಕಿ

2023ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ತಿ.ನರಸೀಪುರ ಕ್ಷೇತ್ರ ಸಜ್ಜಾಗಿದೆ. ಜೆಡಿಎಸ್ ಮೊದಲ ಪಟ್ಟಿಯಲ್ಲೇ ಹಾಲಿ ಶಾಸಕ ಎಂ.ಅಶ್ವಿನ್‌ಕುಮಾರ್ ಅವರಿಗೆ ಟಿಕೆಟ್ ಘೋಷಿಸಿದ್ದು, ಅವರು ಪ್ರಚಾರದಲ್ಲಿ ನಿರತರಾಗಿದ್ದಾರೆ. ಇನ್ನು ನಂಜನಗೂಡು ಎಸ್ಸಿ ಮೀಸಲು ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ಗೆ ಅರ್ಜಿ ಸಲ್ಲಿಸಿದ್ದ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ತಿ.ನರಸೀಪುರ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ನಂಜನಗೂಡಿನಿಂದ ಅರ್ಜಿ ಹಾಕಿದ್ದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಅಕಾಲಿಕ ನಿಧನದ ಬಳಿಕ ಅವರ ಪುತ್ರ ದರ್ಶನ್ ಧ್ರುವನಾರಾಯಣ್‌ಗೆ ಟಿಕೆಟ್ ನೀಡಬೇಕೆಂಬ ಒತ್ತಡ ಹೆಚ್ಚಿದ್ದರಿಂದ ಕಾಂಗ್ರೆಸ್ ವರಿಷ್ಠರು, ನರಸೀಪುರ ಆಕಾಂಕ್ಷಿಯಾಗಿದ್ದ ಮಹದೇವಪ್ಪ ಪುತ್ರ ಸುನೀಲ್‌ಬೋಸ್ ಬದಲಾಗಿ ಅವರ ತಂದೆಗೆ ಟಿಕೆಟ್ ಘೋಷಿಸಿ, ದರ್ಶನ್‌ಗೆ ನಂಜನಗೂಡು ಟಿಕೆಟ್ ನೀಡಿದ್ದಾರೆ. ಇನ್ನು ಬಿಜೆಪಿ ಅಭ್ಯರ್ಥಿ ಘೋಷಣೆ ಬಾಕಿ ಇದೆ. ಮಾಜಿ ಶಾಸಕ ಡಾ.ಎನ್.ಎಲ್.ಭಾರತಿ ಶಂಕರ್, ಗ್ರಾಮಾಂತರ ಜಿಲ್ಲಾ ಘಟಕದ ಉಪಾಧ್ಯಕ್ಷ ಹಾಗೂ ವಕೀಲ ಎಂ.ದಾಸಯ್ಯ, ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ಡಾ.ಎಂ.ರೇವಣ್ಣ, ಕಳೆದ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎಸ್.ಶಂಕರ್, ಪುರಸಭಾ ಸದಸ್ಯ ಅರ್ಜುನ್ ರಮೇಶ್, ಮುಖಂಡರಾದ ಎಸ್.ಅರವಿಂದ್, ಸಾಮ್ರಾಟ್ ಸುಂದರೇಶನ್ ಇನ್ನಿತರ ಆಕಾಂಕ್ಷಿಗಳಲ್ಲಿ ಅಂತಿಮವಾಗಿ ಯಾರನ್ನು ಕಣಕ್ಕಿಳಿಸಲಿದೆ ಎಂದು ಕ್ಷೇತ್ರದ ಜನ ಕುತೂಹಲದಿಂದ ಕಾದಿದ್ದಾರೆ.

ಎಚ್.ಡಿ.ರೇವಣ್ಣ ಆರೋಪ; ಸ್ವಯಂ ವರ್ಗಾವಣೆಗೆ ಡಿವೈಎಸ್‌ಪಿ ಉದಯ್ ಭಾಸ್ಕರ್ ಮನವಿ

ಹಾಸನ, ಏ.2– ಜಾತ್ಯಾತೀತ ಜನತಾದಳದ ನಾಯಕ ಹೆಚ್.ಡಿ. ರೇವಣ್ಣ ಅವರ ಆರೋಪಗಳಿಂದ ಬೇಸತ್ತು ಡಿವೈಎಸ್‌ಪಿ ಉದಯ್ ಭಾಸ್ಕರ್ ಅವರು ತಮ್ಮನ್ನು ವರ್ಗಾವಣೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.



ಡಿವೈಎಸ್‌ಪಿ ಉದಯ್ ಭಾಸ್ಕರ್ ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಿಲ್ಲ ಎಂದು ಆರೋಪಿಸಿ ಅವರ ವಿರುದ್ಧ ಕ್ರಮಕ್ಕೆ ಹೆಚ್‌ಡಿ ರೇವಣ್ಣ ಒತ್ತಾಯಿಸಿದ್ದರು. ಇದೀಗ ಡಿವೈಎಸ್‌ಪಿ ಮನನೊಂದು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಪತ್ರ ಬರೆದು ಸ್ವಯಂ ವರ್ಗಾವಣೆಗೆ ಕೋರಿದ್ದಾರೆ.

ನಾನು ನಿಷ್ಪಕ್ಷಪಾತ, ನೇರ ನುಡಿಯ ವ್ಯಕ್ತಿತ್ವವುಳ್ಳವನು. ರಾಜಕಾರಣಿಗಳು ನನ್ನಿಂದ ಕಾನೂನುಬಾಹಿರ ಕ್ರಮ ಅಪೇಕ್ಷಿಸುತ್ತಿದ್ದಾರೆ. ಅವರ ಒತ್ತಾಯಗಳಿಗೆ ನಾನು ಮಣಿಯದ ಕಾರಣ ನನ್ನ ವಿರುದ್ಧ ಅನಗತ್ಯ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಉದಯ್ ಭಾಸ್ಕರ್ ಪರೋಕ್ಷವಾಗಿ ಮಾಜಿ ಸಚಿವ ರೇವಣ್ಣ ವಿರುದ್ಧ ಬೇಸರ ವ್ಯಕ್ತಪಡಿಸಿದ್ದಾರೆ.

ನನ್ನ ಮೇಲೆ ಆರೋಪ ಮಾಡಿ ನನ್ನ ಮೇಲಾಧಿಕಾರಿಗಳಿಗೆ ಮಾನಸಿಕ ಒತ್ತಡಗಳನ್ನು ನೀಡುತ್ತಿದ್ದಾರೆ. ರಾಜಕಾರಣಿಗಳು ಈ ಚುನಾವಣಾ ಸಂದರ್ಭದಲ್ಲಿ ನನಗೆ ಸುಗಮವಾಗಿ ಕೆಲಸ ಮಾಡಲು ಅಡ್ಡಿಪಡಿಸಿ ಗೊಂದಲ ಸೃಷ್ಟಿಸುವುದು ಖಚಿತ. ಇದರಿಂದ ಮೇಲಾಧಿಕಾರಿಗಳಿಗೂ ಇರುಸು–ಮುರುಸು ಉಂಟಾಗುತ್ತದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಇದೀಗ ಬೇಸರದಿಂದಲೇ ತಮ್ಮ ವರ್ಗಾವಣೆಗೆ ಬೇಡಿಕೆ ಇಟ್ಟಿರುವ ಉದಯ್ ಭಾಸ್ಕರ್, ಚುನಾವಣಾ ಪ್ರಕ್ರಿಯೆ ಮುಗಿಯುವ ತನಕ ನನ್ನನ್ನು ಹಾಸನ ಜಿಲ್ಲೆಯಿಂದ ತಮಗೆ ಸರಿ ಎನಿಸಿದ ಸ್ಥಳಕ್ಕೆ ತಾತ್ಕಾಲಿಕ ವರ್ಗಾವಣೆಗೆ ಕೋರುತ್ತೇನೆ ಎಂದು ಮೇಲಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ರೇವಣ್ಣ ಗಂಭೀರ ಆರೋಪ: ಉದಯ್ ಭಾಸ್ಕರ್ ವಿರುದ್ಧ ಗಂಭೀರ ಆರೋಪ ಮಾಡಿರುವ ಎಚ್.ಡಿ.ರೇವಣ್ಣ ಅವರನ್ನು ಅಮಾನತುಗೊಳಿಸಿ ತನಿಖೆ ನಡೆಸುವಂತೆ ಒತ್ತಾಯಿಸಿದ್ದರು. ಉದಯಭಾಸ್ಕರ್ ಅವರು ಆಯಾ ಪೊಲೀಸ್ ಠಾಣೆಗಳ ರೌಡಿ ಶೀಟರ್‌ಗಳೊಂದಿಗೆ ನಂಟು ಹೊಂದಿದ್ದು, ನಿಷ್ಪಕ್ಷಪಾತವಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ ಎಂದು ಎಚ್‌ಡಿ ರೇವಣ್ಣ ಆರೋಪಿಸಿದ್ದರು.

ಸಾಮಾಜಿಕ ಜಾಲತಾಣದಲ್ಲಿ ಜಾಹೀರಾತು: ಎಎಪಿಗೆ ನೋಟಿಸ್

ಮೈಸೂರು, ಏ.2(ಎಂಕೆ)– ಅನುಮತಿ ಪಡೆಯದೆ ಸಾಮಾಜಿಕ ಜಾಲತಾಣದಲ್ಲಿ ಜಾಹೀರಾತು ಪ್ರಕಟಿಸಿದ ಎಎಪಿ(ಆಮ್ ಆದ್ಮಿ ಪಾರ್ಟಿ)ಗೆ ಚುನಾವಣಾ ಆಯೋಗ ನೋಟಿಸ್ ಜಾರಿಮಾಡಿದೆ. ಮಾ.31ರಂದು ಎಎಪಿ ಬೆಂಗಳೂರು ಟ್ವಿಟರ್ ಖಾತೆಯಿಂದ 'ಕರ್ನಾಟಕ ಗ್ಯಾರಂಟಿ' ಶೀರ್ಷಿಕೆಯಡಿ ಪಕ್ಷದ ಚಿಹ್ನೆ ಸಹಿತ ಜಾಹೀರಾತು ಪ್ರಕಟವಾಗಿದೆ. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಜಾಹೀರಾತು ಪ್ರಕಟಿಸುವ ಮುನ್ನ ಮಾಧ್ಯಮ ಪ್ರಮಾಣೀಕರಣ ಹಾಗೂ ಮಾಧ್ಯಮ ನಿಗಾ(ಎಂಸಿಎಂಸಿ) ದಿಂದ ಅನುಮತಿ ಕಡ್ಡಾಯವಾಗಿದೆ.



ಆದರೆ ಯಾವುದೇ ಅನುಮತಿ ಪಡೆಯದೆ ಭಾರತ ಪ್ರಜಾ ಪ್ರಾತಿನಿಧ್ಯ ಕಾಯ್ದೆ–1951, ಸೆಕ್ಷನ್ 126 ಮತ್ತು 127ಎ, ಐಪಿಸಿ ಸೆಕ್ಷನ್ 171ಹೆಚ್ ಅಡಿ ನಿಯಮ ಉಲ್ಲಂಘಟನೆಯಾಗಿದ್ದು, ನೋಟಿಸ್ ನೀಡಿದ 3 ದಿನಗಳಲ್ಲಿ ಎಎಪಿ ಜಾಹಿರಾತು ಪ್ರಕಟಿಸಿದಕ್ಕೆ ಲಿಖಿತ ಹೇಳಿಕೆ ನೀಡುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಸ್ವಯಂ ಘೋಷಿತ ಆಸ್ತಿ ತೆರಿಗೆ ಏಪ್ರಿಲ್ 2023 ರಲ್ಲಿ 5% ರಿಯಾಯಿತಿ

ಮಂಡ್ಯ, ಏ.2– ಮಂಡ್ಯ ನಗರಸಭಾ ವ್ಯಾಪ್ತಿಯ ಆಸ್ತಿಗಳ ಮಾಲೀಕರುಗಳು ಕಡ್ಡಾಯವಾಗಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಂತೆ ಪ್ರತಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಬೇಕಾಗುತ್ತದೆ 2023–24ನೇ ಸಾಲಿನ ತೆರಿಗೆಯನ್ನು ಜೂನ್ ತಿಂಗಳ ಅಂತ್ಯದೊಳಗೆ ಆಸ್ತಿ ತೆರಿಗೆ ಪಾವತಿಸಬೇಕಿರುತ್ತದೆ.

ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಏಪ್ರಿಲ್ ತಿಂಗಳಿನಲ್ಲಿ ಪಾವತಿಸಿದ ಆಸ್ತಿಗಳ ಮಾಲೀಕರುಗಳಿಗೆ ಶೇ.5% ರಷ್ಟು ರಿಯಾಯಿತಿ ನೀಡಲಾಗುವುದು ಹಾಗೂ ಮೇ ಮತ್ತು ಜೂನ್ ತಿಂಗಳಲ್ಲಿ ದಂಡ ರಹಿತವಾಗಿ ಪಾವತಿಸಲು ಅವಕಾಶವಿರುತ್ತದೆ.

01 ಜುಲೈ 2023 ರಿಂದ ಆಸ್ತಿ ತೆರಿಗೆ ಪಾವತಿಸುವವರಿಗೆ ಪ್ರತಿ ತಿಂಗಳಿಗೆ ಶೇ.2% ರಷ್ಟು ದಂಡವನ್ನು ಪಾವತಿಸಬೇಕಾಗುತ್ತದೆ, ಆಸ್ತಿದಾರರು ಸಕಾಲದಲ್ಲಿ ತಮ್ಮ ಸ್ವತ್ತುಗಳ ಆಸ್ತಿ ತೆರಿಗೆಯನ್ನು ಪಾವತಿಸಿ ಮಂಡಯ ನಗರದ ಅಭಿವೃದ್ಧಿಗೆ ಸಹಕರಿಸಲು ಮಂಡ್ಯ ನಗರಸಭಾ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಂಗ ತರಬೇತಿ ಶಿಬಿರದ ಸಮಾರೋಪ



ಮೈಸೂರು, ಏ.2(ಜಿಎ)– ಕುವೆಂಪು, ಶಿವರಾಮ ಕಾರಂತರು ಮತ್ತು ಎಸ್.ಎಲ್.ಭೈರಪ್ಪ ಅವರಲ್ಲಿರುವ ಆತ್ಮಾಭಿಮಾನ, ಗಾಂಭೀರ್ಯವನ್ನು ಇತ್ತೀಚಿನ ಸಾಹಿತಿಗಳು ಬೆಳೆಸಿಕೊಳ್ಳಬೇಕು ಎಂದು ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರದಲ್ಲಿರುವ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಕುವೆಂಪು ರಂಗಮಂದಿರದಲ್ಲಿ ಅದಮ್ಯ ರಂಗಶಾಲೆ ವತಿಯಿಂದ ಶನಿವಾರ ಆಯೋಜಿಸಿದ್ದ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ನಾಟಕದಲ್ಲಿ ಯಾವಾಗ ಅಂತರ್ ರಹಿತವಾಗಿ ಹೇಳಬಹುದಾದ ವಿಷಯವನ್ನು ಜೋರಾಗಿ ಹೇಳಲು ಶುರು ಮಾಡಿದರೂ ಆಗ ಅಲ್ಲಿ ಕಲೆ ಸೋತು ಅವರ ಅಜೆಂಡಗಳು ಮುಖ್ಯವಾಗಿ ಕಾಣುತ್ತಿದೆ. ಇಂದು ಸಾಹಿತ್ಯ, ನಾಟಕ ಆ ಸ್ಥಿತಿಗೆ ತಲುಪಿದ್ದು, ಕಾವ್ಯ ಮತ್ತು ಸಾಹಿತ್ಯಗಳು ಇರುವುದು ಪ್ರತಿಭಟನೆ ಸಂಘರ್ಷಕ್ಕೆ ಎಂದು ಹೇಳುತ್ತಿದ್ದಾರೆ ಎಂದು ಇತ್ತೀಚಿನ ಬೆಳವಣಿಗೆ ಕುರಿತು ಬೇಸರ ವ್ಯಕ್ತಪಡಿಸಿದರು.

ನೃತ್ಯ ಸಂಗೀತದ ಮೂಲಕ ಮನೋಲಾಸ ಸಿಗುತ್ತದೆ. ಆದರೆ, ಸಾಹಿತ್ಯ ಮತ್ತು ನಾಟಕದ ಮೂಲಕ ಅನೇಕ ಬದಲಾವಣೆ ಆಗುತ್ತದೆ. ಇಂದು ಅವುಗಳನ್ನು ಅದ್ವಾನ ಮಾಡುತ್ತಿದ್ದಾರೆ. ನಾಟಕದ ಮೂಲಕ ಸಮಾಜ ಪರಿವರ್ತನೆ ಮಾಡುತ್ತವೆ ಎಂದು ಹೋಗುವುದು ಸರಿಯಲ್ಲ. ಆದರೆ, ಇಂದು ರಂಗಭೂಮಿ ಮತ್ತು ಸಾಹಿತ್ಯ ಈಗ ಆ ಸ್ಥಿತಿಗೆ ತಲುಪಿದೆ ಎಂದರು.

ಕಾವ್ಯಗಳ ಮೂಲಕ ಸಮಾಜಿಕ ಸಂಗತಿಗಳಿಗೆ ಪ್ರತಿಕ್ರಿಯಿಸುವುದು ಸತ್ಯ ಆದರೆ, ಆರಂಭದಲ್ಲಿ ಕಾವ್ಯ ಉದ್ದೇಶ ಹೀಗೆ ಇರಲಿಲ್ಲ. ಸಂತೋಷ, ಉತ್ಸಾಹ ನೀಡುವುದಕ್ಕೆ ಹುಟ್ಟಿದ್ದು, ನಂತರ ಕಾಲಾನುಸಾರ ಕಾವ್ಯ, ಸಾಹಿತ್ಯಗಳು ಪ್ರತಿಭಟನೆ ಸಂಘರ್ಷಕ್ಕೆ ಎಂದು ಆಗಿದೆ. ಇತ್ತೀಚಿನ ದಿನಗಳಲ್ಲಿನ ಸಾಹಿತಿಗಳಿಗೆ ಕಾವ್ಯ, ಸಾಹಿತ್ಯವನ್ನು ನಿಭಾಯಿಸುವ ಗಟ್ಟಿತನ ಇಲ್ಲದಂತಾಗಿದೆ. ಅದಕ್ಕೆ ಮುಖ್ಯ ಕಾರಣವೆಂದರೆ, ಸಾಹಿತಿಗಳು ರಾಜಕಾರಣಿಗಳ ಹಿಂದೆ ಹಾಗೂ ವಿಧಾನಸೌಧವನ್ನು ತಿರುವುದನ್ನು ಅಭ್ಯಾಸ ಮಾಡಿಕೊಂಡರು ಅಂದಿನಿಂದ ಸಾಹಿತ್ಯ ಈ ಸ್ಥಿತಿಗೆ ತಲುಪಿತು ಎಂದರು.

ಮೊದಲು ಕುವೆಂಪು, ಶಿವರಾಮ ಕಾರಂತರು ಮತ್ತು ಈಗ ಎಸ್.ಎಲ್.ಭೈರಪ್ಪ ಅವರು ಇಂದಿನವರೆಗೂ ತಮ್ಮ ಗಾಂಭೀರ್ಯ ಮತ್ತು ಆತ್ಮಾಭಿಮಾನ ಬೆಳೆಸಿಕೊಂಡಿದ್ದರು. ಅವರು ಯಾವ ರಾಜಕಾರಣಿ ಹಿಂದೆಯೂ ಹೋಗುತ್ತಿರಲಿಲ್ಲ. ಇಂದಿಗೂ ರಾಜಕಾರಣಿಗಳು ಎಸ್.ಎಲ್.ಭೈರಪ್ಪ ಅವರ ಭೇಟಿಗೆ ಬರುತ್ತಾರೆ ಎಂದರೆ, ಅವರೂ ಸಮಯ ನಿಗದಿ ಮಾಡಿ ತಿಳಿಸುತ್ತಾರೆ. ಆ ತಾಕತ್ತು ಈ ದಿನ ಮಾನಸದ ಸಾಹಿತಿಗಳಲ್ಲಿ ಇರಬೇಕು ಎಂದು ತಿಳಿಸಿದರು.

ನಂತರ ದೇವರಾಜ ವಿಭಾಗದ ಎಸಿಪಿ ಶಾಂತಮಲ್ಲಪ್ಪ ಮಾತನಾಡಿ, ನಾವು ಪೊಲೀಸರು ರಂಗಭೂಮಿಯಿಂದ ಹೊರಗೆ ಇರುತ್ತೇವೆ. ರಂಗಭೂಮಿ ಅನೇಕ ಬದಲಾವಣೆಗಳನ್ನು ತರುತ್ತದೆ. 'ದೀಪಾವಳಿ ಭೂತ' ಎಂಬ ನಾಟಕದಲ್ಲಿ ಲಾಯರ್ ಪಾತ್ರ ವಹಿಸಿದೆ ಎಂದು ಸ್ಮರಿಸಿದರು.

ಯುವ ಜನರು ಸಾಂಸ್ಕೃತಿಕ ಮರೆತು ಬಹುದೂರ ಹೋಗುತ್ತಿದ್ದಾರೆ. ಬೆಂಗಳೂರಿನಲ್ಲಿ ವೀಕೆಂಡ್‌ನಲ್ಲಿ ಪಬ್‌ಗಳಿಗೆ ಬರುತ್ತಾರೆ. ಅದನ್ನು ನೋಡಿದ ಮುಂದಿನ ಜನಾಂಗ ಏನಾಗುತ್ತದೆ ಎಂದು ಆತಂಕವಾಗುತ್ತಿದೆ. ಇಂತಹ ಆತಂಕದ ನಡುವೆಯೂ ಅದಮ್ಯ ರಂಗ ಶಾಲೆಯು ರಂಗಭೂಮಿಯನ್ನು ಜೀವಂತವಾಗಿಡಲು ಮುಂದಾಗಿದ್ದಾರೆ ಎಂದು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಟಿ.ಸತೀಶ್ ಜವರೇಗೌಡ, ಕಾರ್ಯದರ್ಶಿ ಚಂದ್ರು ಮಂಡ್ಯ ಉಪಸ್ಥಿತರಿದ್ದರು.



ನರಸಿಂಹರಾಜ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಹಾಲಿ ಶಾಸಕ ತನ್ವೀರ್ ಸೇಠ್ ಅವರಿಗೆ ಘೋಷಣೆಯಾಗಿರುವ ಹಿನ್ನೆಲೆ ಅಸಮಾಧಾನಗೊಂಡಿದ್ದ ಈ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿ ಮಾಜಿ ಮೇಯರ್ ಅಯೂಬ್ ಖಾನ್ ಅವರನ್ನು ಶಾಸಕ ಜಮೀರ್ ಅಹಮದ್ ಮೂಲಕ ಭಾನುವಾರ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಮೈಸೂರಿನ ನಿವಾಸಕ್ಕೆ ಕರೆಸಿಕೊಂಡು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮನವೊಲಿಸಲು ಪ್ರಯತ್ನಿಸಿದರು.

ಹಾಸನ ಜೆಡಿಎಸ್ ಟಿಕೆಟ್ ನಿರ್ಧಾರ ದೇವೇಗೌಡರ ಹೆಗಲಿಗೆ


ಹಾಸನ: ಹಾಸನದ ಜೆಡಿಎಸ್ ಟಿಕೆಟ್ ವಿವಾದ ಬೆಂಗಳೂರಿನಲ್ಲಿರುವ ಹೆಚ್.ಡಿ.ದೇವೇಗೌಡ ಅವರ ನಿವಾಸಕ್ಕೆ ವರ್ಗಾವಣೆಯಾಗಿದೆ.

ಹೆಚ್.ಡಿ.ದೇವೇಗೌಡರು ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ. ರೇವಣ್ಣ, ಭವಾನಿ ರೇವಣ್ಣ ಅವರೊಂದಿಗೆ ಚರ್ಚೆ ಮಾಡಿದ್ದು, ತಮ್ಮ ನಿಲುವನ್ನು ಶೀಘ್ರವೇ ಪ್ರಕಟಿಸಲಿದ್ದಾರೆ.

ಹಾಸನದಲ್ಲಿ ಕಾರ್ಯಕರ್ತರಿಗೇ ಟಿಕೆಟ್ ನೀಡಬೇಕೆಂಬ ಉದ್ದೇಶ ಹೊಂದಿದ್ದ ಹೆಚ್.ಡಿ. ಕುಮಾರಸ್ವಾಮಿ ಏಕಾಏಕಿ ಹೆಚ್.ಡಿ. ದೇವೇಗೌಡ ಅವರ ನಿರ್ಧಾರಕ್ಕೆ ತಾವು ಬದ್ಧವಾಗಿರುವುದಾಗಿ ಹೇಳಿದ್ದರು. ಹಾಸನ ಕ್ಷೇತ್ರವನ್ನು ರೇವಣ್ಣ ಪ್ರತಿಷ್ಠೆಯಾಗಿ ಪರಿಗಣಿಸಿದ್ದು, ಈ ಹಿಂದೆ ಹಾಲಿ ಶಾಸಕ ಪ್ರೀತಂ ಗೌಡ ತಮ್ಮ ವಿರುದ್ಧ 50 ಸಾವಿರ ಮತಗಳ ಅಂತರದಿಂದ ತಮ್ಮ ವಿರುದ್ಧ ಗೆಲುವು ಸಾಧಿಸುವಂತೆ ಸವಾಲು ಹಾಕಿದ್ದರು.

ಇಂದು ರಾತ್ರಿ ದೇವೇಗೌಡರು ತಮ್ಮ ನಿವಾಸದಲ್ಲಿ ನಡೆಸಿದ ಸಭೆಯಲ್ಲಿ ಕೇವಲ 15 ನಿಮಿಷ ಮಾತ್ರ ಭಾಗವಹಿಸಿ ವಾಪಸ್ಸಾದ ಭವಾನಿ ರೇವಣ್ಣ ಸುದ್ದಿಗಾರರಿಗೆ ಪ್ರತಿಕ್ರಿಯಿಸಲು ನಿರಾಕರಿಸಿದರು. ಅದೇ ವೇಳೆ ಹೆಚ್.ಡಿ. ರೇವಣ್ಣ ಮತ್ತು ಹೆಚ್.ಡಿ. ಕುಮಾರಸ್ವಾಮಿ ಮಾತನಾಡಿ, ತಾವು ದೇವೇಗೌಡರ ನಿರ್ಧಾರಕ್ಕೆ ಬದ್ಧರಾಗಿರುವುದಾಗಿ ತಿಳಿಸಿದರು.

ನಂ.ಗೂಡಿನಲ್ಲಿ ಶ್ರೀಕಂಠೇಶ್ವರನ ವರಕ್ಕಾಗಿ ಸೆಣಸಾಟ



● ಮೋಹನ್ ಕಾಯಕ

ದಕ್ಷಿಣ ಕಾಶಿ ಎಂದೇ ಹೆಸರಾದ ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಶ್ರೀಕಂಠೇಶ್ವರನ ವರಪ್ರಸಾದ ಈ ಬಾರಿ ಯಾರಿಗೆ ದಕ್ಕಲಿದೆ ಎಂಬ ಕದನ ಕುತೂಹಲ ಕ್ಷೇತ್ರದ ಮತದಾರರಲ್ಲಿ ಮನೆ ಮಾಡಿದೆ.

2008 ರಿಂದ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾಗಿರುವ ನಂಜನಗೂಡು ವಿಧಾನಸಭಾ ಕ್ಷೇತ್ರ ಮೊದಲ ಸಾರ್ವತ್ರಿಕ ಚುನಾವಣೆಯಿಂದಲೂ ಅಸ್ತಿತ್ವದಲ್ಲಿದ್ದು, ಮೊದಲ ಬಾರಿಗೆ ದ್ವಿಸದಸ್ಯ ಕ್ಷೇತ್ರವಾಗಿ ನಂತರ ಅಂದರೆ 1957 ರಲ್ಲಿ ಏಕ ಸದಸ್ಯ ಕ್ಷೇತ್ರವಾಯಿತು. 1952ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ದ್ವಿ ಸದಸ್ಯ ಕ್ಷೇತ್ರವಾಗಿದ್ದರಿಂದ ಪಕ್ಷೇತರ ಅಭ್ಯರ್ಥಿ ಹೆಜ್ಜಿಗೆ ಎಂ.ಲಿಂಗಣ್ಣ ಹಾಗೂ ಕಾಂಗ್ರೆಸ್‌ನ ಎಂ.ಮಾದಯ್ಯ ಆಯ್ಕೆಯಾದರು.

1957ರ ಚುನಾವಣೆಯಿಂದ ಏಕ ಸದಸ್ಯ ಕ್ಷೇತ್ರವಾಗಿ ಬದಲಾದ ಬಳಿಕ ಕಾಂಗ್ರೆಸ್‌ನ ಪಿ.ಮಹದೇವಯ್ಯ, ಪಿಎಸ್ಪಿಯ ಬಿಎನ್‌ಎಸ್ ಆರಾಧ್ಯ ಅವರನ್ನು ಸೋಲಿಸಿ ಶಾಸಕರಾದರು. 1962ರಲ್ಲಿ ಕಾಂಗ್ರೆಸ್‌ನ ಎನ್.ರಾಚಯ್ಯ, ಪಕ್ಷೇತರ ಅಭ್ಯರ್ಥಿ ಎಲ್.ಶ್ರೀಕಂಠಯ್ಯ ವಿರುದ್ಧ ಜಯಗಳಿಸಿದರೆ, 1967ರಲ್ಲಿ ಎಲ್.ಶ್ರೀಕಂಠಯ್ಯ ಆಯ್ಕೆಯಾಗುವ ಮೂಲಕ ಸೋಲಿನ ಸೇಡು ತೀರಿಸಿಕೊಂಡಿದ್ದರು. ನಂತರ 1972 ಮತ್ತು 1978ರ ಚುನಾವಣೆಯಲ್ಲಿ ಕೆ.ಬಿ.ಶಿವಯ್ಯ ಒಮ್ಮೆ ಕಾಂಗ್ರೆಸ್‌ನಿಂದ ಮತ್ತೊಮ್ಮೆ ಇಂದಿರಾ ಕಾಂಗ್ರೆಸ್‌ನಿಂದ ಆಯ್ಕೆಯಾದರು.

ಪೈಪೋಟಿ: 1983ರ ಚುನಾವಣೆಯಿಂದ ನಂಜನಗೂಡು ಕ್ಷೇತ್ರದಲ್ಲಿ ಕಾಂಗ್ರೆಸ್, ಜನತಾಪಕ್ಷ ಹಾಗೂ ಜೆಡಿಎಸ್ ನಡುವೆ ಪೈಪೋಟಿ ಜೋರಾಗಿತ್ತು. 1983ರಲ್ಲಿ ಕಾಂಗ್ರೆಸ್‌ನ ಎಂ.ಮಹದೇವ್ ಗೆದ್ದರೆ, 1985ರಲ್ಲಿ ಜನತಾಪಕ್ಷದ ಡಿ.ಟಿ.ಜಯಕುಮಾರ್ ಜಯಗಳಿಸಿದರು. ಹಾಗೆಯೇ 1989ರಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಎಂ.ಮಹದೇವ್, 1994ರಲ್ಲಿ ಜೆಡಿಎಸ್‌ನ ಡಿ.ಟಿ.ಜಯಕುಮಾರ್, 1999ರಲ್ಲಿ ಕಾಂಗ್ರೆಸ್‌ನ ಎಂ.ಮಹದೇವ್ ಹಾಗೂ 2004ರಲ್ಲಿ ಮತ್ತೆ ಜೆಡಿಎಸ್‌ನ ಡಿ.ಟಿ.ಜಯಕುಮಾರ್ ಗೆಲುವು ಪಡೆದು ವಿಧಾನಸಭೆ ಪ್ರವೇಶ ಮಾಡಿದರು. ಇಬ್ಬರು ತಲಾ ಮೂರು ಬಾರಿ ಶಾಸಕರಾದರೂ ಸತತವಾಗಿ ಶಾಸಕರಾಗಲೂ ಸಾಧ್ಯವಾಗಲಿಲ್ಲ.

2008ರಲ್ಲಿ ಪ.ಜಾತಿ ಮೀಸಲು ಕ್ಷೇತ್ರವಾದ ಬಳಿಕ ಅಂದರೆ ಕಾಂಗ್ರೆಸ್‌ನ ವಿ.ಶ್ರೀನಿವಾಸ್ ಪ್ರಸಾದ್ 2008 ಮತ್ತು 2013ರಲ್ಲಿ ಗೆದ್ದು ಸತತ ಎರಡು ಬಾರಿ ಶಾಸಕರಾಗಿ ಆಯ್ಕೆಯಾದರು. ಆದರೆ ಶ್ರೀನಿವಾಸ್ ಪ್ರಸಾದ್ ರಾಜೀನಾಮೆಯಿಂದಾಗಿ 2017ರಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕಳಲೆ ಕೇಶವಮೂರ್ತಿ ಆಯ್ಕೆಯಾದರೆ, 2018ರಲ್ಲಿ ಶ್ರೀನಿವಾಸ್ ಪ್ರಸಾದ್ ಅಳಿಯ ಬಿಜೆಪಿ ಅಭ್ಯರ್ಥಿ ಹರ್ಷವರ್ಧನ್ ಶಾಸಕರಾಗಿ ಆಯ್ಕೆಯಾಗುವ ಮೂಲಕ ನಂಜನಗೂಡು ಕ್ಷೇತ್ರದಲ್ಲಿ ಮೊದಲ ಬಾರಿಗೆ ಬಿಜೆಪಿ ಗೆಲುವಿನ ನಗೆ ಬೀರಿತು.

ಕಾಂಗ್ರೆಸ್ ಪ್ರಾಬಲ್ಯ ಕ್ಷೇತ್ರ: ನಂಜನಗೂಡು ವಿಧಾನಸಭಾ ಕ್ಷೇತ್ರ ಕಾಂಗ್ರೆಸ್ ಪ್ರಾಬಲ್ಯವುಳ್ಳ ಕ್ಷೇತ್ರವಾಗಿದೆ. ಎರಡು ಉಪ ಚುನಾವಣೆ ಸೇರಿ ನಡೆದಿರುವ 18 ಚುನಾವಣೆಗಳಲ್ಲಿ 11 ಬಾರಿ ಕಾಂಗ್ರೆಸ್, ಜೆಡಿಎಸ್ 2, ಬಿಜೆಪಿ ಹಾಗೂ ಜನತಾ ಪಕ್ಷ ತಲಾ ಒಂದು ಬಾರಿ ಹಾಗೂ ಇಬ್ಬರು ಪಕ್ಷೇತರ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. 2023ರ ಚುನಾವಣೆಯಲ್ಲಿ ಯಾವ ಪಕ್ಷದ ಅಭ್ಯರ್ಥಿ ಆಯ್ಕೆಯಾಗಲಿದ್ದಾರೆ ಎಂಬುದನ್ನು ಕಾದು ನೋಡಬೇಕಿದೆ.

2018ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಬಿ.ಹರ್ಷವರ್ಧನ್ 78,030 ಮತ ಪಡೆದು ಜಯಗಳಿಸಿದರೆ, ಕಾಂಗ್ರೆಸ್‌ನ ಅಭ್ಯರ್ಥಿ ಕಳಲೆ ಎನ್.ಕೇಶವಮೂರ್ತಿ 65,551 ಮತಗಳನ್ನು ಕಠಿಣ ಸವಾಲು ನೀಡಿದರು. ಜೆಡಿಎಸ್‌ನ ಹೆಚ್.ಎಸ್.ದಯಾನಂದಮೂರ್ತಿ 13,679 ಮತ ಪಡೆದು ಮೂರನೇ ಸ್ಥಾನಪಡೆದರು. 2,09,121 ಮತದಾರರ ಪೈಕಿ 1,63,483 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದು, ಶೇ.78.18 ರಷ್ಟು ಮತದಾನವಾಗಿತ್ತು.

ಬಿಜೆಪಿ–ಕಾಂಗ್ರೆಸ್ ನಡುವೆ ನೇರ ಹಣಾಹಣಿ....

ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಾಬಲ್ಯ ಸಾಧಿಸಿದ್ದರೂ ಕಳೆದ ಬಾರಿಯ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಸೋತಿದೆ. ಈ ಮೂಲಕ 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ–ಕಾಂಗ್ರೆಸ್ ನಡುವೆ ನೇರ ಹಣಾಹಣಿ ನಡೆಯಲಿದ್ದು, ಯಾರಿಗೆ ಶ್ರೀಕಂಠೇಶ್ವರನ ವರಪ್ರಸಾದ ದಕ್ಕಲಿದೆ ಎಂಬುದನ್ನು ಕಾಡು ನೋಡಬೇಕಿದೆ. ಕಾಂಗ್ರೆಸ್‌ನಿಂದ ಈಗಾಗಲೇ ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ್ ಪುತ್ರ, ದರ್ಶನ್ ಧ್ರುವನಾರಾಯಣ್‌ಗೆ ಟಿಕೆಟ್ ಘೋಷಣೆ ಮಾಡಿದ್ದು, ಬಿಜೆಪಿ ಅಭ್ಯರ್ಥಿಯಾಗಿ ಹಾಲಿ ಶಾಸಕ ಬಿ.ಹರ್ಷವರ್ಧನ್ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚಾಗಿದೆ. ಜೆಡಿಎಸ್ ಅಭ್ಯರ್ಥಿ ಹುಡುಕಾಟದಲ್ಲಿದೆ.

ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ 249 ಮತಗಟ್ಟೆಗಳಲ್ಲಿ ಮತದಾನ ನಡೆಯಲಿದ್ದು, 2,18,201 ಮತದಾರರಿದ್ದಾರೆ. 1,08,812 ಪುರುಷ ಮತದಾರರು ಹಾಗೂ 1,09,383 ಮಹಿಳಾ ಮತದಾರರಿದ್ದರೆ, ಇತರೆ 6 ಮಂದಿ ಮತದಾರರಿದ್ದಾರೆ. ಇವರಲ್ಲಿ 3,107 ವಿಕಲಚೇತನ ಹಾಗೂ 80 ವರ್ಷ ಮೇಲ್ಪಟ್ಟ 7,572 ಮತದಾರರಿದ್ದಾರೆ.

ನಂಜನಗೂಡು ಕ್ಷೇತ್ರದಿಂದ ಆಯ್ಕೆಯಾದವರು...

1952– ದ್ವಿಸದಸ್ಯ ಕ್ಷೇತ್ರ ಹೆಜ್ಜಿಗೆ ಲಿಂಗಣ್ಣ(ಪಕ್ಷೇತರ), ಎಂ.ಮಾದಯ್ಯ (ಕಾಂಗ್ರೆಸ್)
1957– ಪಿ.ಮಹದೇವಯ್ಯ(ಕಾಂಗ್ರೆಸ್)
1957– ಉಪ ಚುನಾವಣೆ, ಜೆ.ಬಿ.ಮಲ್ಲಾರಾಧ್ಯ(ಪಿಎಸ್ಪಿ)
1962– ಎನ್.ರಾಚಯ್ಯ(ಕಾಂಗ್ರೆಸ್)
1967– ಎಲ್.ಶ್ರೀಕಂಠಯ್ಯ(ಪಕ್ಷೇತರ)
1972– ಕೆ.ಬಿ.ಶಿವಯ್ಯ(ಕಾಂಗ್ರೆಸ್)
1978– ಕೆ.ಬಿ.ಶಿವಯ್ಯ(ಇಂದಿರಾ ಕಾಂಗ್ರೆಸ್)
1983– ಎಂ.ಮಹದೇವ್(ಕಾಂಗ್ರೆಸ್)
1985– ಡಿ.ಟಿ.ಜಯಕುಮಾರ್(ಜನತಾ ಪಕ್ಷ)
1989– ಎಂ.ಮಹದೇವ್(ಕಾಂಗ್ರೆಸ್)
1994– ಡಿ.ಟಿ.ಜಯಕುಮಾರ್(ಜೆಡಿಎಸ್)
1999– ಎಂ.ಮಹದೇವ್(ಕಾಂಗ್ರೆಸ್)
2004– ಡಿ.ಟಿ.ಜಯಕುಮಾರ್(ಜೆಡಿಎಸ್)
ಪ.ಜಾತಿ ಮೀಸಲು ಕ್ಷೇತ್ರವಾದ ಬಳಿಕ
2008– ವಿ.ಶ್ರೀನಿವಾಸ್ ಪ್ರಸಾದ್(ಕಾಂಗ್ರೆಸ್)
2013– ವಿ.ಶ್ರೀನಿವಾಸ್ ಪ್ರಸಾದ್(ಕಾಂಗ್ರೆಸ್)
2017– ಉಪ ಚುನಾವಣೆ, ಕಳಲೆ ಎನ್.ಕೇಶವಮೂರ್ತಿ(ಕಾಂಗ್ರೆಸ್)
2018– ಬಿ.ಹರ್ಷವರ್ಧನ(ಬಿಜೆಪಿ)

ನಕ್ಕರೆ ಅದೇ ಸ್ವರ್ಗ

ಬಾಸ್ : 'ಏನ್ರೀ... ಮೊನ್ನೆ ತಾನೇ ಮೂರ್ದಿನ ರಜಾ ಹಾಕಿ, ತಿರುಪತಿಗೆ ಹೋಗ್ಬಂದ್ರೀ... ಮತ್ತೇ ತಿರುಪತಿಗೆ ಹೋಗೋಕೆ ರಜೆನಾ...?'

ನೌಕರ : 'ಹೌದು ಸಾರ್... ಸೇಫಾಗಿ ವಾಪಸ್ ಹೋದ್ರೆ, ತಿರ್ಗಾ ಬರ್ತಿನಿ ಅಂತ ಬೇಡ್ಕೊಂಡಿದ್ದೆ!!

ಮೈಸೂರು ಮಿತ್ರ

ಸೋಮವಾರ, 3 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

'ನೀವು ನಂಬಿಕೆ ಮತ್ತು ಭಕ್ತಿಯಿಂದ ಪ್ರಾರ್ಥಿಸಿದರೆ, ಭಗವಂತ ಖಂಡಿತವಾಗಿಯೂ ನಿಮ್ಮ ಶ್ರದ್ಧಾಪೂರ್ವಕ ಪ್ರಾರ್ಥನೆಗಳನ್ನು ಕೇಳುತ್ತಾನೆ.

– ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸತ್ಯ ಹೇಳಿದವ ಸತ್ತೇ ಹೋದ! ಅನ್ಯಾಯ ಮಾಡಿದವ ಅನ್ನ ತಿಂದ!!

ನಿಮ್ಮ ಪತ್ರಗಳು

ಮೊದಲ ಬಾರಿ ವೋಟ್ ಮಾಡುವ ವಿದ್ಯಾರ್ಥಿಗಳಿಗೆ ತಿಳುವಳಿಕೆ ಮೂಡಿಸುವುದು ಅತ್ಯಗತ್ಯ

ಮಾನ್ಯರೆ,

ವಿಧಾನಸಭೆಯ ಚುನಾವಣೆಯ ದಿನಾಂಕ ಪ್ರಕಟವಾಗಿದ್ದು, ನಮ್ಮ ದೇಶ ಆಳುವ ನಾಯಕನನ್ನು ಆಯ್ಕೆ ಮಾಡುವ ಜವಾಬ್ದಾರಿ ನಮ್ಮದಾಗಿದೆ.ಅಭ್ಯರ್ಥಿಗಳ ಪೂರ್ವಪರ ವಿಷಯಗಳನ್ನು ಹಾಗೂ ಅವರ ನಿಸ್ವಾರ್ಥ ಮನೋಭಾವನೆಯನ್ನು ಪ್ರತಿಯೊಬ್ಬರೂ ತಿಳಿದಿರಬೇಕು. ಈ ವಿಷಯದಲ್ಲಿ ಎಲ್ಲರೂ ಎಚ್ಚರಿಕೆ ವಹಿಸ ಬೇಕಾಗುತ್ತದೆ. ಜನರ ಜೀವನ, ದೇಶದ ಪರಿಸ್ಥಿತಿಯನ್ನು ಎಚ್ಚರಿಕೆಯಿಂದ ನಡೆಸುವ ಜವಾಬ್ದಾರಿ ನಾಯಕನದಾಗಿರುತ್ತದೆ. ಯಾರೂ ಅವರು ಕೊಡುವ ಆಮಿಷಗಳಿಗೆ ಒಳಗಾಗಬೇಡಿ. ಅವರು ಕೊಡುವುದು ನಾವು ತೆಗೆದುಕೊಳ್ಳುವುದು ಎರಡು ವಿಷಯಗಳು ಅಪರಾಧವಾಗಿರುತ್ತದೆ. ಈ ಅಪರಾಧಗಳು ಕಂಡಕೂಡಲೇ ಚುನಾವಣೆ ಆಯೋಗ ದವರಿಗೆ ದೂರು ನೀಡುವ ಹಕ್ಕು ನಮ್ಮದಾಗಿರುತ್ತದೆ. ಈ ಜವಾಬ್ದಾರಿಯನ್ನು ಪ್ರತಿಯೊಬ್ಬರೂ ಅರಿತಿರಬೇಕು (ದೂರು ನೀಡುವ ನಂಬರ್‌ಗಳು ಪತ್ರಿಕೆ, ದೂರದರ್ಶನ, ರೇಡಿಯೋ ಹಾಗೂ ಮೊಬೈಲ್‌ಗಳಲ್ಲಿ ಪ್ರಚಾರ ಮಾಡುತ್ತಿರಬೇಕು) ಇದರಿಂದ ಪ್ರಾಮಾಣಿಕವಾದ ಅಭ್ಯರ್ಥಿ ಗೆದ್ದು ಬರುತ್ತಾರೆ.



ಮತ್ತೊಂದು ವಿಷಯವೇನೆಂದರೆ ಮೊದಲ ಬಾರಿ ವೋಟ್ ಮಾಡುವ ಹಕ್ಕನ್ನು (18 ವರ್ಷ ತುಂಬಿದ ಕೂಡಲೇ) ಕಾಲೇಜು ವಿದ್ಯಾರ್ಥಿಗಳು ಪಡೆಯುತ್ತಾರೆ. ಇಂತಹವರಿಗೆ ಮೊದಲ ಬಾರಿಗೆ ವೋಟ್ ಹಾಕುವ ವಿಧಾನ ಬೂತ್‌ಗಳಲ್ಲಿ ಹೇಗೆ ವರ್ತಿಸಬೇಕು, ಮೊಬೈಲ್‌ಗಳ ನಿಷಿದ್ಧ, ನಮ್ಮ ಈ ಒಂದು ವೋಟ್ ಉತ್ತಮವಾದ ನಾಯಕನನ್ನು ಆಯ್ಕೆ ಮಾಡಲು ಎಷ್ಟು ಸಹಕಾರಿಯಾಗುತ್ತದೆ ನಮ್ಮ ವೋಟನ್ನು ಸ್ವತಂತ್ರವಾಗಿ ಯಾರಿಗೆ ಬೇಕಾದರೂ ಹಾಕಬಹುದು ಇಂತಹ ಹಲವಾರು ವಿಷಯ ಗಳನ್ನು ಮೊದಲ ಬಾರಿ ವೋಟ್ ಮಾಡುವವರಿಗೆ ಕಾಲೇಜುಗಳಿಗೆ ಹೋಗಿ ಜಾಗೃತಿ ಮೂಡಿಸಬೇಕು ಇದರಿಂದ ವೋಟಿನ ಮಹತ್ವ ತಿಳಿದು ಎಚ್ಚರ ವಹಿಸುತ್ತಾರೆ. ಧೈರ್ಯವಾಗಿ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡುತ್ತಾರೆ.

– ಎಂ.ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯತ್ರಿ, ಮೈಸೂರು.

ಹಗಲು ದರೋಡೆ...!

ಮಾನ್ಯರೆ,

ಆಧಾರ್ ಹಾಗೂ ಪ್ಯಾನ್ ಸಂಖ್ಯೆಗಳನ್ನು ಜೋಡಿಸುವ ದಿನಾಂಕವನ್ನು ವಿಸ್ತರಿಸಿ ಕೇಂದ್ರ ಸರಕಾರ ಜನರಿಗೆ ಉಪಕಾರ ಮಾಡಿದೆ. ಆದರೆ ಇದನ್ನೇ ಬಂಡವಾಳ ಮಾಡಿಕೊಂಡ ಕೆಲವು ಖಾಸಗಿ ಸಂಸ್ಥೆಗಳು ಜನರನ್ನು ದೋಚುವ ಕೆಲಸ ಮಾಡುತ್ತಿವೆ.

ಮೈಸೂರು ನಗರದ ರಾಮಸ್ವಾಮಿ ವೃತ್ತದ ಬಳಿ ಇರುವ ಆಧಾರ್ ನೋಂದಣಿ ಖಾಸಗಿ ಸಂಸ್ಥೆಯೊಂದು ಒಂದು ಸಾವಿರ ರೂ. ದಂಡ, ಒಂದು ನೂರ ಏಳು ಶುಲ್ಕ ಪಡೆಯುವ ಬದಲು ಒಂದು ಸಾವಿರ ರೂ. ದಂಡ ಹಾಗೂ ಐದು ನೂರು ರೂ. ಶುಲ್ಕವನ್ನು ಪಡೆಯುತ್ತಿದೆ. ಅದಕ್ಕೆ ರಸೀತಿ ನೀಡುತ್ತಿಲ್ಲ.


ಏನ್ ಸಾರ್ ರಸೀತಿ ಒಂದುನೂರ ಏಳು ರೂ.ಗೆ ಮಾತ್ರ ಇದೆ. ನೀವು ಐದುನೂರು ಪಡೆದು ಮಿಕ್ಕ ಹಣಕ್ಕೆ ರಸೀತಿ ಕೊಡಲೇ ಇಲ್ಲವಲ್ಲ ಎಂದು ಕೇಳಿದರೆ, ಅದು ಸ್ವಲ್ಪ ಹೊತ್ತಿನ ನಂತರ ಬರುತ್ತದೆ ಎಂದು ಹೇಳುವ ಕೃಪೆ ಮಾಡುತ್ತಾರೆ. ಈ ರೀತಿ ಕೆಲವು ಖಾಸಗಿ ಸಂಸ್ಥೆಗಳಲ್ಲಿ ನಡೆಯುತ್ತಿದೆ. ಉದಾಹರಣೆಗೆಂದೇ ಒಂದು ಸಂಸ್ಥೆಯ ಬಗ್ಗೆ ಇಲ್ಲಿ ಉಲ್ಲೇಖಿಸಲಾಗಿದೆ.

ಎಷ್ಟು ಹೊತ್ತು ಕಾಯುವುದು ಎಂದು ಬೇಸತ್ತ ಜನರು ನಿಮ್ಮ ರಸೀತಿಯೂ ಬೇಡ. ಸದ್ಯ ಇಷ್ಟಾದರೂ ಕೆಲಸವಾಯಿತಲ್ಲ ಎಂದು ಮನೆಯ ಕಡೆ ಹೆಜ್ಜೆ ಹಾಕುತ್ತಾರೆ. ಸರಕಾರ ಒಂದು ಕಡೆ ಜನರನ್ನು ಸುಲಿದರೆ..., ಖಾಸಗೀ ಸಂಸ್ಥೆಗಳು ಇನ್ನೊಂದು ರೀತಿ ಸುಲಿಯುತ್ತದೆ. ಈ ಬಗ್ಗೆ ಜಿಲ್ಲಾಡಳಿತ ಗಮನಕೊಟ್ಟು ತನಿಖೆ ಮಾಡಿ ಆ ಸಂಸ್ಥೆಗೆ ಸೂಕ್ತ ಎಚ್ಚರಿಕೆಯನ್ನು ನೀಡಲಿ.

– ನಂದಕುಮಾರ್, ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕರು, ಚಾಮರಾಜಪುರಂ, ಮೈಸೂರು

ಎಕ್ಸ್‌ಪ್ರೆಸ್ ವೇ ಹುಚ್ಚು ದರ್ಬಾರ್

ಮಾನ್ಯರೆ,



ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಟೋಲ್ ದರ ನಿಗದಿ ಮಾಡುವ ವಿಚಾರದಲ್ಲಿ ಹುಚ್ಚು ದರ್ಬಾರ್ ನಡೆಸು ತ್ತಿರುವುದು ಹಾಸ್ಯಾಸ್ಪದ ಸಂಗತಿ.

ಮಹಮದ್ ಬಿನ್ ತುಘಲಕ್ ತನ್ನ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ಹಾಗೂ ದೇವಗಿರಿಯಿಂದ ದೆಹಲಿಗೆ ಸ್ಥಳಾಂತರ ಮಾಡುತ್ತಾ ಇದ್ದ ಕಾರಣ ಆತನನ್ನು ಹುಚ್ಚು ದೊರೆ ಎಂದು ಇತಿಹಾಸದಲ್ಲಿ ನಮೂದಿಸಲಾಗಿದೆ. ಅದೇ ರೀತಿ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಟೋಲ್ ದರವನ್ನು ಸರಿಯಾದ ರೀತಿಯಲ್ಲಿ ನಿಗದಿ ಮಾಡದೆ ದಿನಕ್ಕೊಂದು ರೀತಿ ಬದಲಾವಣೆ ಮಾಡುತ್ತಿರುವುದು ತುಂಬಾ ನಾಚಿಕೆಗೇಡಿನ ವಿಷಯ. ಇನ್ನು ಮುಂದಾದರು ಸಂಬಂಧಪಟ್ಟವರು ಈ ವಿಷಯದಲ್ಲಿ ತಮ್ಮ ಜವಾಬ್ದಾರಿಯನ್ನು ಅರಿತು ಜನತೆಯಲ್ಲಿ ಗೊಂದಲ ಮೂಡಿಸುವ ಬದಲು ವೈಜ್ಞಾನಿಕವಾಗಿ ಸರಿಯಾದ ರೀತಿಯಲ್ಲಿ ಜನತೆಗೆ ಹೊರೆ ಯಾಗದಂತೆ ಟೋಲ್ ದರವನ್ನು ನಿಗದಿ ಮಾಡುವುದು ಸೂಕ್ತ.

– ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ.ನಗರ, ಮೈಸೂರು.


ಸರಕಾರದ ಆಸ್ತಿ ನಮ್ಮ ಆಸ್ತಿ !

ಮಾನ್ಯರೆ,

ಮೈಸೂರಿನ ಹಲವೆಡೆ ಪಾಲಿಕೆ ಕಸವನ್ನು ಹಾಕಲೆಂದೇ ಲಕ್ಷಗಟ್ಟಲೆ ಹಣ ಖರ್ಚು ಮಾಡಿ ರಸ್ತೆಯ ಬದಿಯಲ್ಲಿ ಬಕೇಟುಗಳನ್ನು ಅಳವಡಿಸಲಾಗಿರುತ್ತದೆ. ಇಂತಹ ಬಕೇಟು, ಡಬ್ಬಗಳನ್ನು ಅಳವಡಿಸಿದ ಕೆಲವೇ ದಿನಗಳಲ್ಲಿ ಅವು ನಾಪತ್ತೆ ಯಾಗುತ್ತಿದ್ದು, ಕಸ ಮಾಮೂಲಿನಂತೆಯೇ ಫುಟ್‌ಪಾತಿನಲ್ಲಿ ಬೀಳುತ್ತಿದೆ.

ನಮ್ಮ ಜನರ ಮನಸ್ಥಿತಿ ಹೇಗಿದೆಯೆಂದರೆ ಸರಕಾರದ ಆಸ್ತಿ ನಮ್ಮ ಆಸ್ತಿ ಎಂದು ಯಾವ ಎಗ್ಗೂ ಇಲ್ಲದೇ ಜನ ಇಂತಹ ಡಬ್ಬಗಳನ್ನು ಕಳವು ಮಾಡಿಕೊಂಡು ಹೋಗುತ್ತಿದ್ದಾರೆ. ಪಾಲಿಕೆ ಕಸದ ಡಬ್ಬಗಳನ್ನು ಹಾಕಿದರಷ್ಟೇ ಸಾಲದು. ರಾಮಸ್ವಾಮಿ ವೃತ್ತದಂತಹ ಜನನಿಬಿಡ ಸ್ಥಳದಲ್ಲೇ ಹೀಗಾದರೆ ಜನಸಂಚಾರ ಕಡಿಮೆಯಿರುವ ಜಾಗಗಳ ಕಸದ ಡಬ್ಬಗಳ ಪಾಡೇನು?

– ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ದೇಶದ ಬಗ್ಗೆ ಸದಾ ಜಾಗೃತಿಯ ಕಾಳಜಿ ಇರಬೇಕು



> ❝ ಇಂದು ಪರಿಸ್ಥಿತಿ ಬದಲಾದಂತೆ ಕಂಡುಬರುತ್ತಿದೆ. ಜನಕ್ಕೆ ಎಲ್ಲವೂ ತಿಳಿಯುತ್ತದೆ ಎಂಬುದು ಜನಪ್ರತಿನಿಧಿಗಳಿಗೆ ಗೊತ್ತಾಗುತ್ತಿದೆ. ಆದರೆ ನೇರವಾಗಿ ಪ್ರಶ್ನಿಸುವವರಿಲ್ಲದೆ, ವ್ಯವಸ್ಥೆಯಲ್ಲಿ ಶಿಥಿಲತೆ ಕಂಡುಬರುತ್ತಿದೆ. ಆದರೆ ದೇಶ ಇದ್ದರೆ, ದೇಶಕ್ಕೆ ಉತ್ತಮ ಆಡಳಿತವಿದ್ದರೆ ಮಾತ್ರ ನಾವು ಸುಗಮ ಜೀವನ ನಡೆಸಬಹುದು ಎಂಬುದು ಇಂದು ಜನರಿಗೆ ಅರ್ಥವಾಗುತ್ತಿದೆ. ಹಾಗಾಗಿ ರಾಜ್ಯದಲ್ಲೂ ಸ್ಥಿರ ಸರ್ಕಾರ ಬರುವಂತಾಗಬೇಕು, ಅದು ಜನಹಿತಕ್ಕಾಗಿ ಕೆಲಸ ಮಾಡುವಂತಾಗಬೇಕು. ಯಾವುದೇ ಆಸೆ, ಆಮಿಷಗಳಿಗೆ ನಮ್ಮ ಮತ ಮಾರಾಟವಾಗದಂತೆ ಎಚ್ಚರ ವಹಿಸುವುದು ಇಂದಿನ ಅಗತ್ಯವಾಗಿದೆ.

ಇದೀಗ ರಾಜ್ಯದಲ್ಲಿ ಮತ್ತೆ ಚುನಾವಣೆ ಬಂದಿದೆ. ಚುನಾವಣೆಯನ್ನು ಪ್ರಜಾಪ್ರಭುತ್ವದ ಹಬ್ಬ ಎಂದು ಕರೆಯಲಾಗುತ್ತದೆ. ಅದನ್ನು ಎಲ್ಲರೂ ಉತ್ಸಾಹದಿಂದ ಆಚರಿಸಬೇಕು. ನಮ್ಮ ದೇಶದ ಸಂವಿಧಾನದಲ್ಲಿ ನಮ್ಮ ಸರ್ಕಾರ ಹೇಗಿರಬೇಕು? ಎಂದರೆ ಅದು 'ಜನರಿಂದ, ಜನರಿಗಾಗಿ, ಜನರೇ ಆರಿಸುವ ಸರ್ಕಾರವಾಗಿರಬೇಕು' ಎಂದು ಹೇಳ ಲಾಗಿದೆ. ಬ್ರಿಟಿಷರು ಭಾರತದಲ್ಲಿದ್ದಾಗ ನಮಗೆ ನಮ್ಮ ಸರ್ಕಾರವೇ ಇರಲಿಲ್ಲ. ಅವರದ್ದೇ ಕಾರು ಬಾರು. ಹಿಡಿಯಷ್ಟು ಜನರು ಇಡೀ ದೇಶದ ಆಡಳಿತ ನಡೆಸುತ್ತಿದ್ದರು. ಅವರ ಬಳಿ ಸಂಬಳಕ್ಕಾಗಿ ನಮ್ಮವರು ಕೆಲಸ ಮಾಡಿಕೊಂಡು, ನಮ್ಮ ಜನರ ವಿರುದ್ಧ ಬ್ರಿಟಿಷರು ಹೇಳಿದಂತೆ ಕ್ರಮ ವಹಿಸುತ್ತಿದ್ದರು. ಆಗ ಬಹುತೇಕ ಜನರಿಗೆ ಬ್ರಿಟಿಷರು ಈ ದೇಶದಿಂದ ತೊಲಗಿ ನಮ್ಮ ದೇಶ ಸ್ವತಂತ್ರಗೊಂಡು ನಮ್ಮ ಆಡಳಿತವನ್ನು ನಾವೇ ಮಾಡಿಕೊಳ್ಳುವಂತಾದರೆ ಎಷ್ಟು ಚೆನ್ನಾಗಿರುತ್ತದೆ? ಎಂದು ಯೋಚಿಸಿ ರೋಮಾಂಚಿತರಾಗುತ್ತಿದ್ದರು.

ದೇಶಕ್ಕೆ ಸ್ವಾತಂತ್ರ್ಯ ಬಂತು, ನಮ್ಮದೇ ಸಂವಿಧಾನವೂ ಸಿದ್ಧವಾಯಿತು, ಜನರಿಂದ ಜನರಿಗಾಗಿ ಜನರೇ ಸರ್ಕಾರ ರಚಿಸಿಕೊಳ್ಳುವ ಅವಕಾಶವೂ ಒದಗಿಬಂದಿತು. ಆದರೆ ಇಂದಿನ ರಾಜಕೀಯ ಪರಿಸ್ಥಿತಿ ನೋಡಿದಾಗ, ಈಗಲೂ ಬದುಕಿರುವ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಇದಕ್ಕಾಗಿ ನಾವು ಅಷ್ಟು ಹೋರಾಡಬೇಕಾಯಿತೇ? ಎಂದು ಪ್ರಶ್ನಿಸಿಕೊಳ್ಳುವಂತಾಗಿದೆ. ನಮ್ಮ ಪ್ರತಿನಿಧಿಯಾಗುವವನು ಜನರ ಪ್ರತಿನಿಧಿಯಾಗಿರಬೇಕು, ಅವನು ಜನರ ಸೇವಕನಂತೆ ಇರಬೇಕು, ಅವನು ಜನರ ಆಗುಹೋಗುಗಳಿಗೆ ಬದ್ಧನಾಗಿರಬೇಕು, ಜನರು ಕೇಳದೆಯೇ ಅವನು ಜನರ ಕೆಲಸ ಮಾಡಿಕೊಡಬೇಕು ಎಂಬುದು ಪ್ರಜಾಪ್ರಭುತ್ವದ ಆಶಯವಾಗಿದೆ. ಈಗಲೂ ಚುನಾವಣೆ ಸಮಯದಲ್ಲಿ ಚುನಾವಣೆಗೆ ಸ್ಪರ್ಧಿಸುವವರು ವಿಧೇಯತೆಯಿಂದ ಕೈಮುಗಿದು ಮತ ಕೇಳುತ್ತಾರೆ, ನಿಮ್ಮ ಸೇವೆ ಮಾಡಲು ಒಂದು ಅವಕಾಶ ಮಾಡಿಕೊಡಿ ಎಂದೂ ಕೇಳುತ್ತಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಜನಪ್ರತಿನಿಧಿ ಜನರ ಆಳಾಗುವ ಬದಲು ಅರಸರಂತೆ ಕಾಲ ಕಳೆಯುವುದು ಕಂಡುಬರುತ್ತದೆ. ಇಂದಿಗೂ ಉತ್ತರ ಕರ್ನಾಟಕದಲ್ಲಿ ಪ್ರವಾಸ ಮಾಡಿದಾಗ ಅಲ್ಲಿ ಅಂತಹ ಹೇಳಿಕೊಳ್ಳಬಹುದಾದ ಯಾವ ಅಭಿವೃದ್ಧಿಯನ್ನು ಕಾಣಲಾಗದು. ದಕ್ಷಿಣ ಕರ್ನಾಟಕದಲ್ಲೂ ಪಟ್ಟಣಗಳು ಅಭಿವೃದ್ಧಿ ಹೊಂದಿವೆಯಾದರೂ ಗ್ರಾಮೀಣ ಪ್ರದೇಶದ ಸ್ಥಿತಿ ಅದೇ ತ್ರಿಶಂಕು ರೀತಿಯಲ್ಲಿ ಮುಂದುವರೆದಿರುವುದು ಕಂಡುಬರುತ್ತದೆ. ಇವನ್ನೆಲ್ಲಾ ಕಂಡಾಗ ಜನರು ಏಕೆ ಉತ್ತಮ ಪ್ರತಿನಿಧಿಯನ್ನು ಆರಿಸಿ ಕಳುಹಿಸುವುದಿಲ್ಲ? ಎಂಬ ಪ್ರಶ್ನೆ ಮೂಡುತ್ತದೆ. ಅನೇಕ ಜನಪ್ರತಿನಿಧಿಗಳು ತಮ್ಮ ಊರಿನಲ್ಲಿ ಕಾಣಿಸಿಕೊಳ್ಳುವುದಕ್ಕಿಂತ ಬೆಂಗಳೂರಿನಲ್ಲೇ ಹೆಚ್ಚಾಗಿ ಉಳಿದುಕೊಂಡಿರುತ್ತಾರೆ. ಇದು ಬದಲಾಗಬೇಕಾದರೆ ಜಾಗೃತ ಜನತೆ ಅರಿವು ಮೂಡಿಸಿಕೊಳ್ಳಬೇಕಾಗುತ್ತದೆ.

ಈಗಲೂ ನಗರ ಪ್ರದೇಶಗಳಲ್ಲಿ ಮತದಾನದ ಪ್ರಮಾಣ ಕಡಿಮೆಯೇ ಇರುತ್ತದೆ. ಇತ್ತೀಚಿನ ಜನಪ್ರತಿನಿಧಿಗಳನ್ನು ಕಂಡ ವಿದ್ಯಾವಂತರು ಇಂತಹವರಿಗೆ ಏಕೆ ಮತ ಹಾಕಬೇಕು? ನಿಂತಿರುವವರೆಲ್ಲರೂ ಅಂತಹವರೇ ಆಗಿರುವಾಗ ನಾನು ಯಾರಿಗೆ ಮತಹಾಕಬೇಕು? ಎಂದು ಭಾವಿಸಿ ಮತಗಟ್ಟೆಗೇ ಹೋಗುವುದಿಲ್ಲ. ಇಂತಹ ಮತದಾರರಿಗೆಂದೇ ಚುನಾವಣಾ ಆಯೋಗ 'ನೋಟ' (ಯಾರಿಗೂ ಇಲ್ಲ) ಎಂಬುದನ್ನು ಮತಯಂತ್ರಗಳಲ್ಲಿ ತಂದರೂ, ಮತದಾರರು ಮತಗಟ್ಟೆಗೆ ಹೋಗಲು ಮನಸ್ಸು ಮಾಡುತ್ತಿಲ್ಲ, ನಾವು ಮತದಾನ ಮಾಡದಿದ್ದರೆ, ಮುಂದೆ ಸರ್ಕಾರಗಳನ್ನು ಟೀಕಿಸುವ ಹಕ್ಕನ್ನು ನಾವು ಹೊಂದಿರುವುದಿಲ್ಲ. ನಿಂತಿರುವ ಅಭ್ಯರ್ಥಿಗಳಲ್ಲಿ, ಇದ್ದಿದರಲ್ಲಿ ಉತ್ತಮ ಎಂದು ಕಂಡುಬರುವವರಿಗಾದರೂ ಮತ ಚಲಾಯಿಸಬೇಕು. ಮತ ಚಲಾವಣೆ ನಮ್ಮ ಹಕ್ಕು ಎಂಬುದನ್ನು ಮರೆಯಬಾರದು. ಹಾಗೆಯೇ ಮತಚಲಾವಣೆ ನಮ್ಮ ಕರ್ತವ್ಯವೂ ಹೌದು. ಹಕ್ಕಿನ ಬಗ್ಗೆ ವಾದಿಸುವವರು ಕರ್ತವ್ಯದ ಬಗ್ಗೆ ಮರೆಯಬಾರದು.

ಇಂದು ಪರಿಸ್ಥಿತಿ ಬದಲಾದಂತೆ ಕಂಡುಬರುತ್ತಿದೆ. ಜನಕ್ಕೆ ಎಲ್ಲವೂ ತಿಳಿಯುತ್ತದೆ ಎಂಬುದು ಜನಪ್ರತಿನಿಧಿಗಳಿಗೆ ಗೊತ್ತಾಗುತ್ತಿದೆ. ಆದರೆ ನೇರವಾಗಿ ಪ್ರಶ್ನಿಸುವವರಿಲ್ಲದೆ, ವ್ಯವಸ್ಥೆಯಲ್ಲಿ ಶಿಥಿಲತೆ ಕಂಡುಬರುತ್ತಿದೆ. ಆದರೆ ದೇಶ ಇದ್ದರೆ, ದೇಶಕ್ಕೆ ಉತ್ತಮ ಆಡಳಿತವಿದ್ದರೆ ಮಾತ್ರ ನಾವು ಸುಗಮ ಜೀವನ ನಡೆಸಬಹುದು ಎಂಬುದು ಇಂದು ಜನರಿಗೆ ಅರ್ಥವಾಗುತ್ತಿದೆ. ಹಾಗಾಗಿ ರಾಜ್ಯದಲ್ಲೂ ಸ್ಥಿರ ಸರ್ಕಾರ ಬರುವಂತಾಗಬೇಕು, ಅದು ಜನಹಿತಕ್ಕಾಗಿ ಕೆಲಸ ಮಾಡುವಂತಾಗಬೇಕು. ಯಾವುದೇ ಆಸೆ, ಆಮಿಷಗಳಿಗೆ ನಮ್ಮ ಮತ ಮಾರಾಟವಾಗದಂತೆ ಎಚ್ಚರ ವಹಿಸುವುದು ಇಂದಿನ ಅಗತ್ಯವಾಗಿದೆ.

ದೇಶ ಸುಭದ್ರವಾಗಿದ್ದರೆ ದೇಶದೊಳಗಿನ ರಾಜ್ಯಗಳು, ರಾಜ್ಯದೊಳಗಿನ ಜನರೂ ಸುಖವಾಗಿರಬಹುದು. ಈ ಹಂತದಲ್ಲಿ ದೇಶದ ಬಗ್ಗೆ ಹೆಮ್ಮೆ ಗೌರವ ಮೂಡುವಂತಹ ನಡವಳಿಕೆ ಅವಶ್ಯಕ. ಇಂದು ಪ್ರಪಂಚದಲ್ಲಿ ಯಾವ ದೇಶಗಳು ಮುಂದುವರೆದಿವೆಯೋ, ಆ ದೇಶಗಳಲ್ಲಿ ಅಲ್ಲಿನ ಜನರು ರಾಷ್ಟ್ರಪ್ರೇಮದಿಂದ ಕೂಡಿದವರಾಗಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಅಂತಹ ರಾಷ್ಟ್ರ ಪ್ರೇಮ ನಮ್ಮಲ್ಲೂ ಜಾಗೃತವಾದರೆ, ನಮ್ಮ ದೇಶವೂ ಖಂಡಿತಾ ಪ್ರಪಂಚದ ಮುಂಚೂಣಿ ರಾಷ್ಟ್ರಗಳಲ್ಲಿ ಒಂದಾಗಿರಬಹುದು.

ರಷ್ಯಾದ ಅಧ್ಯಕ್ಷರಾಗಿ ಜನಾನುರಾಗಿಯಾಗಿದ್ದ ಮಿಖೈಲ್ ಗೊರ್ಬಚೇವ್ ತಮ್ಮ ಆತ್ಮ ಕಥೆಯಲ್ಲಿ ಒಂದು ಘಟನೆಯನ್ನು ವಿವರಿಸಿದ್ದಾರೆ. ಅದು ಅವರು ವಿದ್ಯಾಭ್ಯಾಸ ಮಾಡುತ್ತಿದ್ದಾಗ ಕಂಡ ಘಟನೆ. ಅವರು ಆಗ ಯುರೋಪಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಅವರು ಅಲ್ಲಿ ವಿದ್ಯಾಭ್ಯಾಸ ಮಾಡುವಾಗ ಇಬ್ಬರು ಜಪಾನಿ ವಿದ್ಯಾರ್ಥಿಗಳು ಇವರೊಡನೆ ವ್ಯಾಸಂಗ ಮಾಡುತ್ತಿದ್ದರು. ಆಗ ದ್ವಿತೀಯ ವಿಶ್ವ ಮಹಾಸಮರ ನಡೆದು ನಿಂತಿತ್ತು. ಆಗ ಜಪಾನ್ ದೇಶ ಹೆಚ್ಚೂ ಕಡಿಮೆ ನಿರ್ನಾಮವಾಗಿತ್ತು. ಆ ದೇಶ ಆರ್ಥಿಕವಾಗಿ ದುರ್ಬಲವಾಗಿ ತೆವಳುವಂತಹ/ಅಂಬೆಗಾಲಿಡುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಂತಹ ಸಮಯದಲ್ಲಿ ಗೊರ್ಬಚೇವ್ ಅವರೊಡನೆ ವಿದ್ಯಾಭ್ಯಾಸ ಮಾಡುತ್ತಿದ್ದ ಇಬ್ಬರು ಜಪಾನಿ ಯುವಕರ ಬಗ್ಗೆ ಅವರು ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಅವರು ಕಾಲೇಜಿನಲ್ಲಿ ಓದುವಾಗ ಟಿಪ್ಪಣಿ ಮಾಡಿಕೊಳ್ಳಬೇಕಾಗಿತ್ತು. ಆ ಇಬ್ಬರು ಜಪಾನಿಯರ ಬಳಿ ಕೇವಲ ಪೆನ್ಸಿಲ್‌ಗಳಿತ್ತು. ಒಬ್ಬ ಬರೆದುಕೊಳ್ಳುವಾಗ ಮತ್ತೊಬ್ಬ ಪೆನ್ಸಿಲನ್ನು ಚೂಪುಮಾಡಿ ಬರವಣಿಗೆಗೆ ಸಿದ್ಧ ಮಾಡಿಕೊಳ್ಳುತ್ತಿದ್ದ. ಅವರು ಬಳಸುತ್ತಿದ್ದುದು ಜಪಾನಿನ ಪೆನ್ಸಿಲುಗಳನ್ನು. ಆಗ ಆರ್ಥಿಕ ಕಾರಣದಿಂದಾಗಿ ಜಪಾನಿನಲ್ಲಿ ಉತ್ಪನ್ನವಾಗುತ್ತಿದ್ದ ವಸ್ತುಗಳು ಅಂತಹ ಗುಣಮಟ್ಟದಿಂದ ಕೂಡಿರುತ್ತಿರಲಿಲ್ಲ. ಅದು ಪೆನ್ಸಿಲ್‌ಗೂ ಅನ್ವಯವಾಗಿತ್ತು. ಅದರಲ್ಲಿ ಬರೆಯುವುದು ಕಷ್ಟಕರವಾಗಿತ್ತು. ಬರೆಯುತ್ತಿದ್ದಂತೆಯೇ ಸೀಸ ತುಂಡಾಗುತ್ತಿತ್ತು. ಆಗ ಅವರೊಡನಿದ್ದ ಇತರೆ ವಿದ್ಯಾರ್ಥಿಗಳು ನೀವೇಕೆ ಒಳ್ಳೆಯ, ಇಂಗ್ಲೆಂಡಿನಲ್ಲಿ ತಯಾರಾಗುವ ಪೆನ್ಸಿಲ್ ಬಳಸಬಾರದು? ಎಂದು ಕೇಳಿದರು. ಅದನ್ನು ಕೇಳಿದ ಆ ಜಪಾನಿನ ವಿದ್ಯಾರ್ಥಿಗಳು ಕಣ್ಣೀರು ಹಾಕುತ್ತಾ ಕೊಟ್ಟ ಉತ್ತರ, ಅವರ ದೇಶಾಭಿಮಾನವನ್ನು ತೋರಿಸುವಂತಿತ್ತು. 'ನಾವೂ ನಮ್ಮ ದೇಶದ ಪೆನ್ಸಿಲನ್ನು ಖರೀದಿಸದೆ, ಅದರಲ್ಲಿ ಬರೆಯದಿದ್ದರೆ, ಅದನ್ನು ಇನ್ನಾರು ಖರೀದಿಸುತ್ತಾರೆ? ಈಗ ನಮ್ಮ ದೇಶದ ಪೆನ್ಸಿಲ್ ಉತ್ತಮ ಗುಣಮಟ್ಟದಲ್ಲಿ ಇರದೇ ಇರಬಹುದು, ಆದರೆ ಮುಂದೊಂದು ದಿನ ಇಡೀ ವಿಶ್ವವೇ ನಮ್ಮ ಜಪಾನಿನಿ ಪೆನ್ಸಿಲ್ ಉಪಯೋಗಿಸುತ್ತದೆ' ಎಂದು ಹೇಳಿದರು. ಇದನ್ನು ದೇಶಾಭಿಮಾನ ಎಂದು ಕರೆಯಬೇಕು. ನಮ್ಮ ದೇಶದ ಬಗ್ಗೆ ನಾವೇ ವಿಶ್ವಾಸ ಇರಿಸಿಕೊಳ್ಳದಿದ್ದರೆ, ನಮ್ಮ ದೇಶವನ್ನು ಇನ್ನಾರು ವಿಶ್ವಾಸದಿಂದ ಕಾಣುತ್ತಾರೆ? ನಮ್ಮಲ್ಲಿ ಈ ಗುಣ ಬೆಳೆಯಬೇಕು.

ಪ್ರತಿ ವರ್ಷ ದೀಪಾವಳಿ ಸಮಯದಲ್ಲಿ ಒಂದು ಸುದ್ದಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತದೆ. ನಾವು ಈ ವರ್ಷ ಚೀನಾದ ಪಟಾಕಿ ಖರೀದಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಬೇಕು. ನಾವು ನಮ್ಮ ದೇಶದ ಪಟಾಕಿಯನ್ನು ಮಾತ್ರ ಖರೀದಿಸಬೇಕು. ಹೀಗೆ ಒಂದೆರಡು ವರ್ಷ ಮಾಡಿದರೆ, ನಮ್ಮ ದೇಶದ ಆರ್ಥಿಕ ಸ್ಥಿತಿ ವಿಶ್ವಮಟ್ಟದಲ್ಲಿ ಉನ್ನತ ಸ್ಥಾನದಲ್ಲಿ ಇರುತ್ತದೆ ಎಂದು ಆ ಸಂದೇಶ ಸಾರುತ್ತದೆ. ಆದರೆ ದೇಶದ ಬಗ್ಗೆ ವಿಶ್ವಾಸ ವೃದ್ಧಿಯಾಗದಿರುವ ಕಾರಣ ಹಾಗೂ ಚೈನಾದ ಪಟಾಕಿಯ ದರ ಕಡಿಮೆ ಇರುವ ಕಾರಣ ನಾವು ಅದನ್ನು ಖರೀದಿಸುತ್ತೇವೆ. ಅಂತಹ ಸಮಯದಲ್ಲಿ ಜಪಾನಿನ ಯುವಕರ ಮಾತುಗಳು ನಮಗೆ ನೆನಪಾಗಬೇಕು. ನಮ್ಮ ದೇಶದ ಬಗ್ಗೆ ನಾವು ಕಾಳಜಿ ವಹಿಸಬೇಕು. ಇರಬಹುದು, ಬೇರೆ ದೇಶಗಳ ಉತ್ಪನ್ನಕ್ಕಿಂತ ನಮ್ಮ ಕೆಲವು ವಸ್ತುಗಳ ಬೆಲೆ ಹೆಚ್ಚಾಗಿರಬಹುದು. ಆದರೆ ದೇಶದ ಹಿತದೃಷ್ಟಿಯಿಂದ ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ನಮ್ಮಲ್ಲಿ ಇಂತಹ ಸಮಾಜಮುಖಿ ಭಾವನೆ ಬೆಳೆಯಬೇಕು. ಎಂದಿಗೂ ನಾನೊಬ್ಬ ಹಾಗಿರದಿದ್ದಲ್ಲಿ ದೇಶವೇನೂ ಮುಳುಗಿಹೋಗುವುದಿಲ್ಲ ಎಂಬ ಭಾವನೆ ತೆಗೆದುಹಾಕಬೇಕಾಗುತ್ತದೆ.

ಈಗ ಚುನಾವಣೆಯ ಸಮಯದಲ್ಲಿ ದೇಶದ ಹಿತಕ್ಕಾಗಿ ನಾನು ಮತದಾನ ಮಾಡೇ ಮಾಡುತ್ತೇನೆ ಎಂಬ ಭಾವನೆ ನಮ್ಮಲ್ಲಿ ಮೂಡಬೇಕು. ನಾನೊಬ್ಬ ಓಟು ಹಾಕದಿದ್ದರೆ ಏನಾಗುತ್ತದೆ? ದೇಶವೇನು ಮುಳುಗಿಹೋಗುವುದಿಲ್ಲ ಎಂಬ ತಾತ್ಸಾರ ಮನೋಭಾವ ಬಿಟ್ಟು ಮತ ಚಲಾಯಿಸಬೇಕು. ಇಂದಿಗೂ ದೇಶದಲ್ಲಿ ಲಕ್ಷಾಂತರ ಜನ ತಮ್ಮ ಊರಿನಲ್ಲಿ ತಮ್ಮ ಮತ ಚಲಾಯಿಸುವುದು ಕರ್ತವ್ಯ ಎಂದುಕೊಂಡು, ಆ ದಿನ ಸಾವಿರಾರು ರೂಪಾಯಿ ಖರ್ಚು ಮಾಡಿಕೊಂಡು ಬಂದು ಮತ ಚಲಾಯಿಸುತ್ತಾರೆ. ಅದು ಅವರ ಕಾಳಜಿ ಸೂಚಿಸುತ್ತದೆ. ನಾವು ನಮ್ಮ ಮನೆಯಿಂದ ಒಂದೆರಡು ಕಿಲೋ ಮೀಟರು ದೂರ ವಿರುವ ಮತಗಟ್ಟೆಗೆ ತೆರಳಿ ಏಕೆ ಮಾತದಾನ ಮಾಡಬಾರದು? ನಾವು ನಮ್ಮ ಹಕ್ಕು ಹಾಗೂ ಕರ್ತವ್ಯವನ್ನು ಏಕೆ ನೆನಪಿಸಿಕೊಳ್ಳಬಾರದು? ಹಾಗೆ ಮಾಡದಿದ್ದಲ್ಲಿ ಮತ್ತೆ ಮುಂದಿನ ಐದು ವರ್ಷ ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂಬುದನ್ನೂ ಮರೆಯಬಾರದು.

ಹುಲುಸೆ ಗ್ರಾಮದಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿಗಳ ಸ್ಮರಣೆ

ಕುಶಾಲನಗರ, ಏ.2– ತಾಲೂಕಿನ ಹುಲುಸೆ ಗ್ರಾಮದ ವೀರಶೈವ ಸಮಾಜ ಮತ್ತು ಬಸವೇಶ್ವರ ಸೇವಾ ಸಮಿತಿ ಹಾಗೂ ಗ್ರಾಮಸ್ಥರ ಸಂಯುಕ್ತಾಶ್ರಯದಲ್ಲಿ ಪದ್ಮಭೂಷಣ, ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಶಿವಯೋಗಿ ಸ್ವಾಮೀಜಿಯ 116ನೇ ಜಯಂತಿ ಹಾಗೂ ಗುರು ವಂದನಾ ಸ್ಮರಣೆ ಕಾರ್ಯಕ್ರಮವು ಶನಿವಾರ ಅದ್ಧೂರಿಯಾಗಿ ನಡೆಯಿತು.

ಹೂವಿನಿಂದ ಅಲಂಕೃತಗೊಂಡ ವಾಹನದಲ್ಲಿ ಶಿವಕುಮಾರ ಸ್ವಾಮೀಜಿಗಳ ಭಾವಚಿತ್ರ ವಿಟ್ಟು ವಿಶೇಷ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಬೆಳಗ್ಗೆ ಕಾವೇರಿ ನದಿಯಲ್ಲಿ ಗಂಗಾಪೂಜೆ ಮಾಡಿ ನಂತರ ಮಹಿಳೆಯರು ಪೂರ್ಣ ಕುಂಭ ಕಳಸ ಹೊತ್ತು ವಾದ್ಯಗೋಷ್ಠಿಗಳೊಂದಿಗೆ ಮೆರವಣಿಗೆಯಲ್ಲಿ ಸಾಗಿದರು. ಜಯಂತಿ ಅಂಗವಾಗಿ ಗ್ರಾಮವನ್ನು ಹಸಿರು ತಳಿರು ತೋರಣಗಳಿಂದ ಸಿಂಗಾರಿಸಲಾಗಿತ್ತು.

ಮೆರವಣಿಗೆಯು ಪ್ರಮುಖ ಬೀದಿಗಳಲ್ಲಿ ಸಾಗಿದ ನಂತರ ಬಸವೇಶ್ವರ ದೇವಸ್ಥಾನ ಹತ್ತಿರ ಸಮಾಪ್ತಿಗೊಂಡಿತು. ಇದೇ ಸಂದರ್ಭ ಸಾವಿರಾರು ಭಕ್ತರಿಗೆ ಅನ್ನ ದಾಸೋಹ ನಡೆಯಿತು.

ಈ ಸಂದರ್ಭದಲ್ಲಿ ಹೆಬ್ಬಾಲೆ ಗ್ರಾಮ ಪಂಚಾಯಿತಿ ಹುಲುಸೆ ಸದಸ್ಯ ಎಚ್. ಎನ್. ಶಿವನಂಜಪ್ಪ, ಗ್ರಾಮದ ಮುಖಂಡರಾದ ಎಚ್.ಎಸ್. ಮಲ್ಲಿಕಾರ್ಜುನ, ಬಸವರಾಜ್, ಶಿವರುದ್ರಪ್ಪ, ಶಿವನಂಜಪ್ಪ, ಪುಟ್ಟಸ್ವಾಮಿ, ರಾಜೇಂದ್ರ, ಧನಂಜಯ, ನೂರಾರು ಗ್ರಾಮಸ್ಥರು ಇದ್ದರು.

ಪಾಕ್‌ನಲ್ಲಿ ಹಣದುಬ್ಬರ ಬಿಕ್ಕಟ್ಟು 50 ವರ್ಷದಲ್ಲೇ ಗರಿಷ್ಠ

ಆಹಾರ ಪದಾರ್ಥಗಳಿಗಾಗಿ ನೂಕು–ನುಗ್ಗಲು, 21 ಸಾವು



ಇಸ್ಲಾಮಾಬಾದ್, ಏ.2– ನೆರೆಯ ರಾಷ್ಟ್ರ ಪಾಕಿಸ್ತಾನದಲ್ಲಿ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಮಾರ್ಚ್ ತಿಂಗಳಲ್ಲಿ ಪಾಕಿಸ್ತಾನದ ಹಣದುಬ್ಬರವು ಶೇಕಡಾ 35.37ಕ್ಕೆ ತಲುಪಿದೆ. 50 ವರ್ಷಗಳಲ್ಲೇ ಗರಿಷ್ಠ ಹಣದುಬ್ಬರ ದರ. ಕಳೆದ ವರ್ಷಕ್ಕೆ ಹೋಲಿಸಿದರೆ ಗ್ರಾಹಕ ಬೆಲೆಗಳು 35.37 ರಷ್ಟು ಹೆಚ್ಚಾಗಿದೆ. ಜನರು ಹಸಿವಿನಿಂದ ಮಲಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರತಿನಿತ್ಯ ಒಂದಲ್ಲ ಒಂದು ನಗರದಲ್ಲಿ ಅಗ್ಗದ ಆಹಾರಕ್ಕಾಗಿ ಕಾಲ್ತುಳಿತ ಕಂಡು ಬರುತ್ತಿದೆ. ಕಳೆದ ಹತ್ತು ದಿನಗಳಲ್ಲಿ ಆಹಾರಕ್ಕಾಗಿ ನೂಕುನುಗ್ಗಲು ಉಂಟಾಗಿ 21 ಮಂದಿ ಸಾವನ್ನಪ್ಪಿದ್ದಾರೆ.

ಪಾಕಿಸ್ತಾನದಲ್ಲಿ ವಿದೇಶಿ ವಿನಿಮಯ ಖಾಲಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಇಲ್ಲಿನ ಸರಕಾರಕ್ಕೆ ಅಂತಾರಾಷ್ಟ್ರೀಯ ಹಣ ಕಾಸು ನಿಧಿಯಿಂದ(ಐಎಂಎಫ್) ಸಾಲದ ಅಗತ್ಯವಿದೆ. ಇದಕ್ಕಾಗಿ ಪರಿಸ್ಥಿತಿಗಳು ತುಂಬಾ ಕಠಿಣವಾಗಿವೆ. ಈ ಷರತ್ತುಗಳನ್ನು ಪೂರೈಸುವ ಪ್ರಕ್ರಿಯೆಯಲ್ಲಿ ಹಣದುಬ್ಬರ ಹೆಚ್ಚುತ್ತಿದೆ. ಮಾರ್ಚ್ ತಿಂಗಳಲ್ಲಿ ಸಿಪಿಐ ಹಣದುಬ್ಬರವು 50 ವರ್ಷಗಳ ಗರಿಷ್ಠ 35.37 ಶೇಕಡಾವನ್ನು ತಲುಪಿದೆ. ಇದು ಮತ್ತಷ್ಟು ಹೆಚ್ಚಾಗಲಿದೆ ಎನ್ನುತ್ತಾರೆ ತಜ್ಞರು. ಏರುತ್ತಿರುವ ಹಣದುಬ್ಬರವನ್ನು ಎದುರಿಸಲು ಸೆಂಟ್ರಲ್ ಬ್ಯಾಂಕ್ ಬೆಂಚ್ಮಾರ್ಕ್ ಬಡ್ಡಿದರವನ್ನು 300 bps ನಿಂದ 20 ಪ್ರತಿಶತಕ್ಕೆ ಹೆಚ್ಚಿಸಿದೆ.

ಮಾರ್ಚ್‌ನಲ್ಲಿ ಸಾರಿಗೆ ಬೆಲೆಗಳು ಶೇ. 54.94 ರಷ್ಟು ಏರಿಕೆಯಾಗಿದ್ದು, ಮಾರ್ಚ್‌ನಲ್ಲಿ ಆಹಾರ ಹಣದುಬ್ಬರವು ಶೇ.47.15 ರಷ್ಟು ಏರಿಕೆಯಾಗಿದೆ ಎಂದು ಡೇಟಾ ತೋರಿಸಿದೆ. ಬಟ್ಟೆ ಮತ್ತು ಶೂಗಳ ಬೆಲೆಗಳು 21.93 ಶೇಕಡಾ ಮತ್ತು ವಸತಿ, ನೀರು ಮತ್ತು ವಿದ್ಯುತ್ ಬೆಲೆಗಳು 17.49 ರಷ್ಟು ಹೆಚ್ಚಾಗಿದೆ.

ಪಾಕಿಸ್ತಾನದಲ್ಲಿ ಉಚಿತ ಪಡಿತರವನ್ನು ವಿತರಿಸುವಾಗ ಕಾಲ್ತುಳಿತ ಸಂಭವಿಸಿದೆ. ಇದರಲ್ಲಿ 12 ಮಂದಿ ಸಾವನ್ನಪ್ಪಿದ್ದಾರೆ. ಈ ಘಟನೆಯು ಕರಾಚಿಯ ಸೈಟ್ ಪ್ರದೇಶದ ನೌರಾಸ್ ಕ್ರಾಸ್‌ರೋಡ್ಸ್ ಬಳಿಯ ಕಾರ್ಖಾನೆಗೆ ಸಂಬಂಧಿಸಿದೆ. ಶುಕ್ರವಾರ ಸಂಜೆ ಇಲ್ಲಿ ಉಚಿತ ಪಡಿತರ ವಿತರಣೆ ನಡೆಯುತ್ತಿದ್ದು, ಜನಸಾಗರವೇ ನೆರೆದಿತ್ತು. ಪ್ರತಿ ರಂಜಾನ್ ಸಮಯದಲ್ಲಿ, ಇಲ್ಲಿ ಜನರು ಪಡಿತರವನ್ನು ವಿತರಿಸುತ್ತಾರೆ. ಮೃತರಲ್ಲಿ ಮೂವರು ಮಕ್ಕಳು ಮತ್ತು ಎಂಟು ಮಹಿಳೆಯರು ಸೇರಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಿಂಧ್ ಮುಖ್ಯಮಂತ್ರಿ ಮುರಾದ್ ಅಲಿ ಶಾ ಅವರು ಕಾಲ್ತುಳಿತದಲ್ಲಿ ಸಾವನ್ನಪ್ಪಿದವರ ಸಂಬಂಧಿಕರಿಗೆ 5 ಲಕ್ಷ ರೂಪಾಯಿ ಮತ್ತು ಗಾಯಗೊಂಡವರಿಗೆ 1 ಲಕ್ಷ ರೂ. ಪರಿಹಾರವನ್ನು ಘೋಷಿಸಿದರು.

ಪಾಕಿಸ್ತಾನಿ ಪತ್ರಿಕೆ ಡಾನ್ ವರದಿ ಪ್ರಕಾರ, ಕಳೆದ ಹಲವು ತಿಂಗಳುಗಳಿಂದ ದೇಶದಲ್ಲಿ ಸರಕುಗಳ ಬೆಲೆಯಲ್ಲಿ ಏರಿಕೆಯಾಗಿದೆ. ವಾರ್ಷಿಕ ಹಣದುಬ್ಬರವು ಕಳೆದ ವರ್ಷ ಜೂನ್‌ಗಿಂತ ಶೇ.20ರಷ್ಟು ಹೆಚ್ಚಾಗಿದೆ. ಮುಂಬರುವ ದಿನಗಳಲ್ಲಿ ಹಣದುಬ್ಬರ ಮತ್ತಷ್ಟು ಹೆಚ್ಚಾಗಬಹುದು ಎಂದು ಹಣಕಾಸು ಸಚಿವಾಲಯ ಶುಕ್ರವಾರ ಬಿಡುಗಡೆ ಮಾಡಿದ ಮಾಸಿಕ ಆರ್ಥಿಕ ನವೀಕರಣ ಮತ್ತು ಮುನ್ನೋಟದಲ್ಲಿ ಹೇಳಿದೆ. ಇಂಧನ ಮತ್ತು ಇಂಧನ ಬೆಲೆಗಳಲ್ಲಿನ ಹೆಚ್ಚಳ ಮತ್ತು ಕೇಂದ್ರೀಯ ಬ್ಯಾಂಕ್ ನೀತಿಗಳು ಇದರ ಹಿಂದಿನ ಕಾರಣವೆಂದು ಹೇಳಲಾಗಿದೆ.

ಇಂದಿನಿಂದ ಹಾಕಿ, ಅಥ್ಲೆಟಿಕ್ಸ್ ತರಬೇತಿ

ಕುಶಾಲನಗರ, ಏ.2– ಕುಶಾಲನಗರ ಟೈಕೂನ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಏ.3 ರಿಂದ 15 ದಿನಗಳ ಕಾಲ ಹಾಕಿ, ಅಥ್ಲೆಟಿಕ್ಸ್ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಕ್ಲಬ್ ಅಧ್ಯಕ್ಷ ಹೆಚ್. ಈ ರಮೇಶ್ ತಿಳಿಸಿದ್ದಾರೆ.

ಕುಶಾಲನಗರ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಬೆಳಗ್ಗೆ 6 ರಿಂದ 8 ಗಂಟೆ ತನಕ ಹಾಕಿ ಮತ್ತು ಅಥ್ಲೆಟಿಕ್ಸ್ ಬಗ್ಗೆ ತರಬೇತಿ ನೀಡಲಾಗುವುದು. ರಾಷ್ಟ್ರೀಯ ಮಟ್ಟದ ಹಾಕಿ ತರಬೇತುದಾರರಾದ ಬಿ.ವಿ. ಕಿಶನ್, ಜಿ.ಎಸ್ ಚಂದ್ರಶೇಖರ್, ಕೆ.ಟಿ. ಸೌಮ್ಯ ಅಥ್ಲೆಟಿಕ್ಸ್ ತರಬೇತುದರಾದ ಬಿ.ಜಿ. ಮಂಜುನಾಥ ಸೇರಿದಂತೆ ಕ್ರೀಡಾಶಾಲೆಯ ತರಬೇತಿದಾರರು ಶಿಬಿರಾರ್ಥಿಗಳಿಗೆ ತರಬೇತಿ ನೀಡಲಿದ್ದಾರೆ.

ಈ ಸಂದರ್ಭ ಮಾತನಾಡಿದ ಕ್ಲಬ್ ಕಾರ್ಯದರ್ಶಿ ಬಿ ಟಿ ಪೂರ್ಣೇಶ್, ಹಾಕಿ ಮತ್ತು ಅಥ್ಲೆಟಿಕ್ಸ್ ತರಬೇತಿಯನ್ನು ಕುಶಾಲನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ನೀಡಲಾಗುವುದು. 50ಕ್ಕೂ ಅಧಿಕ ಶಿಬಿರಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ತಮ್ಮ ಕ್ಲಬ್ ಮೂಲಕ ಹಲವು ಕ್ರೀಡಾಪಟುಗಳು ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ ಎಂದು ತಿಳಿಸಿದರು.

ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 7899360392 ಸಂಪರ್ಕಿಸುವಂತೆ ಕೋರಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಕ್ಲಬ್ ಸಹ ಕಾರ್ಯದರ್ಶಿ ಜಿ.ಎಸ್. ಚಂದ್ರಶೇಖರ್, ನಿರ್ದೇಶಕರಾದ ಕಿಶನ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹೋಂ–ಸ್ಟೇ, ಹೋಟೆಲ್, ರೆಸಾರ್ಟ್‌ಗಳಲ್ಲಿ ಚುನಾವಣಾ ಆಯೋಗದ ನಿರ್ದೇಶನ ಪಾಲಿಸಿ

ಮಡಿಕೇರಿ, ಏ.2– ವಿಧಾನಸಭಾ ಚುನಾವಣೆ ಹಿನ್ನೆಲೆ ಮಾದರಿ ನೀತಿ ಸಂಹಿತೆ ಜಾರಿಯಾಗಿರುವುದರಿಂದ ಇತ್ತೀಚೆಗೆ ಜಿಲ್ಲಾಧಿಕಾರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯಲ್ಲಿನ ಹೋಂ–ಸ್ಟೇ, ಹೋಟೆಲ್, ರೆಸಾರ್ಟ್‌ಗಳಲ್ಲಿ ಚುನಾವಣಾ ಆಯೋಗದ ನಿರ್ದೇಶನದಂತೆ ಹೋಂ–ಸ್ಟೇ/ ಹೋಟೆಲ್/ ರೆಸಾರ್ಟ್‌ಗಳಿಗೆ ಆಗಮಿಸುವ ಅತಿಥಿಗಳ ವಿವರಗಳನ್ನು ನೋಂದಣಿ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸುವುದು ಹಾಗೂ ಕಡ್ಡಾಯವಾಗಿ ಆಧಾರ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ವೋಟರ್ ಐಡಿ ಇವುಗಳಲ್ಲಿ ಯಾವುದಾದರು ಒಂದು ಗುರುತಿನ ದಾಖಲಾತಿಯನ್ನು ಪಡೆಯುವುದು.

ಹೋಂ–ಸ್ಟೇ/ಹೋಟೆಲ್/ ರೆಸಾರ್ಟ್‌ಗಳಲ್ಲಿ ಕಡ್ಡಾಯವಾಗಿ ಸಿ.ಸಿ.ಕ್ಯಾಮರಾಗಳನ್ನು ಅಳವಡಿಸುವುದು ಹಾಗೂ ಸಿಸಿ ಟಿವಿಯ ಒಂದು ತಿಂಗಳ ತುಣುಕುಗಳನ್ನು ಸಂಗ್ರಹಿಸುವುದು. ಹೋಂ–ಸ್ಟೇ/ಹೋಟೆಲ್/ರೆಸಾರ್ಟ್‌ಗಳಿಗೆ ಆಗಮಿಸುವ ಅತಿಥಿಗಳ ವಾಹನದ ವಿವರಗಳನ್ನು ನೋಂದಣಿ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸುವುದು.

ಹೋಂ–ಸ್ಟೇ/ಹೋಟೆಲ್/ರೆಸಾರ್ಟ್‌ಗಳಲ್ಲಿ ಯಾವುದೇ ರೀತಿಯ ರಾಜಕೀಯ ಪ್ರಚಾರಗಳನ್ನು ಮಾಡುವಂತಿಲ್ಲ. ಯಾವುದೇ ಕಾರ್ಯಕ್ರಮಗಳು ರಾಜಕೀಯ ಪ್ರೇರಿತವಾಗಿರಬಾರದು. ಕಾನೂನುಬಾಹಿರ ಚಟುವಟಿಕೆಗಳು ನಡೆಸಬಾರದು. ಜಿಲ್ಲೆಯ ಹೋಂ–ಸ್ಟೇ ಮಾಲೀಕರು ಕಡ್ಡಾಯವಾಗಿ ಪ್ರವಾಸೋದ್ಯಮ ಇಲಾಖೆಯ ಅಂತರ್ಜಾಲ ತಾಣ http://karnataka tourism.org/kttf ಮುಖಾಂತರ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು ಎಂದು ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಯತೀಶ್ ಉಳ್ಳಾಲ್ ತಿಳಿಸಿದ್ದಾರೆ.

ವಿಧಾನಸಭಾ ಚುನಾವಣೆ: ಸರ್ಕಾರಿ ನೌಕರರಿಗೆ ವೇತನ ಸಹಿತ ರಜೆ

ಬೆಂಗಳೂರು: ಕರ್ನಾಟಕ ವಿಧಾನಸಭಾ ಚುನಾವಣೆ 2023ಕ್ಕೆ ದಿನಾಂಕ ಪ್ರಕಟವಾಗಿದ್ದು, ಮತದಾನದ ದಿನದಂದು ಎಲ್ಲಾ ನೌಕರರಿಗೆ ವೇತನ ಸಹಿತ ರಜೆಯನ್ನು ನೀಡುವಂತೆ ಕೇಂದ್ರ ಚುನಾವಣಾ ಆಯೋಗ ಸೂಚಿಸಿದೆ.

ಈ ಸಂಬಂಧ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಸಂಜೀವ್ ಕುಮಾರ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯ ಚುನಾವಣಾ ಆಯೋಗದ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಗಳು, ಸರ್ಕಾರಿ ಹಾಗೂ ಖಾಸಗಿ, ಅನುದಾನಿತ, ಅನುದಾನರಹಿತ ಶಿಕ್ಷಣ ಸಂಸ್ಥೆಗಳು, ಔದ್ಯಮಿಕ ಸಂಸ್ಥೆಗಳ ಹಾಗೂ ಇನ್ನಿತರ ಸಂಸ್ಥೆಗಳಿಗೆ ಮೇ 10ರಂದು ಸಾರ್ವತ್ರಿಕ ರಜೆ ಘೋಷಿಸುವಂತೆ ತಿಳಿಸಿದ್ದಾರೆ.

ಎಲ್ಲಾ ವ್ಯವಹಾರಿಕ, ಔದ್ಯಮಿಕ ಸಂಸ್ಥೆಗಳು ಮತ್ತು ಇನ್ನಿತರ ಎಸ್ಟಾಬ್ಲಿಷ್‌ಮೆಂಟ್‌ಗಳಲ್ಲಿ ಖಾಯಂ ಅಥವಾ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ನೌಕರರಿಗೆ ಮತದಾನ ಮಾಡಲು ಅನುಕೂಲವಾಗುವಂತೆ ರೆಪ್ರೆಸೆಂಟೇಷನ್ ಆಫ್ ಪೀಪಲ್ ಆಕ್ಟ್ 1951ರ ಕಲಂ 135ಬಿ ರಡಿಯಲ್ಲಿ ವೇತನ ಸಹಿತ ರಜೆ ನೀಡಲು ಸೂಚಿಸಿದ್ದಾರೆ.

ಕೇಂದ್ರ ಚುನಾವಣಾ ಆಯೋಗದ ಸೂಚನೆಯ ಮೇರೆಗೆ ಶೀಘ್ರವೇ ರಾಜ್ಯದ ಮುಖ್ಯ ಚುನಾವಣಾ ಆಯುಕ್ತರು ಆದೇಶ ಹೊರಡಿಸಲಿದ್ದಾರೆ. ಅದರಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮೇ 10ರಂದು ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ ಆಕ್ಟ್ 1881, ಕಲಂ 25ರಡಿ ಮತ್ತು ರೆಪ್ರೆಸೆಂಟೇಷನ್ ಆಫ್ ಪೀಪಲ್ ಆಕ್ಟ್ 1951ರ ಕಲಂ 135ಬಿ ರಡಿಯಲ್ಲಿ ವೇತನ ಸಹಿತ ರಜೆಯನ್ನು ಮೇ 10ರಂದು ಘೋಷಣೆ ಮಾಡಲಿದ್ದಾರೆ.

ಮೈಸೂರು ಮಿತ್ರ

44ನೇ ವಾರ್ಷಿಕೋತ್ಸವ ಕಥಾ ಸ್ಪರ್ಧೆ

'ಮೈಸೂರು ಮಿತ್ರ' ಪ್ರಾದೇಶಿಕ ದಿನ ಪತ್ರಿಕೆ 43 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ 44ನೇ ವರ್ಷಕ್ಕೆ ಪಾದಾರ್ಪಣೆಗೈಯ್ಯುವ ಈ ಸುಸಂದರ್ಭದಲ್ಲಿ 16–04–2023 (ಭಾನುವಾರ)ರಂದು ವರ್ಣರಂಜಿತ ಆಕರ್ಷಕ ವಿಶೇಷಾಂಕವನ್ನು ಹೊರತರಲಾಗುವುದು. ಇದರ ಅಂಗವಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಕಥಾ ಸ್ಪರ್ಧೆ ಏರ್ಪಡಿಸಲಾಗಿದೆ. 'ಮೈಸೂರು ಮಿತ್ರ' ಪ್ರಸರಣ ಹೊಂದಿರುವ ಐದು ಜಿಲ್ಲೆಗಳ (ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಮತ್ತು ಹಾಸನ) ಪ್ರತಿಭಾವಂತ ಕಥೆಗಾರರನ್ನು ಬೆಳಕಿಗೆ ತರುವುದು ಈ ಸ್ಪರ್ಧೆಯ ಮೂಲ ಉದ್ದೇಶ.

ಉತ್ತಮವಾದ ಐದು ಕಥೆಗಳಿಗೆ ನಗದು ಬಹುಮಾನ

- ಪ್ರಥಮ ಬಹುಮಾನ : ರೂ. 6,000
- ದ್ವಿತೀಯ ಬಹುಮಾನ : ರೂ. 5,000
- ತೃತೀಯ ಬಹುಮಾನ : ರೂ. 4,000
- ಪ್ರೋತ್ಸಾಹಕ ಬಹುಮಾನಗಳು (ಎರಡು) : ರೂ. 2,500

ಸ್ಪರ್ಧೆಯ ನಿಯಮಗಳು

- ಒಬ್ಬರು ಒಂದೇ ಕಥೆಯನ್ನು ಕಳುಹಿಸಬೇಕು.
- ಕಥೆಯನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ news@mysurumithra.com ಇ–ಮೇಲ್ ಮಾಡಬಹುದು. ಇಲ್ಲವೆ ಅಂಚೆ ಮೂಲಕವೂ ಕಳಿಸಬಹುದು. ಕಥೆ ಐದು ಪುಟಗಳನ್ನು (ಒಂದೇ ಮಗ್ಗಲು) ಮೀರದಂತಿರಬೇಕು. ಅನುವಾದ–ರೂಪಾಂತರಗಳನ್ನು ಪರಿಗಣಿಸುವುದಿಲ್ಲ.
- ಸ್ಪರ್ಧಿಗಳು ಕಥೆಯ ಶಿರೋನಾಮೆ, ತಮ್ಮ ಹೆಸರು–ವಿಳಾಸ, ಪಾಸ್‌ಪೋರ್ಟ್ ಸೈಜಿನ ಭಾವಚಿತ್ರ ಮತ್ತು ಕಿರು ಪರಿಚಯವನ್ನು ಪ್ರತ್ಯೇಕ ಹಾಳೆಯಲ್ಲಿ ಸ್ಫುಟವಾಗಿ ಬರೆದು ಕಥೆಯೊಡನೆ ಲಗತ್ತಿಸಬೇಕು.
- ಸ್ಪರ್ಧೆಗೆ ಕಳುಹಿಸಲಾಗುವ ಕಥೆ ಈಗಾಗಲೇ ಬೇರೆಲ್ಲೂ ಪ್ರಕಟವಾಗಿರಕೂಡದು.
- ತೀರ್ಪುಗಾರರ ಮಂಡಳಿಯ ತೀರ್ಮಾನವೇ ಅಂತಿಮವಾದುದು. ಪ್ರಥಮ ಬಹುಮಾನಿತ ಕಥೆಯನ್ನು ವಿಶೇಷಾಂಕದಲ್ಲಿಯೂ, ಇತರ ಬಹುಮಾನ ಪಡೆದ ಕಥೆಗಳನ್ನು ಯಥಾವಕಾಶ 'ವಾರದ ಮಿತ್ರ' ಸಾಪ್ತಾಹಿಕ ಪುರವಣಿಯಲ್ಲಿಯೂ ಪ್ರಕಟಿಸಲಾಗುವುದು.
- ಬಹುಮಾನಿತ ಕಥೆಗಳ ಸಂಪೂರ್ಣ ಸ್ವಾಮ್ಯ 'ಮೈಸೂರು ಮಿತ್ರ'ನಿಗೆ ಸೇರಿದ್ದು.
- ಅಂಚೆಯಲ್ಲಿ ಕಥೆಗಳು ಸೂಕ್ತ ಸಮಯಕ್ಕೆ ತಲುಪದಿದ್ದಲ್ಲಿ 'ಮೈಸೂರು ಮಿತ್ರ' ಜವಾಬ್ದಾರಿಯಲ್ಲ ಮತ್ತು ಕಥೆಗಳನ್ನು ಯಾವ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ. ಆದ್ದರಿಂದ ಸ್ಪರ್ಧಿಗಳು ಕಥೆಯ ಒಂದು ಪ್ರತಿಯನ್ನು ತಮ್ಮ ಬಳಿ ಇರಿಸಿಕೊಳ್ಳುವುದೊಳಿತು.
- ಈ ನಿಯಮಾವಳಿಯನ್ನು ಪಾಲಿಸದ ಕಥೆಗಳನ್ನು ತಿರಸ್ಕರಿಸಲಾಗುವುದು.
- ಯಾವುದೇ ರೀತಿ ಪ್ರಭಾವ ಬೀರುವುದನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

ವಿ.ಸೂ.: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ದಿನ ಪತ್ರಿಕೆಗಳ ಉದ್ಯೋಗಿಗಳು ಹಾಗೂ ಅವರ ಸಂಬಂಧಿಗಳು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.

ಕಥೆ ನಮ್ಮ ಕೈಸೇರಲು ಕೊನೆಯ ದಿನಾಂಕ 05–04–2023

ವಿಳಾಸ: ಸಂಪಾದಕರು, 'ಮೈಸೂರು ಮಿತ್ರ' ವಾರ್ಷಿಕ ವಿಶೇಷಾಂಕ
ಇಂಡಸ್ಟ್ರಿಯಲ್ 'ಎ' ಲೇಔಟ್, ಬನ್ನಿಮಂಟಪ, ಮೈಸೂರು–570 015
ದೂರವಾಣಿ: 2496520, 2496521, 2496526, 2496527

ರಂಗನಾಥಪುರ ಕ್ರಾಸ್‌ನಲ್ಲಿ ಕೃಷ್ಣ ಅವರ ಪುತ್ಥಳಿ ಅನಾವರಣ


ನುಡಿದಂತೆ ನಡೆದ ಆದರ್ಶ ರಾಜಕಾರಣಿ ಕೆ.ಆರ್.ಪೇಟೆ ಕೃಷ್ಣ

ಸಚಿವ ಡಾ.ನಾರಾಯಣಗೌಡ ಬಣ್ಣನೆ



ಕೆ.ಆರ್.ಪೇಟೆ, ಏ.2– ಯಾವುದೇ ಕಪ್ಪುಚುಕ್ಕೆ ಇಲ್ಲದೇ ಪ್ರಾಮಾಣಿಕವಾಗಿ ಕೆಲಸ ಮಾಡಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದ ಸಜ್ಜನ ರಾಜಕಾರಣಿ, ಮಂಡ್ಯದ ಗಾಂಧಿ ಕೆ.ಆರ್.ಪೇಟೆ ಕೃಷ್ಣ ಅವರ ಆದರ್ಶಗಳನ್ನು ಇಂದಿನ ಯುವಕರು ಹಾಗೂ ಮುಂದಿನ ತಲೆಮಾರಿಗೆ ಪರಿಚಯಿಸುವ ನಿಟ್ಟಿನಲ್ಲಿ ಅವರ ಪುತ್ಥಳಿ ಸ್ಥಾಪಿಸಿ ಅನಾವರಣಗೊಳಿಸಲಾಗಿದೆ ಎಂದು ಸಚಿವ ಡಾ. ನಾರಾಯಣಗೌಡ ತಿಳಿಸಿದರು.

ತಾಲೂಕಿನ ರಂಗನಾಥಪುರ ಕ್ರಾಸ್ ಗ್ರಾಪಂ ಕೇಂದ್ರದ ಸರ್ಕಲ್‌ನಲ್ಲಿ ಕೆ.ಆರ್.ಪೇಟೆ ಕೃಷ್ಣ ಪ್ರತಿಷ್ಠಾನದಿಂದ ನಡೆದ ಸರಳ ಸಮಾರಂಭದಲ್ಲಿ ಮಾಜಿ ಸ್ಪೀಕರ್ ಕೃಷ್ಣ ಅವರ ಪುತ್ಥಳಿ ಅನಾವರಣಗೊಳಿಸಿ ಮಾತನಾಡಿದ ಅವರು, ಒಬ್ಬ ಸಾಮಾನ್ಯ ರೈತನ ಮಗನಾಗಿ ತಾಲೂಕಿನ ಕೊತ್ತಮಾರನಹಳ್ಳಿಯಲ್ಲಿ ಜನಿಸಿದ ಕೃಷ್ಣ ವಕೀಲರಾಗಿ, ಪ್ರೌಢಶಾಲಾ ಶಿಕ್ಷಕರಾಗಿ ತಮ್ಮ ವೃತ್ತಿ ಬದುಕು ಆರಂಭಿಸಿ ರಾಜ್ಯದ ಹಿರಿಯ ಸಹಕಾರಿ ಧುರೀಣ ಮಾಜಿ ಶಾಸಕ ಎಸ್.ಎಂ.ಲಿಂಗಪ್ಪ ಅವರ ಗರಡಿಯಲ್ಲಿ ಪಳಗಿ ರಾಜಕೀಯ ಪ್ರವೇಶಿಸಿದರು. 3 ಬಾರಿ ಶಾಸಕ, ಮಂಡ್ಯ ಸಂಸದ, ಕ್ಯಾಬಿನೆಟ್ ದರ್ಜೆ ಸಚಿವರಾಗಿ, ರಾಜ್ಯ ವಿಧಾನಸಭೆ ಅಧ್ಯಕ್ಷರಾಗಿ ಬದ್ಧತೆಯಿಂದ ಕೆಲಸ ಮಾಡಿ ನುಡಿದಂತೆ ನಡೆದ ಆದರ್ಶ ರಾಜಕಾರಣಿ ಕೃಷ್ಣ ಅವರು ತಾಲೂಕಿನ ಸಮಗ್ರ ಅಭಿವೃದ್ಧಿಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದರು.



ಪಟ್ಟಣಕ್ಕೆ ಹೇಮಾವತಿ ನದಿಯಿಂದ ಕುಡಿಯುವ ನೀರು, ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ವಿಕಾಸಕ್ಕೆ ಇಂಜಿನಿಯರಿಂಗ್ ಕಾಲೇಜು ಮಂಜೂರು, ಮಿನಿ ವಿಧಾನಸೌಧ ನಿರ್ಮಾಣ, ಮಹಿಳಾ ಪ್ರಥಮ ದರ್ಜೆ ಕಾಲೇಜು ಸೇರಿದಂತೆ ಸ್ನಾತಕೋತ್ತರ ಕೋರ್ಸ್‌ಗಳನ್ನು ತಾಲೂಕು ಕೇಂದ್ರಕ್ಕೆ ತಂದ ಹೆಗ್ಗಳಿಕೆ ಕೃಷ್ಣ ಅವರಿಗೆ ಸಲ್ಲುತ್ತದೆ. ಕೃಷ್ಣ ಅವರ ಸಾಧನೆ ನಮ್ಮ ಮುಂದಿನ ತಲೆಮಾರಿಗೆ ತಲುಪಿಸುವ ಸದಾಶಯದಿಂದ ಪಟ್ಟಣದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿಗೆ ಕೆಆರ್.ಪೇಟೆ ಕೃಷ್ಣ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಎಂದು ಮರುನಾಮಕರಣ ಮಾಡಿ ಕೃಷ್ಣರ ಪುತ್ಥಳಿ ಸ್ಥಾಪಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಸ್ಪೀಕರ್ ಕೃಷ್ಣ ಅವರ ಪತ್ನಿ ಪ್ರೊ.ಇಂದಿರಮ್ಮ, ಗ್ರಾಪಂ ಅಧ್ಯಕ್ಷ ಚೇತನ್, ಕೆ.ಆರ್.ಪೇಟೆ ಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಜವರಾಯಿಗೌಡ, ಕಾರ್ಯದರ್ಶಿ ವಾಸು, ಖಜಾಂಚಿ ರಮೇಶ್, ಆಡಳಿತ ಮಂಡಳಿ ಅಂಚಿ ಸಣ್ಣಸ್ವಾಮೀಗೌಡ, ಸದಸ್ಯರಾದ ಅಂಬರೀಶ್, ಪರಮೇಶ್, ಜಯಣ್ಣ, ಪೂಜಾ ಶಂಕರ್, ಚಂದ್ರೇಗೌಡ, ಜವರಾಯಿಗೌಡ, ಅಳಿಯ ಶ್ರೀಧರ್, ಶಿವಣ್ಣ, ಸಂಪತ್ತಾಚಾರ್, ಚಂದ್ರಶೇಖರ್, ನಾಗರಾಜು, ಜಯಕುಮಾರಗೌಡ, ಮೋಹನ್, ದೇವರಾಜು, ಭೀಮೇಗೌಡ, ಸಚಿವ ನಾರಾಯಣಗೌಡರ ಆಪ್ತ ಸಹಾಯಕ ದಯಾನಂದ್ ಸೇರಿದಂತೆ ಇತರರಿದ್ದರು.

ವೈಭವದ ಪ್ರಹ್ಲಾದ ಪರಿಪಾಲನೋತ್ಸವ



"ಮೇಲುಕೋಟೆ ವೈರಮುಡಿ ಕರ್ನಾಟಕದ ಅಪರೂಪದ ಉತ್ಸವವಾಗಿದೆ. ಇಂತಹ ಮಹೋತ್ಸವದಲ್ಲಿ ಭಾಗಿಯಾಗಿ ದರ್ಶನ ಪಡೆದಿದ್ದು, ರಾಜಮುಡಿ ಕಿರೀಟ ಪಾರ್ಕಾವಣೆಯಲ್ಲಿ ಪಾಲ್ಗೊಂಡಿದ್ದು, ಜೀವನದಲ್ಲಿ ಮರೆಯಲಾಗದ ದಿನವಾಗಿದೆ. ಮೇಲುಕೋಟೆ ಕ್ಷೇತ್ರದ ಅಭಿವೃದ್ಧಿಗೆ ನನ್ನ ಸಹಕಾರ ಸಂಪೂರ್ಣ ಇದೆ.

- ಕುಮಾರ ನಾಯಕ್, ಹೆಚ್ಚುವರಿ ಕಾರ್ಯದರ್ಶಿ ಕರ್ನಾಟಕ ಸರ್ಕಾರ.

ಮೇಲುಕೋಟೆ, ಏ.2– ಇಲ್ಲಿನ ಶ್ರೀಚೆಲುವ ನಾರಾಯಣಸ್ವಾಮಿ ದೇವಾಲಯದಲ್ಲಿ ವೈರಮುಡಿ ಬ್ರಹ್ಮೋತ್ಸವ ಪ್ರಯುಕ್ತ ಭಾನುವಾರ ರಾತ್ರಿ ಪ್ರಹ್ಲಾದ ಪರಿಪಾಲನೋತ್ಸವ ವೈಭವದಿಂದ ನಡೆಯಿತು.

ಚೆಲುವನಾರಾಯಣಸ್ವಾಮಿ ನರಸಿಂಹಾವತಾರ ತಾಳಿ ಹಿರಣ್ಯ ಕಶಿಪುವಿನ ಸಂಹಾರ ಮಾಡಿ ಪ್ರಹ್ಲಾದನನ್ನು ಅನುಗ್ರಹಿಸಿದ ಮಾದರಿ ಉತ್ಸವ ಸಡಗರ ಸಂಭ್ರಮದಿಂದ ನೆರವೇರಿತು.

ಭಾನುವಾರ ಮುಂಜಾನೆ 4 ಗಂಟೆಗೆ ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ಎಸ್ಪಿ ಯತೀಶ್ ವೈರಮುಡಿ ಕಿರೀಟವನ್ನು ದೀಪದ ಬೆಳಕಿನಲ್ಲಿ ಪರಿಶೀಲಿಸಿದ ನಂತರ ಪೆಟ್ಟಿಗೆಯಲ್ಲಿಟ್ಟು ಮೊಹರು ಮಾಡಿ ದೇವಾಲಯದ ಬೊಕ್ಕಸದಲ್ಲಿ ಇಡಲಾಯಿತು. ಬೆಳಗ್ಗೆ 10 ಗಂಟೆಗೆ ಸ್ಥಾನೀಕರು, ಅರ್ಚಕರ ಮತಮುದ್ರೆಯವರ ಸಮಕ್ಷಮ ಪೆಟ್ಟಿಗೆ ಮೊಹರನ್ನು ಪರಿಶೀಲಿಸಿ ಪಾಂಡವಪುರ ಉಪವಿಭಾಗಾಧಿಕಾರಿ ನಂದೀಶ್ ಮತ್ತು ಕಾರ್ಯ ನಿರ್ವಾಹಕ ಅಧಿಕಾರಿ ಹೆಚ್.ಎಸ್.ಮಹೇಶ್ ಮೂಲಕ ಜಿಲ್ಲಾ ಖಜಾನೆಗೆ ಪೊಲೀಸ್ ಬಿಗಿ ಭದ್ರತೆಯಲ್ಲಿ ಮರಳಿ ಕಳುಹಿಸಿಕೊಡಲಾಯಿತು.

ಈ ವೇಳೆ ಪ್ರಥಮ ಸ್ಥಾನೀಕರಾದ ಕರಗಂ ನಾರಾಯಣ ಅಯ್ಯಂಗಾರ್, ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ, ಸಜ್ಜೆಹಟ್ಟಿ ತಿರುನಾರಾಯಣ ಯ್ಯಂಗಾರ್, ಮುಕುಂದನ್, ಸಂಪತ್ಕುಮಾರನ್, ಶ್ರೀರಾಮನ್ ಪರಿಚಾರಕ ಪಾರ್ಥಸಾರಥಿ ಮತ್ತಿತರರು ಭಾಗವಹಿಸಿದ್ದರು. ಇದಕ್ಕೂ ಮುನ್ನ ವಾಹನೋತ್ಸವ ಮಂಟಪದಲ್ಲಿ ವೈರಮುಡಿ ಉತ್ಸವ ಮುಗಿಯುತ್ತಿದ್ದಂತೆ ರಾಜಮುಡಿ ಕಿರೀಟ ಧರಿಸಿ ಉತ್ಸವ ನೆರವೇರಿಸಲಾಯಿತು. ನಂತರ ಪಡಿಯೇತ್ತದೊಂದಿಗೆ ವೈರಮುಡಿ ಉತ್ಸವ ದಿನದ ಕಾರ್ಯಕ್ರಮ ಬೆಳಗಿನ 6ಗಂಟೆಗೆ ಮುಕ್ತಾಯವಾದವು.

ಯಶಸ್ವಿ ವೈರಮುಡಿ ಜಿಲ್ಲಾಧಿಕಾರಿ ಕೃತಜ್ಞತೆ: ವೈರಮುಡಿ ಉತ್ಸವ ಯಶಸ್ವಿಗೆ ಕಾರಣರಾದ ಶ್ರೀಚೆಲುವನಾರಾಯಣಸ್ವಾಮಿ ದೇಗುಲದ ಸ್ಥಾನೀಕರು, ಅರ್ಚಕರು ಕೈಂಕರ್ಯಪರರು ಹಾಗೂ ದೇಗುಲದ ಸಿಬ್ಬಂದಿಗೆ ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ಕೃತಜ್ಞತೆ ಸಲ್ಲಿಸಿದ್ದಾರೆ. ಇದೇ ವೇಳೆ ಜಿಲ್ಲಾಡಳಿತದ ನಿರ್ದೇಶನದಂತೆ ಉತ್ಸವದ ಯಶಸ್ಸಿಗೆ ಶ್ರಮಿಸಿದ ಪೊಲೀಸ್, ಕಂದಾಯ, ಲೋಕೋಪಯೋಗಿ, ಆರೋಗ್ಯ ಇಲಾಖೆ, ಚೆಸ್ಕಾಂ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಗ್ರಾಪಂ ಸೇರಿದಂತೆ ಎಲ್ಲಾ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ವೈರಮುಡಿ ಬ್ರಹ್ಮೋತ್ಸವ ಏ.8ರವರೆಗೆ ನಡೆಯಲಿದ್ದು, ಎಲ್ಲಾ ಇಲಾಖೆಯವರೂ ಇದೇ ರೀತಿ ಶ್ರಮಿಸಬೇಕು ಎಂದು ತಿಳಿಸಿದ್ದಾರೆ.

ಏ.6ರಿಂದ ಶ್ರೀಲಕ್ಷ್ಮೀ ದೇವಿ ಸಿಡಿಹಬ್ಬ

ಕೆ.ಆರ್.ಪೇಟೆ, ಏ.2– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದೇವತೆ ಶ್ರೀಲಕ್ಷ್ಮೀ ದೇವಿ ಅಮ್ಮನವರ(ಬಾಚಳ್ಳಮ್ಮ) ಸಿಡಿಹಬ್ಬ ಏ.6ರಿಂದ ಏ.10ವರೆಗೆ ನಡೆಯಲಿದೆ. ಏ.6ರಂದು ಇಡೀ ರಾತ್ರಿ ರಂಗಕುಣಿತ, ಏ.7ರಂದು ಬೆಳಗ್ಗೆ ಪಲ್ಲಕ್ಕಿ ರಥೋತ್ಸವ, ರಾತ್ರಿ ಸಿಡಿಉತ್ಸವ, ಬಾಯಿಬೀಗ, ಸಿಡಿಮದ್ದು ಪ್ರದರ್ಶನ, ರಥದ ಕಳಸ ಪ್ರತಿಷ್ಠಾಪನೆ, ಮಡೆ ಉತ್ಸವ, ಕನ್ನಂಕಾಡಿ, ಕೊಂಡೋತ್ಸವ, ಉತ್ಸವಗಳು ಮಧ್ಯರಾತ್ರಿವರೆಗೆ ನಡೆಯಲಿವೆ.

ಏ.8ರಂದು ಶ್ರೀಲಕ್ಷ್ಮೀದೇವಿ ಅಮ್ಮನವರ ಮಹಾರಥೋತ್ಸವ ಮಧ್ಯಾಹ್ನ ನಡೆಯಲಿದೆ. ರಾತ್ರಿ ಶ್ರೀಲಕ್ಷ್ಮೀದೇವಿ ನಾಟಕ ಮಂಡಳಿ ವತಿಯಿಂದ ಕುರುಕ್ಷೇತ್ರ ನಾಟಕ ಪ್ರದರ್ಶನ ಇರುತ್ತದೆ. ಏ.9ರಂದು ಜಾತ್ರೆ, ಕೋಲಾಟ, ಓಕಳಿಯಾಟ, ವಿಶೇಷ ಪೂಜಾ ಕಾರ್ಯಕ್ರಮ ನಡೆಯಲಿವೆ. ಏ.10ರಂದು ಇಡೀ ರಾತ್ರಿ ಸೋಮನ ಕುಣಿತ, ಮನೆ ಮನೆಗಳಲ್ಲಿ ಸೋಮ ದೇವರುಗಳಿಗೆ ವಿಶೇಷ ಪೂಜೆ, ಭಕ್ತರಿಗೆ ಮಜ್ಜಿಗೆ, ಪಾನಕ ವಿತರಣೆ ನಡೆಯಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವಿ ಕೃಪೆಗೆ ಪಾತ್ರರಾಗಬೇಕೆಂದು ಸಿಡಿ ಹಬ್ಬ ಆಚರಣಾ ಸಮಿತಿ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಶೆಟ್ಟಹಳ್ಳಿ ಹೋಬಳಿ ಮಟ್ಟದ ಜೆಡಿಎಸ್ ಕಾರ್ಯಕರ್ತರ ಸಭೆ

ಸಚಿವ, ಮಾಜಿ ಶಾಸಕ, ಸಂಸದೆ ವಿರುದ್ಧ ಶಾಸಕ ರವೀಂದ್ರ ವಾಗ್ದಾಳಿ

ಶ್ರೀರಂಗಪಟ್ಟಣ, ಏ.2– ರಾಜಕೀಯವಾಗಿ ಬೆಳೆಸಿದ ಜೆಡಿಎಸ್ ಪಕ್ಷಕ್ಕೆ, ಇದೀಗ ಕಾಂಗ್ರೆಸ್ ಪಕ್ಷಕ್ಕೂ ಮೋಸ ಮಾಡಿ ನಾನು ತಪ್ಪು ಮಾಡಿದ್ದೇನೆ ಎಂದು ಕ್ಷೇತ್ರದಲ್ಲಿ ಕಣ್ಣೀರು ಹಾಕುವ ಶೋಚನೀಯ ಪರಿಸ್ಥಿತಿ ಯಾವ ರಾಜಕಾರಣಿಗೂ ಬರಬಾರದು ಎಂದು ಮಾಜಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡರ ಹೆಸರೇಳದೆ ಶಾಸಕ ರವೀಂದ್ರ ಶ್ರೀಕಂಠಯ್ಯ ಟೀಕಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣದಲ್ಲಿ ನಡೆದ ಕೆ.ಶೆಟ್ಟಹಳ್ಳಿ ಹೋಬಳಿ ಮಟ್ಟದ ಜೆಡಿಎಸ್ ಕಾರ್ಯಕರ್ತರ ಸಭೆ ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಧಿಕಾರದ ಆಸೆಗಾಗಿ ಪಕ್ಷಕ್ಕೆ ಮೋಸ ಮಾಡಿ ಇದೀಗ ದೇವೇಗೌಡ ಹಾಗೂ ಕುಮಾರಸ್ವಾಮಿ ಬಗ್ಗೆ ಮಾತನಾಡುತ್ತಿರುವ ಸಚಿವ ನಾರಾಯಣಗೌಡರಿಗೆ ನಾಚಿಕೆ ಆಗಬೇಕು. ಪಕ್ಷ ಎಲ್ಲವನ್ನೂ ಕೊಟ್ಟಿದೆ. ನೀನು ಗೆದ್ದಿರುವುದು ಯಡಿಯೂರಪ್ಪ ಅವರ ಹೆಸರಿನ ಮೇಲೆ ಹೊರತು ಸ್ವಂತ ಬಲದಿಂದ ಅಲ್ಲ. ಈ ಬಾರಿ ಚುನಾವಣೆಯಲ್ಲಿ ನಾರಾಯಣಗೌಡ ಕೆ.ಆರ್.ಪೇಟೆಯಲ್ಲಿ ಠೇವಣಿ ಉಳಿಸಿಕೊಳ್ಳಲ್ಲ ಇದು ಖಚಿತ. ಮುಂದಿನ ದಿನಗಳಲ್ಲಿ ಅವಕಾಶ ಸಿಕ್ಕರೆ ನಾನು ಕೆ.ಆರ್.ಪೇಟೆಗೆ ಹೋಗಿ ನಾರಾಯಣಗೌಡರ ಹೊಸ ವಿಚಾರಗಳನ್ನು ಈಚೆಗೆ ತೆಗೆದು ಮಾತನಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.



ನಾರಾಯಣಗೌಡರನ್ನು ಆಪರೇಷನ್ ಕಮಲ ಮಾಡುವ ಮೊದಲು ಬಿಜೆಪಿಯ ದೊಡ್ಡ ನಾಯಕರು ಜಿಲ್ಲೆಯಲ್ಲಿ ಮೊದಲು ನನ್ನನ್ನು ಸಂಪರ್ಕಿಸಿದ್ದರು. ಆದರೆ ಸಜ್ಜನ ಕುಟುಂಬದಿಂದ ಬಂದ ನಾನು ಆ ಆಫರ್ ಅನ್ನು ತಿರಸ್ಕರಿಸಿದೆ. ಆಮಿಷಕ್ಕೆ ಬಲಿಯಾಗಿದ್ದರೇ ಈಗಾಗಲೇ ಮಂತ್ರಿಯಾಗಿರುತ್ತಿದ್ದೆ. ಆದರೆ ನನ್ನನ್ನು ಶಾಸಕನನ್ನಾಗಿ ಮಾಡಿದ ಜೆಡಿಎಸ್‌ಗೆ ಮೋಸ ಮಾಡಲಿಲ್ಲ ಎಂದರು.

ನಮ್ಮ ಜಿಲ್ಲೆಯ ಸಂಸದೆ ಓರ್ವ ಅಪ್ರಬುದ್ಧ ರಾಜಕಾರಣಿ. ಅವರಿಗೆ ಜೆಡಿಎಸ್ ಹಿನ್ನೆಲೆ ಗೊತ್ತಿಲ್ಲ. ಅನಿರೀಕ್ಷಿತವಾಗಿ ರಾಜಕೀಯಕ್ಕೆ ಬಂದವರು. ಜೆಡಿಎಸ್ ಪಕ್ಷವನ್ನು ಬಡವರು, ರೈತಾಪಿ ವರ್ಗ ಹಾಗೂ ನಿಷ್ಠಾವಂತ ಕಾರ್ಯಕರ್ತರು ಸೇರಿ ಕಟ್ಟಿದ್ದು, ಪಕ್ಷವನ್ನು ಅಷ್ಟು ಸುಲಭವಾಗಿ ಒಡೆಯಲು ಸಾಧ್ಯವಿಲ್ಲ. ಸಂಸದೆ ಸುಮಲತಾ ಮಂಡ್ಯದಲ್ಲಿ ಜೆಡಿಎಸ್ ಭದ್ರಕೋಟೆ ಒಡೆದಿದ್ದೇನೆ ಎಂದು ಹೇಳಿಕೊಂಡು ತಿರುಗಾಡುವುದನ್ನು ಬಿಡಲಿ. ಇಲ್ಲದಿದ್ದರೆ ಜನರೇ ಅವರಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಇದೇ ವೇಳೆ ರೈತ ಸಂಘದ ಮುಖಂಡ ಶ್ರೀಕಂಠಣ್ಣ ಹಾಗೂ ಅವರ ಬೆಂಬಲಿಗರು ಜೆಡಿಎಸ್ ತತ್ವ ಸಿದ್ಧಾಂತ ಒಪ್ಪಿ ಪಕ್ಷಕ್ಕೆ ಸೇರ್ಪಡೆಯಾದರು. ಅಲ್ಲದೇ 200ಕ್ಕೂ ಹೆಚ್ಚು ಯುವಕರು ಬೇರೆ ಪಕ್ಷಗಳನ್ನು ತೊರೆದು ಶಾಸಕ ರವೀಂದ್ರ ಶ್ರೀಕಂಠಯ್ಯ ಅವರನ್ನು ಬೆಂಬಲಿಸಿ ಜೆಡಿಎಸ್ ಸೇರ್ಪಡೆಗೊಂಡರು. ಸಭೆಯಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಪೈ. ಮುಕುಂದಣ್ಣ ಜೆಡಿಎಸ್ ಯುವ ಘಟಕದ ಅಧ್ಯಕ್ಷ ಸಂಜಯ್, ಪಿಎಸ್‌ಎಸ್‌ಕೆ ಮಾಜಿ ಅಧ್ಯಕ್ಷ ಚಿಕ್ಕರಾಮಾಂಜಿಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ದಿವಾಕರ್, ಮುಖಂಡರಾದ ದಯಾನಂದ್, ತಿಲಕ್, ರಾಮಕೃಷ್ಣ, ಗುಂಡಪ್ಪ, ರಾಮಣ್ಣ, ಕುಮಾರಸ್ವಾಮಿ, ಶಂಕರೇಗೌಡ, ಮರಿಗೌಡ, ಕಿರಣ್, ನವೀನ್, ಅನಿಲ್, ಸಾಗರ್, ರಂಗೇಗೌಡ ಇನ್ನಿತರಿದ್ದರು.

ನೊಂದವರಿಗೆ ನ್ಯಾಯ ಕೊಡಿಸಿ: ರಮೇಶ್

ಮಂಡ್ಯ, ಏ.2– ಪೊಲೀಸ್ ಠಾಣೆಗೆ ಬರುವ ದೂರುಗಳನ್ನು ಪರಿಗಣಿಸಿ ಕೆಲಸ ಮಾಡುವ ಜೊತೆಗೆ ನೊಂದವರಿಗೆ ನ್ಯಾಯ ಸಿಗುವಂತೆ ಮಾಡಬೇಕು ಎಂದು ನಿವೃತ್ತ ಪೊಲೀಸ್ ಅಧಿಕಾರಿ ಹೆಚ್.ಎಸ್. ರಮೇಶ್ ತಿಳಿಸಿದರು.



ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯಿಂದ ಪೊಲೀಸ್ ಧ್ವಜಕ್ಕೆ ಗೌರವ ವಂದನೆ ಸಲ್ಲಿಸುವ ಮೂಲಕ ಪೊಲೀಸ್ ಧ್ವಜ ದಿನಾಚರಣೆ ನೆರವೇರಿಸಿ ಮಾತನಾಡಿದ ಅವರು, ಪೊಲೀಸರಿಂದ ಅಮಾಯಕರಿಗೆ ಆಗುವ ತೊಂದರೆ ತಪ್ಪಿಸಿದಾಗ ಮಾತ್ರ ಸಮಾಜದಲ್ಲಿ ಪೊಲೀಸ್ ಇಲಾಖೆಗೆ ಗೌರವ ಹಾಗೂ ಪೊಲೀಸರ ಮೇಲೆ ಒಳ್ಳೆಯ ಭಾವನೆ ಬರುತ್ತದೆ ಎಂದರು. ನಮ್ಮ ವೃತ್ತಿ ಮೈಗೂಡಿಸಿಕೊಂಡು ಯಶಸ್ಸು ಗಳಿಸಬೇಕು. ಸಮಾಜ ಒಳ್ಳೆಯ ಸ್ಥಿತಿಯಲ್ಲಿದೆ ಅಂದರೆ ಅದಕ್ಕೆ ಪೊಲೀಸ್ ಇಲಾಖೆ ಕಾರಣ. ಪೊಲೀಸರು ಸಮಾಜದ ಆಧಾರ ಸ್ತಂಭ ಇದ್ದ ಹಾಗೆ. ಶ್ರದ್ಧೆಯಿಂದ ನಾವು ಕೆಲಸ ಮಾಡಿದರೇ ಪೊಲೀಸ್ ಇಲಾಖೆಗೆ ಗೌರವ ತರಬಹುದು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಎಸ್ಪಿ ಎನ್.ಯತೀಶ್ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.



ಅಪೂರ್ಣ ಕಾಮಗಾರಿ ಹಿನ್ನೆಲೆ

ಮಹದೇಶ್ವರ ಬೆಟ್ಟದಲ್ಲಿ ಪ್ರತಿಮೆ ವೀಕ್ಷಣೆಗೆ ನಿರ್ಬಂಧ



ಮಹದೇಶ್ವರ ಬೆಟ್ಟ, ಏ.2– ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭವಾಗಿರುವುದರಿಂದ ಮಹದೇಶ್ವರ ಬೆಟ್ಟದ ದೀಪದಗಿರಿ ಒಡ್ಡುವಿನಲ್ಲಿ ನಿರ್ಮಿಸಲಾಗಿರುವ ಮಹದೇಶ್ವರ ಸ್ವಾಮಿಯ 108 ಅಡಿ ಎತ್ತರದ ಪ್ರತಿಮೆ ವೀಕ್ಷಣೆಗೆ ಭಕ್ತರಿಗೆ ನಿರ್ಬಂಧ ವಿಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾರ್ಚ್ 31ರ ರಾತ್ರಿ ಪ್ರತಿಮೆ ವೀಕ್ಷಣೆಗೆ ತೆರಳುತ್ತಿದ್ದ ಗುಂಡ್ಲುಪೇಟೆ ತಾಲ್ಲೂಕಿನ ಪುಷ್ಪಲತಾ ಎಂಬ ಮಹಿಳೆ ಬಿದ್ದು ಗಾಯಗೊಂಡಿದ್ದು, ಆ ಬಳಿಕ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಭಕ್ತರ ಪ್ರವೇಶವನ್ನು ನಿರ್ಬಂಧಿಸಿದೆ. ಪುಷ್ಪಲತಾ ಅವರು ಇಬ್ಬರು ಮಕ್ಕಳೊಡನೆ ದೀಪದಗಿರಿ ಒಡ್ಡುವಿಗೆ ತೆರಳುತ್ತಿದ್ದರು. ಬೀದಿ ದೀಪ ಇಲ್ಲದಿರುವುದರಿಂದ ಕಲ್ಲು ತಡೆದು ಬಿದ್ದಾಗ ಕಲ್ಲಿಗೆ ತಲೆ ತಾಗಿದ್ದರಿಂದ ತೀವ್ರ ಪೆಟ್ಟಾಗಿತ್ತು. ಅವರ ಜೊತೆಯಲ್ಲಿದ್ದ ಭಕ್ತರು ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಿದ್ದು, ಮಹಿಳೆಗೆ ಭಾನುವಾರ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಮಾರ್ಚ್ 18ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಮೆಯನ್ನು ಉದ್ಘಾಟಿಸಿದ್ದರು. ಪ್ರತಿಮೆ ಕಾಮಗಾರಿ ಮಾತ್ರ ಮುಗಿದಿದ್ದು, ಮ್ಯೂಸಿಯಂ ಸೇರಿದಂತೆ ಇನ್ನಿತರ ಕೆಲಸಗಳು ಆಗಿರಲಿಲ್ಲ. ಪ್ರತಿಮೆ ಇರುವ ಜಾಗಕ್ಕೆ ತೆರಳುವ ರಸ್ತೆಯ ಅಭಿವೃದ್ಧಿಯಾಗಿಲ್ಲ. ಕಚ್ಚಾ ರಸ್ತೆಯಲ್ಲೇ ಸಾಗಬೇಕಾಗಿದೆ. ಕೂಡಲೇ ರಸ್ತೆ, ವಿದ್ಯುತ್ ಮತ್ತು ಶೌಚಾಲಯ ವ್ಯವಸ್ಥೆಯನ್ನು ಶೀಘ್ರವಾಗಿ ಕಲ್ಪಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಪ್ರತಿಮೆಗೆ ತೆರಳುವ ರಸ್ತೆ ಕಾಮಗಾರಿ ಪ್ರಾರಂಭವಾಗಿರುವುದರಿಂದ ಪ್ರತಿಮೆಗೆ ತೆರಳುವ ಭಕ್ತರಿಗೆ ನಿರ್ಬಂಧ ಹೇರಲಾಗಿದೆ. ಮಹಿಳೆ ಬಿದ್ದಿರುವ ಘಟನೆ ನನ್ನ ಗಮನಕ್ಕೆ ಬಂದಿದೆ. ಮೇಲೆ ಹೋಗುವುದಕ್ಕೆ ಅವಕಾಶ ಇಲ್ಲ ಎಂದು ಭದ್ರತಾ ಸಿಬ್ಬಂದಿ ತಿಳಿಸಿದ್ದರೂ ಅವರು ತೆರಳಿದ್ದು, ವಿಡಿಯೋ ಮಾಡುವ ಸಂದರ್ಭದಲ್ಲಿ ಬಿದ್ದಿದ್ದಾರೆ ಎಂದು ಪ್ರಾಧಿಕಾರದ ಕಾರ್ಯದರ್ಶಿ ಎಸ್.ಕಾತ್ಯಾಯಿನಿ ದೇವಿ ತಿಳಿಸಿದ್ದಾರೆ.

ನಂಜನಗೂಡಲ್ಲಿ ವಿಜೃಂಭಣೆಯ ಪಂಚ ಮಹಾರಥೋತ್ಸವ

ಒಂದನೇ ಪುಟದಿಂದ

ಬೆಳಗ್ಗೆ 6.40ಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಈಡುಗಾಯಿ ಒಡೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ನಾಡಿನ ವಿವಿಧ ಮೂಲೆಗಳಿಂದ ಶನಿವಾರದಿಂದಲೇ ಆಗಮಿಸಿದ ಲಕ್ಷಾಂತರ ಭಕ್ತರು ತೇರಿನ ಹಗ್ಗ ಹಿಡಿದು ಎಳೆಯುವ ಮೂಲಕ ಭಕ್ತಿ ಪರಾಕಾಷ್ಠೆ ಮೆರೆದರು. ಬೆಳಗ್ಗೆ 8.30ಕ್ಕೆ ಗೌತಮ ರಥವು ಯಾವುದೇ ಅಡ್ಡಿ ಆತಂಕಗಳಿಲ್ಲದೆ ಸ್ವಸ್ಥಾನ ಸೇರಿತು.

ಈ ಮೊದಲು ಗಣಪತಿ ರಥ, ಶ್ರೀಕಂಠೇಶ್ವರಸ್ವಾಮಿಯವರ ದೊಡ್ಡರಥ (ಗೌತಮ ರಥ), ನಂತರ ಚಂಡಿಕೇಶ್ವರಸ್ವಾಮಿ, ಸುಬ್ರಹ್ಮಣ್ಯಸ್ವಾಮಿ ಮತ್ತು ಕೊನೆಯಲ್ಲಿ ಶ್ರೀಪಾರ್ವತಮ್ಮನವರ ರಥಗಳು ಯಾವುದೇ ಅಡ್ಡಿ ಆತಂಕವಿಲ್ಲದೆ ಬೆಳಗ್ಗೆ 10.40ರ ವೇಳೆಗೆ ರಥಬೀದಿಯಲ್ಲಿ 1.5 ಕಿಮೀ ಚಲಿಸಿ ಸ್ವಸ್ಥಾನ ತಲುಪಿದವು. 5 ರಥಗಳು ರಥದ ಬೀದಿಗಳಲ್ಲಿ ಚಲಿಸುವಾಗ ರಸ್ತೆ ಇಕ್ಕೆಲಗಳಲ್ಲಿ ನೆರೆದಿದ್ದ ಲಕ್ಷಾಂತರ ಭಕ್ತರು ರಥಕ್ಕೆ ಹಣ್ಣು–ಜವನ ಎಸೆದು ಹರಕೆ ತೀರಿಸಿದರು. ನವ ವಧು–ವರರು ಇಷ್ಟಾರ್ಥ ಸಿದ್ಧಿಗಾಗಿ ಕೋರಿಕೊಂಡರು.

ವಿವಿಧ ಸಂಘ ಸಂಸ್ಥೆಗಳಿಂದ ಪ್ರಸಾದ ವಿತರಣೆ: ವಿವಿಧ ಸಂಘ ಸಂಸ್ಥೆಗಳು ಶ್ರೀಕಂಠೇಶ್ವರಸ್ವಾಮಿ ಜಾತ್ರೆಗೆ ಆಗಮಿಸಿದ್ದ ಭಕ್ತರಿಗೆ ಪಾನಕ, ಮಜ್ಜಿಗೆ, ರೈಸ್‌ಬಾತ್, ಮೊಸರನ್ನ, ಪುಳಿಯೋಗರೆ, ಲಾಡು, ಕುಡಿಯುವ ನೀರಿನ ಬಾಟಲ್‌ಗಳನ್ನು ವಿತರಿಸಿದರು. ದೇವಾಲಯದ ವತಿಯಿಂದಲೂ ದಾಸೋಹ ಭವನದಲ್ಲಿ ಶನಿವಾರ ರಾತ್ರಿ ಮತ್ತು ಭಾನುವಾರ ಬೆಳಗ್ಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.


ವಿಶೇಷ ಹೂವಿನ ಅಲಂಕಾರ: ಶ್ರೀಕಂಠೇಶ್ವರಸ್ವಾಮಿಯವರ ಗೌತಮ ಪಂಚ ಮಹಾರಥೋತ್ಸವದ ಪ್ರಯುಕ್ತ ಐದೂ ರಥಗಳಿಗೂ ವಿಶೇಷವಾಗಿ ಹೂವಿನಿಂದ ಅಲಂಕಾರ ಮಾಡಲಾಗಿತ್ತು. ಬಣ್ಣ ಬಣ್ಣದ ಬಟ್ಟೆ, ದೊಡ್ಡ ಗಾತ್ರದ ಬಾವುಟಗಳನ್ನು ಕಟ್ಟಲಾಗಿತ್ತು. ಅಲ್ಲದೆ ನಗರದ ವಿವಿಧ ಕಟ್ಟಡಗಳಿಗೆ, ಪ್ರಮುಖ ಬೀದಿಗಳಿಗೆ ವಿಶೇಷ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು.

ಸುರಕ್ಷತೆ ದೃಷ್ಟಿಯಿಂದ ರಥ ಬೀದಿಯ 9 ಕಡೆಗಳಲ್ಲಿ ವಾಚ್‌ಟವರ್ ಮತ್ತು 60ಕ್ಕೂ ಹೆಚ್ಚು ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. 5 ಕಡೆಗಳಲ್ಲಿ ಆರೋಗ್ಯ ಕೇಂದ್ರ ಮತ್ತು ಸಹಾಯವಾಣಿ ತೆರೆಯಲಾಗಿತ್ತು. 500ಕ್ಕೂ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಜಾತ್ರೋತ್ಸವದ ಅಂಗವಾಗಿ ಮಾ.26ರಿಂದಲೇ ಧಾರ್ಮಿಕ ಕಾರ್ಯಕ್ರಮ ಪ್ರಾರಂಭವಾಗಿ ದೇವತಾ ಕಾರ್ಯಗಳು ಮುಂದುವರಿದು ಇಂದು ಗೌತಮ ಪಂಚ ರಥೋತ್ಸವ ನೆರವೇರಿತು. ಏ.4ರಂದು ರಾತ್ರಿ 7ಕ್ಕೆ ಕಪಿಲಾ ನದಿಯಲ್ಲಿ ತೆಪ್ಪೋತ್ಸವ ಜರುಗಲಿದೆ. ಏ.6ರಂದು ಮಹಾಸಂಪ್ರೋಕ್ಷಣೆ ಪೂರ್ವಕ ನಂದಿ ವಾಹನೋತ್ಸವ, ಶಯನೋತ್ಸವದೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆಬೀಳಲಿದೆ. ಈ ವೇಳೆ ದೇವಾಲಯದ ಇಓ ಜಗದೀಶ್, ತಹಸೀಲ್ದಾರ್ ಶಿವಕುಮಾರ್, ದೇವಾಲಯದ ಎಇಓ ವೆಂಕಟೇಶ ಪ್ರಸಾದ್, ಶಾಸಕ ಬಿ.ಹರ್ಷವರ್ಧನ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವ ಸೇರಿದಂತೆ ಇತರರಿದ್ದರು.

ನೀತಿ ಸಂಹಿತೆ: ಆರೋಗ್ಯ ಕಾರ್ಡ್ ವಿತರಣೆ ಸ್ಥಗಿತ

ಮೈಸೂರು, ಏ.2– ಕರ್ನಾಟಕ ರಾಜ್ಯಾದ್ಯಂತ ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ, ಆರೋಗ್ಯ ಕರ್ನಾಟಕ ಕಾರ್ಡ್ (ಆರೋಗ್ಯ ಕಾರ್ಡ್) ವಿತರಣೆಯನ್ನು ಮಾ.30ರಿಂದ ಮೇ 15ರವರೆಗೂ ಸ್ಥಗಿತಗೊಳಿಸುವಂತೆ ಆರೋಗ್ಯ ಇಲಾಖೆಯು ಸುತ್ತೋಲೆ ಹೊರಡಿಸಿದೆ. ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಮೇ 10ರಂದು ನಡೆಯಲಿವ ಹಿನ್ನೆಲೆಯಲ್ಲಿ ಈಗಾಗಲೇ ಚುನಾವಣಾ ನೀತಿ ಸಂಹಿತೆ ಜಾರಿಯಾದ ಪರಿಣಾಮ ಆರೋಗ್ಯ ಇಲಾಖೆ ಆಯುಕ್ತ ಡಿ.ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ.



ಬುಧವಾರದಿಂದ ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಾಗಿದೆ. ಹೀಗಾಗಿ, ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಆರೋಗ್ಯ ಕರ್ನಾಟಕ ಕಾರ್ಡ್ ವಿತರಣೆಯನ್ನು ಸ್ಥಗಿತಗೊಳಿಸಬೇಕು. ಜತೆಗೆ ಕಾರ್ಡ್ ನೋಂದಣಿ, ಹಂಚಿಕೆ ಸೇರಿದಂತೆ ಕಾರ್ಡ್ ಸಂಬಂಧಿಸಿದ ಯಾವುದೇ ಚಟುವಟಿಕೆಗಳು ಮುಂದಿನ ಆದೇಶದವರೆಗೂ ಕೈಗೊಳ್ಳಬಾರದು ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಸುತ್ತೋಲೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಆರೋಗ್ಯ ಅಧಿಕಾರಿ, ಜಿಲ್ಲಾಧಿಕಾರಿ, ಜಿಲ್ಲಾಸ್ಪತ್ರೆಗಳ ಮುಖ್ಯಸ್ಥರು, ಆಯುಷ್ಮಾನ್ ಯೋಜನೆ ಜಾರಿ ಅಧಿಕಾರಿಗಳಿಗೆ ಕಳುಹಿಸಲಾಗಿದೆ. ಈ ಮೂಲಕ ಚುನಾವಣೆ ಮುಗಿಯುವವರೆಗೂ ಹೊಸ ಆಯುಷ್ಮಾನ್ ಕಾರ್ಡ್‌ಗೆ ನೋಂದಣಿ ಪ್ರಕ್ರಿಯೆ ಸ್ಥಗಿತವಾಗಲಿದೆ.

ಆರೋಗ್ಯ ಸೇವೆಯಲ್ಲಿ ಯಾವುದೇ ಅಡ್ಡಿ ಇಲ್ಲ : ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಆರೋಗ್ಯ ಕರ್ನಾಟಕ ಕಾರ್ಡ್ ಹೊಸದಾಗಿ ವಿತರಣೆ ಮಾತ್ರ ನಿರ್ಬಂಧ ಹಾಕಲಾಗಿದೆ. ಆದರೆ, ಈ ಆರೋಗ್ಯ ಕಾರ್ಡ್ ಬಳಸಿ ಚಿಕಿತ್ಸೆ ಪಡೆಯಲು ಯಾವುದೇ ನಿರ್ಬಂಧ ಇಲ್ಲ. ಈಗಾಗಲೇ ಕಾರ್ಡ್ ಹೊಂದಿರುವ ಫಲಾನುಭವಿಗಳು ಆಸ್ಪತ್ರೆಯಲ್ಲಿ ಆರೋಗ್ಯ ಸೌಲಭ್ಯಗಳನ್ನು ಎಂದಿನಂತೆಯೇ ಪಡೆಯಬಹುದು.

ಕೆಆರ್‌ಎಸ್‌ನಿಂದ ಒಣಗುತ್ತಿರುವ ಬೆಳೆಗೆ ನೀರು ಬಿಡುಗಡೆ: ತಮ್ಮಣ್ಣ



ಭಾರತೀನಗರ, ಏ.2– ರೈತರ ಬೆಳೆಗಳು ನೀರಿಲ್ಲದೆ ಒಣಗುತ್ತಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್‌ನಿಂದ ನೀರನ್ನು ಬಿಡಲಾಗಿದೆ ಎಂದು ಶಾಸಕ ಡಿ.ಸಿ.ತಮ್ಮಣ್ಣ ತಿಳಿಸಿದರು.

ಇಲ್ಲಿಗೆ ಸಮೀಪದ ಕೂಳಗೆರೆ ಗ್ರಾಪಂ ವ್ಯಾಪ್ತಿಯಲ್ಲಿ ಚುನಾವಣಾ ಪ್ರಚಾರದ ವೇಳೆ ಮಾತನಾಡಿದ ಅವರು, ಕೆಆರ್‌ಎಸ್‌ನಿಂದ ಕಟ್ಟು ಪದ್ಧತಿಯಲ್ಲಿ ಪ್ರತಿ ವರ್ಷ 18 ದಿನಗಳ ಕಾಲ ನೀರನ್ನು ನೀಡಲಾಗುತ್ತಿತ್ತು. ಆದರೆ ಈ ಬಾರಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಕುಸಿದ ಹಿನ್ನೆಲೆಯಲ್ಲಿ 12 ದಿನಕ್ಕೆ ಬೆಳೆಗಳಿಗೆ ನೀರು ಕೊಡುವುದನ್ನು ನಿಲ್ಲಿಸಲಾಗಿತ್ತು. ಪರಿಣಾಮ ಬೆಳೆಗಳು ಒಣಗುತ್ತಿತ್ತು. ಹೀಗಾಗಿ ರೈತರು ಅಧೀಕ್ಷಕ ಅಭಿಯಂತರನ್ನು ಒತ್ತಾಯಿಸಿದ ಮೇರೆಗೆ ಮದ್ದೂರಿನ ಕಾಲುವೆಗಳಿಗೆ ನೀರನ್ನು ಬಿಡಲಾಗಿದೆ. ರೈತರು ರಾಗಿ, ಭತ್ತ ಸೇರಿದಂತೆ ಬೆಳೆದು ನಿಂತಿರುವ ಕಬ್ಬಿಗೆ ನೀರನ್ನು ಹಾಯಿಸಲು ಮುಂದಾಗಬೇಕೆಂದು ಸಲಹೆ ನೀಡಿದರು.

ಜೆಡಿಎಸ್‌ಗೆ ಬೆಂಬಲ ನೀಡಿ: ಹೆಚ್.ಡಿ.ಕುಮಾರಸ್ವಾಮಿ ಪಂಚರತ್ನ ಯೋಜನೆ ಜಾರಿಗೆ ತಂದು ರೈತರ ಬದುಕನ್ನು ಹಸನು ಮಾಡಲು ಮುಂದಾಗಿದ್ದಾರೆ. ಜೆಡಿಎಸ್ ಅಧಿಕಾರಕ್ಕೆ ಬಂದರೆ ಮಾತ್ರ ರೈತರಿಗೆ ಉಳಿಗಾಲ. ಇಲ್ಲದಿದ್ದರೆ ಜನಸಾಮಾನ್ಯರು ಬದುಕಲು ಕಷ್ಟವಾಗುತ್ತದೆ. ಪ್ರಾದೇಶಿಕ ಪಕ್ಷ ಯಾವ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದೆಯೋ ಅಂತಹ ರಾಜ್ಯಗಳು ಅಭಿವೃದ್ಧಿ ಕಂಡಿವೆ. ನಮ್ಮ ರಾಜ್ಯ ಅಭಿವೃದ್ಧಿ ಕಾಣಬೇಕಾದರೆ ಜೆಡಿಎಸ್ ಬೆಂಬಲಿಸಿ ಎಂದರು.

ಶಕ್ತಿಮೀರಿ ಕೆಲಸ ಮಾಡಿದ್ದೇನೆ: ಮದ್ದೂರು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಪಕ್ಷಾತೀತವಾಗಿ ಶ್ರಮಿಸಿದ್ದೇನೆ. ನನ್ನ ಅವಧಿಯಲ್ಲಿ ಮಾಡಿರುವ ಕೆಲಸಗಳು ನನಗೆ ತೃಪ್ತಿ ತಂದಿದೆ. ಶಕ್ತಿಮೀರಿ ಕೆಲಸ ಮಾಡಿದ್ದೇನೆ. ಮುಂದೆಯೂ ಕೆಲಸ ಮಾಡಲು ನನಗೆ ಕೈಜೋಡಿಸಿ ಎಂದು ಕೋರಿದರು.

ಇದೇ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಮುಖಂಡರಾದ ರಾಜಣ್ಣ, ಕೆಂಗಲ್‌ಗೌಡ, ಶೇಖರ್ ಸೇರಿದಂತೆ ಹಲವರಿದ್ದರು.

ಮೈಸೂರು ಮಿತ್ರ ಸೋಮವಾರ 3 ಏಪ್ರಿಲ್ 2023

ಉತ್ತಮ ಸಮಾಜಕ್ಕೆ ಪೊಲೀಸ್ ಇಲಾಖೆ ಪಾತ್ರ ಅಗತ್ಯ

ಧ್ವಜ ದಿನಾಚರಣೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಟ್ರೋಫಿ ವಿತರಣಾ ಸಮಾರಂಭ



ಮಡಿಕೇರಿ, ಏ.2– ಸಮಾಜದಲ್ಲಿ ಶಾಂತಿ ಕಾಪಾಡಲು ಪೊಲೀಸ್ ಇಲಾಖೆ ಹಗಲಿರುಳು ಶ್ರಮಿಸುತ್ತಿದ್ದು, ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಇಲಾಖೆಯ ಪಾತ್ರ ಮಹತ್ವದಾಗಿದೆ ಎಂದು ನಿವೃತ್ತ ವೃತ್ತ ನಿರೀಕ್ಷಕ ಸಿ.ಎನ್.ದಿವಾಕರ್ ಹೇಳಿದರು.

ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಜಿಲ್ಲಾ ಪೊಲೀಸ್ ಕವಾಯಿತು ಮೈದಾನದಲ್ಲಿ ಆಯೋಜಿತ 'ಧ್ವಜ ದಿನಾಚರಣೆ' ಮತ್ತು 'ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಟ್ರೋಫಿ' ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಪೊಲೀಸರು ಕರ್ತವ್ಯ ನಿರ್ವಹಿಸುವ ಸಂದರ್ಭ ಹಲವಾರು ಸವಾಲುಗಳು ಎದುರಾಗುತ್ತವೆ. ಈ ಸಂದರ್ಭ ಧೈರ್ಯ ಗುಂದದೇ ಎಲ್ಲಾ ಸಂಕಷ್ಟಗಳನ್ನು ಎದುರಿಸಿ ಸಮಾಜದ ಸ್ವಾಸ್ಥ್ಯಕ್ಕಾಗಿ ಪೊಲೀಸ್ ಇಲಾಖೆ ಶ್ರಮಿಸುತ್ತದೆ. ಸಾರ್ವಜನಿಕರು ಈ ಸೇವೆಯನ್ನು ಮುಕ್ತವಾಗಿ ಶ್ಲಾಘಿಸಬೇಕು ಎಂದು ದಿವಾಕರ್ ಹೇಳಿದರು. ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಏರ್ ಮಾರ್ಷಲ್ ನಂದಾ ಕಾರ್ಯಪ್ಪ, ಪೊಲೀಸ್ ಇಲಾಖೆಯ ಕರ್ತವ್ಯದ ಕುರಿತು ಮೆಚ್ಚುಗೆಯ ನುಡಿಗಳನ್ನಾಡಿದರು.

ಪೊಲೀಸ್ ಧ್ವಜ ದಿನಾಚರಣೆ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸೇವೆಯನ್ನು ಸ್ಮರಿಸುವ ದಿನವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಹೇಳಿದರು. ದೇಶದ ಗಡಿಯಲ್ಲಿ ಸೈನಿಕರು ಹೇಗೆ ಸೇವೆ ಸಲ್ಲಿಸುತ್ತಿದ್ದಾರೆಯೋ ಅದೇ ಮಾದರಿಯಲ್ಲಿ ದೇಶದ ಒಳಗೆ ಶಾಂತಿ, ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಶ್ರಮ ವಹಿಸುತ್ತಿದೆ ಎಂದು ಹೇಳಿದರು.

ಟ್ರೋಫಿ ವಿತರಣೆ: ಜಿಲ್ಲಾ ಪೊಲೀಸ್ ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಕೆಗಾಗಿ ನೀಡಲಾಗುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಟ್ರೋಫಿಯನ್ನು ಈ ಬಾರಿ ಕುಶಾಲನಗರ ಗ್ರಾಮಾಂತರ ಠಾಣೆಯ ಸಿಬ್ಬಂದಿ ವಿ.ಪ್ರಕಾಶ್ ಅವರು ಪಡೆದುಕೊಂಡರು. ಇತ್ತೀಚೆಗೆ ಕುಶಾಲನಗರದ ಅಮನ್‌ವನ ರೆಸಾರ್ಟ್‌ನಲ್ಲಿ ನಡೆದಿದ್ದ ಕಳವು ಪ್ರಕರಣವನ್ನು ಭೇದಿಸುವಲ್ಲಿ ಪೊಲೀಸ್ ಸಿಬ್ಬಂದಿ ವಿ.ಪ್ರಕಾಶ್ ಪ್ರಮುಖ ಪಾತ್ರ ವಹಿಸಿದ್ದು, ಏರ್‌ಮಾರ್ಷಲ್ ನಂದಾ ಕಾರ್ಯಪ್ಪ ಅವರು ಟ್ರೋಫಿ ವಿತರಿಸಿ, ಶುಭ ಕೋರಿದರು.

ಟಿಪ್ಪು ಜಯಂತಿ ಹಾಗೂ ವಿವಿಧ ಪ್ರಕರಣಗಳ ಪತ್ತೆ ಕಾರ್ಯದಲ್ಲಿ ಉತ್ತಮ ಸೇವೆ ಸಲ್ಲಿಸಿರುವುದನ್ನು ಪರಿಗಣಿಸಿ 'ಜಿಲ್ಲಾ ವಿಶೇಷ ದಳದ' ಪೊಲೀಸ್ ಸಿಬ್ಬಂದಿ ಸವಿತಾ ಅವರಿಗೆ 'ಅತ್ಯುತ್ತಮ ಪೊಲೀಸ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಪ್ರದಾನಕ್ಕೂ ಮುನ್ನ ಜಿಲ್ಲಾ ಪೊಲೀಸ್ ತುಕಡಿ ಪಥ ಸಂಚಲನದ ಮೂಲಕ ಗಣ್ಯ ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿತು. ಈ ಸಂದರ್ಭ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್, ವಿವಿಧ ಪೊಲೀಸ್ ಉಪ ವಿಭಾಗಗಳ ಡಿವೈಎಸ್‌ಪಿಗಳು, ವೃತ್ತ ನಿರೀಕ್ಷಕರು, ಉಪ ನಿರೀಕ್ಷಕರು ಉಪಸ್ಥಿತರಿದ್ದರು.

ಕೊಡವ ಕುಟುಂಬಗಳ ಅಪ್ಪಚೆಟ್ಟೋಳಂಡ ಹಾಕಿ ಉತ್ಸವ

ಮೇಕೇರಿರ, ಮಂಡೇಪಂಡ, ನೆಲ್ಲಮಕ್ಕಡ ಸೇರಿ 15 ತಂಡಗಳು ಮುಂದಿನ ಹಂತಕ್ಕೆ ಪ್ರವೇಶ



ನಾಪೋಕ್ಲು, ಏ.2– ಕೊಡವ ಕುಟುಂಬಗಳ ನಡುವಿನ 23ನೇ ವರ್ಷದ ಅಪ್ಪಚೆಟ್ಟೋಳಂಡ ಹಾಕಿ ಪಂದ್ಯಾವಳಿಯಲ್ಲಿ ಮೇಕೇರಿರ, ಮಂಡೇಪಂಡ, ನೆಲ್ಲಮಕ್ಕಡ ಸೇರಿದಂತೆ ಒಟ್ಟು 15 ತಂಡಗಳು ಗೆದ್ದು ಮುಂದಿನ ಹಂತ ಪ್ರವೇಶಿಸಿತು. ಇಲ್ಲಿನ ಜನರಲ್ ತಿಮ್ಮಯ್ಯ ತಾಲೂಕು ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಅಪ್ಪಚೆಟ್ಟೋಳಂಡ ಪಂದ್ಯದಲ್ಲಿ ಸೋಮವಾರ ಕುಪ್ಪಂಡ, ಪೆಮ್ಮಂಡ ಸೇರಿ 30 ತಂಡಗಳು ಸೆಣಸಾಟ ನಡೆಸಲಿವೆ.

ವಿವರ: ಅಚ್ಚಪಂಡ ತಂಡ ಬಿದ್ದಂಡ ವಿರುದ್ಧ 2–1 ಗೋಲುಗಳ ಅಂತರದಲ್ಲಿ ಗೆಲುವು ಪಡೆದುಕೊಂಡಿತು. ಮೇಕೇರಿರ ಚೀಯಕ್ಪೂವಂಡ ವಿರುದ್ಧ 6–1 ಗೋಲುಗಳ ಅಂತರದಲ್ಲಿ ಭರ್ಜರಿ ಗೆಲುವಿನ ನಗೆ ಬೀರಿತು. ಅಂತರಾಷ್ಟ್ರೀಯ ಆಟಗಾರ ಮೇಕೇರಿರ ನಿತಿನ್ ತಿಮ್ಮಯ್ಯ ಮೇಕೇರಿರ ತಂಡದಲ್ಲಿ ಭಾಗವಹಿಸಿದ್ದರು. ಐಚೆಟ್ಟೀರ ತಂಡವು ಚೇಂದಿರ ವಿರುದ್ಧ 3–6 ಗೋಲುಗಳ ಅಂತರದಲ್ಲಿ ಸೋಲನ್ನು ಒಪ್ಪಿಕೊಂಡಿತ್ತು.

ಇಟ್ಟೀರ ಕೊಂಗೆಟ್ಟೀರ ತಂಡದ ವಿರುದ್ಧ 2–0 ಗೋಲುಗಳಿಂದ ಜಯಭೇರಿ ಬಾರಿಸಿತು. ಕರವಟ್ಟೀರ ಕಲ್ಯಾಟಂಡ ವಿರುದ್ಧ 3–0 ಗೋಲುಗಳಲ್ಲಿ, ಪುಳ್ಳಂಗಡ ತಂಡವು ಕಳ್ಳಿಚಂಡ ವಿರುದ್ಧ 1–0 ಗೋಲುಗಳಿಂದ ಗೆದ್ದು ಸಂಭ್ರಮಿಸಿದರು. ಪುದಿಯೊಕ್ಕಡ ಬಾರಿಯಂಡ ವಿರುದ್ಧ 1–0 ಗೋಲುಗಳಲ್ಲಿ ಜಯಿಸಿತು. ಕೊಂಗಂಡ ತಂಡ ನಾಳಿಯಂಡ ವಿರುದ್ಧ ಪೈಪೋಟಿ ನೀಡಿ 7–6 ಗೋಲುಗಳಲ್ಲಿ ಗೆಲುವು ಪಡೆದುಕೊಂಡಿತ್ತು.

ಚೌರೀರ(ಹೊದ್ದೂರು) ಮೇರಿಯಂಡ ತಂಡವನ್ನು 7–6 ಗೋಲುಗಳ ಅಂತರದಲ್ಲಿ ಸೋಲಿಸಿತು. ಕುಲ್ಲೇಟೀರ ಮಾತಂಡವನ್ನು 5–2 ಗೋಲುಗಳಲ್ಲಿ ಜಯಿಸಿತು. ಚೆಕ್ಕೇರ ತಂಡ ಬೊಳ್ಳೆಪಂಡ ವಿರುದ್ಧ 2–1 ಅಂತರದಲ್ಲಿ ಗೆಲುವು ಸಾಧಿಸಿತು. ಕಲಿಯಂಡ ಅಲ್ಲಂಡ ವಿರುದ್ಧ 1–0 ಗೋಲು ಹೊಡೆದು ಗೆಲುವಿನ ನಗೆ ಬೀರಿತು. ಮುರುವಂಡ ಅಲ್ಲಂಡ ವಿರುದ್ಧ 2–0 ಗೋಲುಗಳನ್ನು ಹೊಡೆಯುವುದರ ಮೂಲಕ ಗೆಲುವು ಪಡೆದುಕೊಂಡಿತು.

ಮುಕ್ಕಾಟೀರ(ಪಲಿಕೋಟ್) ಮಾರ್ಚಂಡ ವಿರುದ್ಧ 2–0 ಗೋಲುಗಳಿಂದ, ಅಮ್ಮಣಿಚಂಡ ಐನಂಡ ತಂಡದ ವಿರುದ್ಧ 8–7 ಗೋಲು ಹೊಡೆದು ಗೆಲುವು ಪಡೆದುಕೊಂಡಿತು. ಮಂಡೇಪಂಡ ತಂಡ ಕೋದಂಡ ವಿರುದ್ಧ 4–1 ಗೋಲುಗಳಿಂದ ಜಯಿಸಿತು, ನೆಲ್ಲಮಕ್ಕಡ ಪಟ್ಟಡ ತಂಡದ ವಿರುದ್ಧ 4–1 ಅಂತರದಲ್ಲಿ ಗೆಲುವು ಪಡೆದುಕೊಂಡು ಮುಂದಿನ ಹಂತ ಪ್ರವೇಶಿಸಿತು.

ಕೊಡಗು ಜಿಲ್ಲೆಯ ಇಬ್ಬರಿಗೆ ಮುಖ್ಯಮಂತ್ರಿ ಪೊಲೀಸ್ ಪದಕ





ಮಡಿಕೇರಿ, ಏ.2– ಪೊಲೀಸ್ ಇಲಾಖೆಯಲ್ಲಿ ಶ್ಲಾಘನೀಯ ಸೇವೆಗೆ ನೀಡಲಾಗುವ ಮುಖ್ಯಮಂತ್ರಿ ಪೊಲೀಸ್ ಪದಕಕ್ಕೆ ಕೊಡಗು ಜಿಲ್ಲೆಯ ಇಬ್ಬರು ಆಯ್ಕೆಗೊಂಡಿದ್ದಾರೆ. ಮಡಿಕೇರಿ ವಿಭಾಗದ ಸಿಐಡಿ ಅರಣ್ಯ ಸಂಚಾರಿ ಪೊಲೀಸ್ ದಳದ ಉಪನಿರೀಕ್ಷಕರಾದ ಸಿ.ಯು. ಸವಿ ಹಾಗೂ ಜಿಲ್ಲಾ ಅಪರಾಧ ಪತ್ತೆದಳದ ಮುಖ್ಯಪೇದೆ ಎಂ.ಎನ್. ನಿರಂಜನ್ ಆಯ್ಕೆಯಾಗಿದ್ದಾರೆ.

ಸವಿ ಅವರು ಕಳೆದ 13 ವರ್ಷಗಳಿಂದ ಪೊಲೀಸ್ ಸೇವೆಯಲ್ಲಿದ್ದು ನಂಜನಗೂಡು, ಬೈಲುಕುಪ್ಪೆ ಸೇರಿದಂತೆ ಇನ್ನಿತರ ಕಡೆಗಳಲ್ಲಿ ಕರ್ತವ್ಯ ನಿರ್ವಹಿಸಿ ಪ್ರಸ್ತುತ ಮಡಿಕೇರಿ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಮೂಲತಃ ಕೊಳಕೇರಿಯ ನಿವಾಸಿಯಾಗಿದ್ದಾರೆ.

ಮಡಿಕೇರಿಯ ಅಶೋಕಪುರ ನಿವಾಸಿಯಾಗಿರುವ ಎಂ.ಎನ್. ನಿರಂಜನ್ ಅವರ ಕಳೆದ 22 ವರ್ಷಗಳಿಂದ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಜಿಲ್ಲಾ ಅಪರಾಧ ಗುಪ್ತದಳದಲ್ಲಿ ಸೇವೆಯಲ್ಲಿರುವ ನಿರಂಜನ್ ಅವರು ಈ ಹಿಂದೆ ಮಡಿಕೇರಿ ಗ್ರಾಮಾಂತರ ಠಾಣೆ ಸೇರಿದಂತೆ ವಿವಿಧ ಠಾಣೆಗಳಲ್ಲಿ ಸೇವೆ ಸಲ್ಲಿಸಿದ್ದರು. ಅಪರಾಧ ಗುಪ್ತದಳದಲ್ಲಿ ಪತ್ತೆ ಕಾರ್ಯದಲ್ಲಿ ಉತ್ತಮ ಸೇವೆ ಸಲ್ಲಿಸಿರುವ ಹಿನ್ನೆಲೆಯಲ್ಲಿ ಇವರನ್ನು ಮುಖ್ಯಮಂತ್ರಿ ಪೊಲೀಸ್ ಪದಕಕ್ಕೆ ಆಯ್ಕೆ ಮಾಡಲಾಗಿದೆ.

ವಿಷ್ಣುಮೂರ್ತಿ ದೇವಸ್ಥಾನ ಜೀರ್ಣೋದ್ಧಾರಕ್ಕಾಗಿ

2 ಲಕ್ಷ ರೂ. ಡಿಡಿ ಹಸ್ತಾಂತರ



ವಿರಾಜಪೇಟೆ, ಏ.2– ವಿರಾಜಪೇಟೆ ಸಮೀಪದ ಬೆಳ್ಳುಮಾಡು ಆಡುಕೋಣಿ ಶಾಸ್ತಾವು ಈಶ್ವರ ವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ವತಿಯಿಂದ ಮಂಜೂರಾದ 2 ಲಕ್ಷ ರೂ. ಅನುದಾನದ ಡಿಡಿಯನ್ನು ಯೋಜನೆಯ ಕೊಡಗು ಜಿಲ್ಲಾ ನಿರ್ದೇಶಕರಾದ ಲೀಲಾವತಿ ಅವರು ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಚಂಗುಲಂಡ ಪಿ.ಬಿದ್ದಪ್ಪ ಅವರಿಗೆ ಹಸ್ತಾಂತರ ಮಾಡಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ದಿನೇಶ್, ಮೇಲ್ವಿಚಾರಕ ನಾಗರಾಜ್, ಸೇವಾಪ್ರತಿನಿಧಿ ತೇಜಸ್ವಿನಿ, ಒಕ್ಕೂಟದ ಅಧ್ಯಕ್ಷೆ ಜಮುನಾ, ದೇವಸ್ಥಾನ ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳಾದ ಪಟ್ಟಂಡ ಕಾವೇರಪ್ಪ, ಪಟ್ಟಂಡ ಅರುಣ, ಮಾತಂಡ ಮಧು, ಎಂ.ದಿನೇಶ್, ಮಾತಂಡ ದೇವಯ್ಯ, ಕುಯ್ಮಂಡ ಉತ್ತಯ್ಯ, ಮಾತಂಡ ಕಾಳಪ್ಪ ಹಾಗೂ ಪದಾಧಿಕಾರಿಗಳು, ಸ್ವಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಏ.6, ಹನುಮ ಜಯಂತಿ

ವಿರಾಜಪೇಟೆ, ಏ.2– ಪಟ್ಟಣದ ಛತ್ರಕೆರೆ ಬಳಿಯಿರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಏ.6 ರಂದು ಶ್ರೀ ಹನುಮ ಜಯಂತಿಯನ್ನು ಆಚರಿಸಲಾಗುವುದು. ಹನುಮ ಜಯಂತಿ ಅಂಗವಾಗಿ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆಗಳು ನಡೆಯಲಿದ್ದು ಮಧ್ಯಾಹ್ನ 12.30 ಕ್ಕೆ ಮಹಾಪೂಜೆ ಪ್ರಸಾದ ವಿನಿಯೋಗ ನಡೆಯಲಿದೆ. ಭಕ್ತಾದಿಗಳು ಆಗಮಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ದೇವಸ್ಥಾನ ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ.

ಮಡಿಕೇರಿ ವಿಧಾನಸಭಾ ಕ್ಷೇತ್ರದಿಂದ ಆಮ್ ಆದ್ಮಿ ಪಾರ್ಟಿ ಅಭ್ಯರ್ಥಿ ಟಿ.ಕೆ. ಸಾಯಿಕುಮಾರ್



ಮಡಿಕೇರಿ, ಏ.2– ಮಡಿಕೇರಿ ವಿಧಾನಸಭಾ ಕ್ಷೇತ್ರದ ಆಮ್ ಆದ್ಮಿ ಪಾರ್ಟಿಯ ಅಭ್ಯರ್ಥಿಯನ್ನಾಗಿ ಟಿ.ಕೆ. ಸಾಯಿಕುಮಾರ್ ಅವರನ್ನು ಕಣಕ್ಕಿಳಿಸಲಾಗಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಬೋಜಣ್ಣ ಸೋಮಯ್ಯ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಆಮ್ ಆದ್ಮಿ ಪಾರ್ಟಿಯ ರಾಜ್ಯಾಧ್ಯಕ್ಷ ಪೃಥ್ವಿರೆಡ್ಡಿ ಅವರು ಬೆಂಗಳೂರಿನಲ್ಲಿ ಮಡಿಕೇರಿ ಕ್ಷೇತ್ರ ಸೇರಿದಂತೆ 142 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಡುಗಡೆ ಮಾಡಿದರು ಎಂದು ತಿಳಿಸಿದ್ದಾರೆ. ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸದ್ಯದಲ್ಲೇ ಅಭ್ಯರ್ಥಿಯನ್ನು ಘೋಷಿಸಲಾಗುವುದೆಂದು ಹೇಳಿದ್ದಾರೆ.

ದಾರಿಯಲ್ಲಿ ಸಿಕ್ಕಿದ ಚಿನ್ನದ ಉಂಗುರವನ್ನು ದೇವಾಲಯಕ್ಕೆ ನೀಡಿದ ಪತ್ರಿಕಾ ವಿತರಕ



ಕುಶಾಲನಗರ, ಏ.2– ದಾರಿಯಲ್ಲಿ ಸಿಕ್ಕಿದ ಚಿನ್ನದುಂಗುರದ ವಾರಸುದಾರರು ಪತ್ತೆಯಾಗದ ಹಿನ್ನೆಲೆಯಲ್ಲಿ ಉಂಗುರವನ್ನು ಇಲ್ಲಿನ ಗಣಪತಿ ದೇವರಿಗೆ ಅರ್ಪಿಸುವ ಮೂಲಕ ಹಿರಿಯ ಪತ್ರಿಕಾ ವಿತರಕ ವಿ.ಪಿ. ಪ್ರಕಾಶ್ ಪ್ರಾಮಾಣಿಕತೆ ಮೆರೆದಿದ್ದಾರೆ.

ಕಳೆದ ಎರಡು ತಿಂಗಳ ಹಿಂದೆ ಇಲ್ಲಿನ ಹಿರಿಯ ಪತ್ರಿಕಾ ವಿತರಕ ವಿ.ಪಿ.ಪ್ರಕಾಶ್ ಅವರು ಪತ್ರಿಕೆಗಳನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಚಿನ್ನದ ಉಂಗುರ ಸಿಕ್ಕಿದೆ. ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿದ ಬಳಿಕವೂ ವಾರಸುದಾರರು ಬಾರದ ಹಿನ್ನೆಲೆಯಲ್ಲಿ 18 ಸಾವಿರ ರೂ. ಮೌಲ್ಯದ ಉಂಗುರವನ್ನು ಪ್ರಧಾನ ಅರ್ಚಕ ಆರ್.ಕೆ.ನಾಗೇಂದ್ರ ಬಾಬು, ಸೇವಾ ಸಮಿತಿ ಅಧ್ಯಕ್ಷ ವಿ.ಎನ್. ವಸಂತಕುಮಾರ್ ಅವರಿಗೆ ಹಸ್ತಾಂತರಿಸಿದರು.

ಶಿವನಸಮುದ್ರದಲ್ಲಿ ಸೋಮೇಶ್ವರ ಬ್ರಹ್ಮರಥೋತ್ಸವ, ಕೊಳ್ಳೇಗಾಲದಲ್ಲಿ ಮರಳೇಶ್ವರ ವೈಭವದ ರಥೋತ್ಸವ





ಕೊಳ್ಳೇಗಾಲ, ಏ.2– ಕೊಳ್ಳೇಗಾಲ ನಗರದಲ್ಲಿ ಮರಳೇಶ್ವರ ರಥೋತ್ಸವ, ತಾಲೂಕಿನ ಸತ್ತೇಗಾಲ ಜಿಪಂ ವ್ಯಾಪ್ತಿಯ ಶಿವನಸಮುದ್ರದ ಸೋಮೇಶ್ವರ ಬ್ರಹ್ಮ ರಥೋತ್ಸವವು ವೈಭವದಿಂದ ನಡೆಯಿತು.

ಶ್ರೀ ಮೀನಾಕ್ಷಿ ಸಮೇತ ಶ್ರೀ ಮರುಳೇಶ್ವರ ಸ್ವಾಮಿ ಬ್ರಹ್ಮರಥೋತ್ಸವವು ನೂರಾರು ಭಕ್ತರ ಸಮ್ಮುಖದಲ್ಲಿ ಭಾನುವಾರ ವಿಧಿ, ವಿಧಾನಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು. ಉತ್ಸವಮೂರ್ತಿಯನ್ನು ಹೂವಿನಿಂದ ವಿಶೇಷ ರೀತಿಯಲ್ಲಿ ಅಲಂಕರಿಸಿದ್ದ ತೇರಿನಲ್ಲಿ ಪ್ರತಿಷ್ಠಾಪಿಸಿದ ಬಳಿಕ ವಿಶೇಷ ಪೂಜೆ, ಮಂಗಳಾರತಿ ಸಲ್ಲಿಸಲಾಯಿತು. ನಂತರ ರಥದ ಚಕ್ರಕ್ಕೆ ತಹಸೀಲ್ದಾರ್ ಕಚೇರಿಯ ಆರ್‌ಐ ನಿರಂಜನ್ ಕಾಯಿ ಹೊಡೆಯುವ ಮೂಲಕ ಚಾಲನೆ ನೀಡಿ, ಶುಭ ಕೋರಿದರು.

ಇಂದಿನ ಸೇವಾರ್ಥದಾರರಾದ ಅಚ್ಗಾಲ್ ನಾಗರಾಜಪ್ಪ ಅವರ ಕುಟುಂಬ ಹಾಜರಿದ್ದು, ವಿಶೇಷ ಪೂಜೆಯಲ್ಲಿ ಪಾಲ್ಗೊಂಡರು. ತಾಲೂಕಿನ ಶಿವನಸಮುದ್ರ ಸಮೂಹ ದೇವಾಲಯದಲ್ಲಿ ಪ್ರಸನ್ನ ಮೀನಾಕ್ಷಿ ಸೋಮೇಶ್ವರ ಉತ್ಸವ ಮೂರ್ತಿಯನ್ನು ಅಲಂಕೃತಗೊಂಡ ರಥದ ಮೇಲೆ ಇಟ್ಟು ಪೂಜೆ ಸಲ್ಲಿಸಿ ಬಳಿಕ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಅವರು ರಥೋತ್ಸವಕ್ಕೆ ಚಾಲನೆ ನೀಡಿದರು. ಈ ವೇಳೆ ಹಾಜರಿದ್ದ ಭಕ್ತರು ರಥವನ್ನು ಎಳೆಯುವ ಮೂಲಕ ತೇರಿಗೆ ಹಣ್ಣು–ಜವನ ಎಸೆದು ತಮ್ಮ ಹರಕೆ ಸಮರ್ಪಿಸಿದರು.

ಇದಕ್ಕೂ ಮುನ್ನ ಮುಂಜಾನೆಯಿಂದಲೇ ದೇಗುಲದಲ್ಲಿ ಉತ್ಸವಮೂರ್ತಿಗೆ ಫಲಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಶಿವಯಾಗ, ಯಾತ್ರಾ ದಾನೋತ್ಸವ, ವಾಸ್ತು ಬಲಿ ನಡೆಸಿ ಮಹಾಮಂಗಳಾರತಿ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ಪೂಜೆ ವೇಳೆಯಲ್ಲಿ ಮಾಜಿ ಸಚಿವ ನರೇಂದ್ರಸ್ವಾಮಿ ಪಾಲ್ಗೊಂಡು ತಮ್ಮ ಹರಕೆ ಸಮರ್ಪಿಸಿದರು. ತೇರಿನ ಬಳಿಕ ಸಾವಿರಾರು ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಜರುಗಿತು.

ಅಂತರರಾಜ್ಯ ಚೆಕ್‌ಪೋಸ್ಟ್‌ಗಳಿಗೆ ಡಿಸಿ ರಮೇಶ್ ಭೇಟಿ, ಪರಿಶೀಲನೆ



ಚಾಮರಾಜನಗರ, ಏ.2– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಶನಿವಾರ ಸಂಜೆ ಹನೂರು ಭಾಗದ ಅಂತರರಾಜ್ಯ ಚೆಕ್‌ಪೋಸ್ಟ್‌ಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಅಂತರರಾಜ್ಯ ಚೆಕ್‌ಪೋಸ್ಟ್ ನಾಲ್ ರೋಡ್ (ಗರಿಕೆಕಂಡಿ)ಗೆ ಭೇಟಿ ನೀಡಿ ಪರಿಶೀಲನೆ ಮಾಡಿದರು. ವಾಹನಗಳ ಓಡಾಟ, ತಪಾಸಣೆ ನಡೆಸಿರುವ ಬಗ್ಗೆ ಚೆಕ್‌ಪೋಸ್ಟ್ ನಿಯೋಜಿತರಾಗಿರುವ ಅಧಿಕಾರಿಗಳಿಂದ ವಿವರವಾಗಿ ಮಾಹಿತಿ ಪಡೆದರು. ನಾಲಾ ರೋಡ್ ಚೆಕ್‌ಪೋಸ್ಟ್‌ನಲ್ಲಿ ನಿರ್ವಹಿಸಲಾಗಿರುವ ವಹಿ ದಾಖಲು ಪುಸ್ತಕಗಳನ್ನು ವೀಕ್ಷಿಸಿದರು. ತಪಾಸಣಾ ಕಾರ್ಯ ಹೇಗೆ ಮಾಡಲಾಗುತ್ತಿದೆ ಎಂಬ ಬಗ್ಗೆ ಪ್ರಶ್ನಿಸಿದರು. ವಾಹನಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರವೇ ಮುಂದಿನ ಸಂಚಾರಕ್ಕೆ ಅನುಮತಿಸಬೇಕು. ಯಾವುದೇ ಅಕ್ರಮಕ್ಕೆ ಅವಕಾಶವಾಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ವಾಹನ ತಪಾಸಣಾ ವೇಳೆ ಪಾಲನೆ ಮಾಡಬೇಕೆಂದು ಜಿಲ್ಲಾಧಿಕಾರಿ ಸೂಚನೆ ನೀಡಿದರು.

ಪಾಲಾರ್ ಚೆಕ್‌ಪೋಸ್ಟ್‌ಗೆ ಭೇಟಿ ಕೊಟ್ಟು ಅಲ್ಲಿನ ತಪಾಸಣಾ ಕಾರ್ಯದ ವಿವರ ಪಡೆದರು. ಇಲ್ಲಿಯೂ ಸಹ ಪ್ರತಿನಿತ್ಯ ಎಷ್ಟು ವಾಹನಗಳು ಸಂಚರಿಸುತ್ತಿವೆ? ಪರಿಶೀಲನಾ ಕಾರ್ಯ ಹೇಗೆ ನಡೆಸಲಾಗುತ್ತಿದೆ ಎಂಬ ಬಗ್ಗೆ ವಿವರ ಪಡೆದರು.

ಎಲ್ಲಾ ವಾಹನಗಳನ್ನು ತಪಾಸಣೆ ಮಾಡಿಯೇ ಕಳುಹಿಸಬೇಕು. ಕಂಟೈನರ್ ವಾಹನಗಳನ್ನು ಸಹ ಆಮೂಲಾಗ್ರವಾಗಿ ಪರಿಶೀಲಿಸಬೇಕು. ಯಾವುದೇ ಲೋಪಕ್ಕೆ ಅವಕಾಶವಾಗದ ಹಾಗೆ ಚೆಕ್‌ಪೋಸ್ಟ್‌ಗಳಲ್ಲಿ 24x7 ಅವಧಿಯಲ್ಲಿ ನಿಗಾ ವಹಿಸಬೇಕೆಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಅಬಕಾರಿ ಇಲಾಖೆಯ ಉಪ ಆಯುಕ್ತರಾದ ನಾಗಶಯನ ಈ ಸಂದರ್ಭದಲ್ಲಿ ಇದ್ದರು.

ಆಸ್ತಿ ತೆರಿಗೆ ಪಾವತಿಗೆ ನಗರಸಭೆ ಸೂಚನೆ

ಚಾಮರಾಜನಗರ, ಏ.2– ಚಾಮರಾಜನಗರ ನಗರಸಭಾ ವ್ಯಾಪ್ತಿಗೆ ಒಳಪಡುವ ಕಟ್ಟಡ, ನಿವೇಶನಗಳ ಮಾಲೀಕರುಗಳು ತಮ್ಮ ಆಸ್ತಿಗೆ ಸಂಬಂಧಿಸಿದಂತೆ ಪ್ರಸಕ್ತ 2023–24ನೇ ಸಾಲಿನ ಆಸ್ತಿ ತೆರಿಗೆಯನ್ನು ಏಪ್ರಿಲ್ 30ರೊಳಗೆ ಪಾವತಿಸಿದರೆ ಶೇ.5ರಷ್ಟು ರಿಯಾಯಿತಿ ನೀಡಲಾಗುತ್ತದೆ ಎಂದು ನಗರಸಭೆ ತಿಳಿಸಿದೆ.

ಮೇ ಮತ್ತು ಜೂನ್ ತಿಂಗಳಲ್ಲಿ ಆಸ್ತಿ ತೆರಿಗೆ ಪಾವತಿಸಿದರೆ ಯಾವುದೇ ದಂಡವಿರುವುದಿಲ್ಲ. ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆದಾರರು ಹಿಂದಿನ ವರ್ಷಗಳ ಕಂದಾಯಗಳಿಗೆ ದಂಡ ಸಮೇತ ಕಡ್ಡಾಯವಾಗಿ ಆಸ್ತಿ ತೆರಿಗೆ ಪಾವತಿಸಿ, ಸ್ವಯಂ ಘೋಷಿತ ಆಸ್ತಿ ತೆರಿಗೆಯ ಘೋಷಣೆಯನ್ನು ಮಾಡಿಸಿಕೊಳ್ಳಬೇಕು. ನೀರಿನ ಕಂದಾಯ ಬಾಕಿ ಉಳಿಸಿಕೊಂಡಿರುವವರು ಕಂದಾಯವನ್ನು ಕಡ್ಡಾಯವಾಗಿ ಪಾವತಿಸಬೇಕು. ತಪ್ಪಿದ್ದಲ್ಲಿ ಕರ್ನಾಟಕ ಪುರಸಭೆಗಳ ಅಧಿನಿಯಮ 1964 ನಿಯಮ 115ರ ರೀತ್ಯಾ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು. ಆಸ್ತಿಯ ಮಾಲೀಕರುಗಳು ಯಾವುದೇ ಕಾನೂನು ಕ್ರಮಕ್ಕೆ ಅವಕಾಶಕೊಡದೇ ಸ್ವಯಂ ಪ್ರೇರಿತವಾಗಿ ಕಂದಾಯವನ್ನು ಪಾವತಿಸಿ ನಗರದ ಅಭಿವೃದ್ಧಿಗೆ ಸಹಕರಿಸುವಂತೆ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಚಾ.ನಗರದ ಮನೆಮಗಳಾದ ನನಗೊಂದು ಅವಕಾಶ ಕೊಡಿ: ಪಂಕಜಾ ಮನವಿ



ಚಾಮರಾಜನಗರ, ಏ.2– ಚಾಮರಾಜನಗರದ ಮನೆ ಮಗಳಾದ ನನಗೊಂದು ಅವಕಾಶ ಮಾಡಿಕೊಡಿ ಎಂದು ರಂಗಭೂಮಿ ಕಲಾವಿದೆ ಹಾಗೂ ಐರಾ ನ್ಯಾಷನಲ್ ಪಾರ್ಟಿ (ಎಎನ್‌ಪಿ) ಅಭ್ಯರ್ಥಿ ಪಂಕಜಾ ರವಿಶಂಕರ್ ಮನವಿ ಮಾಡಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಐರಾ ನ್ಯಾಷನಲ್ ಪಾರ್ಟಿ (ಎಎನ್‌ಪಿ) ಯಿಂದ ಚಾಮರಾಜನಗರ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತಿದ್ದೇನೆ.ಕಳೆದ 45 ವರ್ಷಗಳಿಂದ ರಂಗಭೂಮಿ ಕಲಾವಿದೆಯಾಗಿ ನೂರಾರು ನಾಟಕಗಳಲ್ಲಿ ಅಭಿನಯಿಸಿ, 300ಕ್ಕೂ ಸಿನಿಮಾಗಳು, 70ಹೆಚ್ಚು ಧಾರಾವಾಹಿಗಳಲ್ಲಿ ನಟನೆ ಮಾಡಿ ಇಡೀ ರಾಜ್ಯಾದ್ಯಂತ ಮನೆ ಮಾತಾಗಿದ್ದೇನೆ. ಉತ್ತರ ಕರ್ನಾಟಕ ಭಾಗದಲ್ಲೂ ಕೂಡ ವಿವಿಧ ಪಕ್ಷದಿಂದ ಸ್ಪರ್ಧಿಸಲು ಆಹ್ವಾನ ಮಾಡಿದರು. ಆದರೆ ನನ್ನ ಹುಟ್ಟೂರಾದ ಚಾಮರಾಜನಗರದಲ್ಲಿ ಜನತೆಗೆ ಅಳಿಲು ಸೇವೆ ಮಾಡುವ ಉದ್ದೇಶದಿಂದ ನಾನು ಚುನಾವಣೆ ಸ್ಪರ್ಧೆ ಮಾಡುವುದಾಗಿ ತಿಳಿಸಿದರು.

ಪಕ್ಷದ ರಾಜ್ಯಾಧ್ಯಕ್ಷ ಡಾ.ಸಾಯಿ ಸತೀಶ್ ತೋಟಯ್ಯ ಮಾತನಾಡಿ, ನಮ್ಮ ಪಕ್ಷ ರಾಷ್ಟ್ರೀಯ ಪಕ್ಷವಾಗಿದ್ದು ಬಿಜೆಪಿ, ಕಾಂಗ್ರೆಸ್ ಸಮಾನವಾಗಿ ಸ್ಪರ್ಧೆ ಮಾಡುತ್ತಿದೆ. ಮಹಿಳೆಯರು ಶೇ.50, ಮಂಗಳಮುಖಿಯರಿಗೆ ಶೇ 10, ವಿಕಲಚೇತನರಿಗೆ ಶೇ. 10 ಹಾಗೂ ಪುರುಷರಿಗೆ ಶೇ.30 ರಷ್ಟು ಕ್ಷೇತ್ರ ಮೀಸಲಿಡಲಾಗಿದೆ. ಇತರೆ ಪಕ್ಷಗಳು ಪ್ರಣಾಳಿಕೆಯಲ್ಲಿ ಪುಟಗಟ್ಟಲೇ ಆಶ್ವಾಸನೆ ನೀಡುತ್ತವೆ. ಯಾವುದನ್ನು ಈಡೇರಿಸುವುದಿಲ್ಲ. ಆದರೆ ನಮ್ಮ 20 ಅಂಶಗಳನ್ನು ಮಾತ್ರ ಪ್ರಣಾಳಿಕೆಯಲ್ಲಿ ಸೇರ್ಪಡೆ ಮಾಡಿ ಜನರ ಆಶೋತ್ತರಗಳಿಗೆ ಸ್ಪಂದಿಸಲಿದೆ. ನಿಚ್ಚಳ ಬಹುಮತ ಕೊಟ್ಟರೇ ಪ್ರಥಮವಾಗಿ ಮಹಿಳಾ ಮುಖ್ಯಮಂತ್ರಿ ಮಾಡುವುದಾಗಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಸುನೀಲ್ ನಾಯಕ, ಮಂಡ್ಯ ಜಯಶಂಕರ್, ಶಾರದಾ ಹಾಜರಿದ್ದರು.

ಕರ್ತವ್ಯದಲ್ಲಿ ಶ್ರದ್ಧೆ, ಶಿಸ್ತು ಅಳವಡಿಸಿಕೊಳ್ಳಲು ಸಲಹೆ



ಚಾಮರಾಜನಗರ, ಏ.2– ಶ್ರದ್ಧೆ, ಶಿಸ್ತು, ವಿಧೇಯತೆಯನ್ನು ಪೊಲೀಸರು ತಮ್ಮ ಕರ್ತವ್ಯದಲ್ಲಿ ಅಳವಡಿಸಿಕೊಂಡಾಗ ಉತ್ತಮ ಸೇವೆ ಸಲ್ಲಿಸಲು ಸಾಧ್ಯ ಎಂದು ಗುಂಡ್ಲುಪೇಟೆ ಠಾಣೆಯ ನಿವೃತ್ತ ಪಿಎಸ್‌ಐ ಪಿ. ಸುಜಾತಾ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕವಾಯಿತು ಮೈದಾನದಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯಿಂದ ಹಮ್ಮಿಕೊಂಡಿದ್ದ ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ವಿವಿಧ ತುಕಡಿಗಳಿಂದ ಗೌರವ ವಂದನೆ ಸ್ವೀಕರಿಸಿ ಮಾತನಾಡಿದ ಅವರು, ನಮ್ಮ ಅರಿವಿಗೆ ಬಾರದೇ ಎಷ್ಟೋ ಉತ್ತಮ ಕೆಲಸಗಳನ್ನು ಮಾಡಿರುತ್ತೇವೆ, ಅವು ನಾವು ನಿವೃತ್ತರಾದ ಮೇಲೆಯೇ ಗೊತ್ತಾಗುವುದು ಎಂದರು.

ಕರ್ತವ್ಯದಲ್ಲಿದ್ದಾಗ ನಮ್ಮ ಮೇಲಾಧಿಕಾರಿಗಳ ಸಹಕಾರ ಅತಿಮುಖ್ಯ. ಅದಕ್ಕಾಗಿ ನಾವು ವಿಧೇಯತೆಯನ್ನು ಮೈಗೂಡಿಸಿಕೊಂಡು ಅವರ ಮಾರ್ಗದರ್ಶನದಲ್ಲಿ ಶ್ರದ್ಧೆ ಮತ್ತು ಶಿಸ್ತಿನಿಂದ ಕರ್ತವ್ಯ ನಿರ್ವಹಿಸಿ ಉತ್ತಮ ಸೇವೆ ಸಲ್ಲಿಸಿ, ನಿವೃತ್ತರಾಗಬಹುದು ಎಂದರು.

ನಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಮಾತನಾಡಿ, 1984 ರಿಂದ ಏ. 2ರಂದು ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆ ಎಂದು ಆಚರಿಸಲಾಗುತ್ತಿದೆ. ಈ ದಿನ ಸಾರ್ವಜನಿಕ ಸೇವೆ ಸಲ್ಲಿಸಿದ ಉತ್ತಮ ನಿವೃತ್ತ ಪೊಲೀಸ್ ಅಧಿಕಾರಿಗಳಿಗೆ ಸೇವೆಯನ್ನು ಸ್ಮರಿಸಿ ಗೌರವಿಸಲಾಗುತ್ತದೆ ಎಂದರು.

ಪೊಲೀಸ್ ಧ್ವಜ ವಿತರಣೆಯಿಂದ ಶೇಖರಣೆಯಾಗುವ ಸಂಪನ್ಮೂಲದಿಂದ ಪೊಲೀಸರ ಕಲ್ಯಾಣ ನಿಧಿಗೆ ಬಳಕೆ ಮಾಡಲಾಗುವುದು ಎಂದರು. ಪೊಲೀಸ್ ಸೇವೆಯನ್ನು ನಿರ್ವಹಿಸಿ ನಿವೃತ್ತಿಯಾಗಿ ಪುರಸ್ಕಾರ ಪಡೆಯುತ್ತಿರುವ ಪೊಲೀಸ್ ಅಧಿಕಾರಿಗಳು ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗುವುದರ ಮುಖಾಂತರ ಆರೋಗ್ಯವನ್ನು ತಾವೇ ಕಾಪಾಡಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ನಿವೃತ್ತರಾದ ಪೊಲೀಸ್ ಅಧಿಕಾರಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಡಿವೈಎಸ್‌ಪಿಗಳಾದ ಪ್ರಿಯದರ್ಶಿನಿ ಸಾಣೆಕೊಪ್ಪ, ನಾಗರಾಜು, ಜಿಲ್ಲೆ ವಿವಿಧ ಠಾಣೆಯ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ಭಾಗವಹಿಸಿದ್ದರು. ಮಹಿಳಾ ಪೊಲೀಸ್ ತುಕಡಿ ಸೇರಿದಂತೆ ಐದು ಪೊಲೀಸ್ ತುಕಡಿಗಳು ಪಥ ಸಂಚಲನ ನಡೆಸಿ, ಮುಖ್ಯ ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿದವು. ರಾಷ್ಟ್ರಧ್ವಜ ಮತ್ತು ಪೊಲೀಸ್ ಧ್ವಜಕ್ಕೆ ಗೌರವ ವಂದನೆ ಸಲ್ಲಿಸಲಾಯಿತು.

ಇಂದು ಪೂರ್ವಭಾವಿ ಸಭೆ

ಚಾಮರಾಜನಗರ, ಏ.2– ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರ 132ನೇ ಜನ್ಮ ದಿನಾಚರಣೆ ಹಾಗೂ ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ಅವರ 116ನೇ ಜನ್ಮದಿನಾಚರಣೆಯನ್ನು ಆಚರಿಸುವ ಸಂಬಂಧ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಏ.3 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ.

ಸಭೆಗೆ ವಿವಿಧ ಸಂಘಟನೆಗಳ ಮುಖಂಡರು, ಪ್ರತಿನಿಧಿಗಳು ಆಗಮಿಸಿ ಸೂಕ್ತ ಸಲಹೆಗಳನ್ನು ನೀಡುವಂತೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಮೈಸೂರು ಮಿತ್ರ

ಜಿಎಸ್‌ಟಿ ನೋಂದಣಿ ರದ್ದತಿ: ಹಿಂಪಡೆಯುವಿಕೆ ಅರ್ಜಿಗೆ ಅವಧಿ ವಿಸ್ತರಣೆ

ನವದೆಹಲಿ: ಜಿಎಸ್‌ಟಿ ವಿವರ ಸಲ್ಲಿಸದೆ ಇರುವ ಕಾರಣಕ್ಕೆ ವಾಣಿಜ್ಯೋದ್ಯಮಗಳ ಜಿಎಸ್‌ಟಿ ನೋಂದಣಿ ರದ್ದಾಗಿದ್ದರೆ, ರದ್ದು ಮಾಡಿದ್ದನ್ನು ಹಿಂಪಡೆಯುವಂತೆ ಕೋರಿ ಜೂನ್ 30ರೊಳಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಆದರೆ ಹೀಗೆ ಅರ್ಜಿ ಸಲ್ಲಿಸಲು ಮೊದಲು ತೆರಿಗೆಗಳನ್ನು, ಅದಕ್ಕೆ ಬಡ್ಡಿ ಮತ್ತು ದಂಡವನ್ನು ಪಾವತಿಸಿರಬೇಕು.

ಕೇಂದ್ರ ಹಣಕಾಸು ಸಚಿವಾಲಯವು ಕೇಂದ್ರ ಜಿಎಸ್ಟಿ ಕಾಯ್ದೆಯಲ್ಲಿ ತಿದ್ದುಪಡಿಗಳನ್ನು ತಂದಿದೆ. ವಾಣಿಜ್ಯೋದ್ಯಮಗಳ ಜಿಎಸ್‌ಟಿ ನೋಂದಣಿಯು 2022ರ ಡಿಸೆಂಬರ್ 31ಕ್ಕೆ ಮೊದಲು ರದ್ದಾಗಿದ್ದರೆ, ರದ್ದತಿಯನ್ನು ಹಿಂಪಡೆಯುವಂತೆ ನಿಗದಿತ ಅವಧಿ ಯೊಳಗೆ ಅರ್ಜಿ ಸಲ್ಲಿಸದೆ ಇದ್ದರೆ, ಅದನ್ನು ಜೂನ್ 30ಕ್ಕೂ ಮೊದಲು ಮಾಡಬಹುದು ಎಂದು ಸಚಿವಾಲಯ ಹೇಳಿದೆ. ನೋಂದಣಿ ರದ್ದತಿಯನ್ನು ಹಿಂದಕ್ಕೆ ಪಡೆಯುವಂತೆ ಅರ್ಜಿ ಸಲ್ಲಿಸುವುದಕ್ಕೆ ಇನ್ನೂ ಹೆಚ್ಚಿನ ಕಾಲಾವಕಾಶ ಸಿಗುವುದಿಲ್ಲ ಎಂದು ಸಚಿವಾಲಯದ ಅಧಿಸೂಚನೆಯು ಹೇಳಿದೆ.

ರೈತರ ಮಕ್ಕಳಿಗೆ ತರಬೇತಿ : ಅರ್ಜಿ ಆಹ್ವಾನ

ಮೈಸೂರು,ಏ.2–ರಂಗಸಮುದ್ರ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 2023ರ ಮೇ 5ರಿಂದ 2024ರ ಫೆ.29ರವರೆಗೆ ಪಹಣಿ ಹೊಂದಿರುವ ಮೈಸೂರು ಹಾಗೂ ಚಾಮರಾಜ ನಗರ ಜಿಲ್ಲೆಯ ರೈತರ ಮಕ್ಕಳ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ 10 ತಿಂಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. SSLCಯಲ್ಲಿ ಉತ್ತೀರ್ಣರಾದ ಸಾಮಾನ್ಯ ವರ್ಗದ 18–30 ವರ್ಷದೊಳಗಿನ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 18–33 ವರ್ಷದೊಳಗಿನ ಹಾಗೂ 33–65 ವರ್ಷ ವಯಸ್ಸಿನ ಒಳಗಿನ ಮಾಜಿ ಸೈನಿಕ ಅಭ್ಯರ್ಥಿಗಳು ಏ.12ರವರೆಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಫಾರಂಗಳನ್ನು ಜಿಪಂನ ತೋಟಗಾರಿಕೆ ಉಪನಿರ್ದೇಶಕರು, ಮೈಸೂರು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಯಲ್ಲಿ ಅಥವಾ https://horticul turedir.karnataka. gov.in ಡೌನ್‌ಲೋಡ್ ಮಾಡಿಕೊಳ್ಳಬಹುದು. ವಿವರಗಳಿಗೆ ದೂ.ಸಂ: 0821–2977572 ಸಂಪರ್ಕಿಸಿ.

ಒಂದನೇ ಪುಟದಿಂದ

ಕೆರೆಹಳ್ಳಿ ವಿರುದ್ಧ ಕೊಲೆ ಕೇಸ್

ಹಾಗೂ ಸಂಗಡಿಗರು ನಮ್ಮ ಮೇಲೆ ಹಲ್ಲೆ ನಡೆಸಿ 2 ಲಕ್ಷ ರೂ. ನೀಡುವಂತೆ ಒತ್ತಾಯಿಸಿದ್ದರು. ನಾವು ಮೂರು ಮಂದಿ ಹೆದರಿ ಅಲ್ಲಿಂದ ಓಡಿ ಹೋಗಿದ್ದು, ಆ ವೇಳೆ ಪೊದೆಯಲ್ಲಿ ಅಡಗಿ ಕುಳಿತಿದ್ದ ಇದ್ರೀಷ್ ಪಾಷಾನನ್ನು ಪುನೀತ್ ಕೆರೆಹಳ್ಳಿ ಹಾಗೂ ಸಂಗಡಿಗರು ಮನಬಂದಂತೆ ಥಳಿಸಿ ಹತ್ಯೆ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಮರಣೋತ್ತರ ಪರೀಕ್ಷೆ ನಂತರ ಮೃತದೇಹವನ್ನು ಮಂಡ್ಯಗೆ ತಂದಾಗ ಮೃತ ಇದ್ರೀಷ್ ಪಾಷಾ ಸಂಬಂಧಿಕರು ಲಾರಿಯಲ್ಲಿ ಮೆರವಣಿಗೆ ಮಾಡುತ್ತಾ ಪುನೀತ್ ಕೆರೆಹಳ್ಳಿ ಹಾಗೂ ಸಂಗಡಿಗರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು. ಸಂಜಯ ವೃತ್ತದಲ್ಲಿ ಕೆಲ ಸಮಯ ರಸ್ತೆ ತಡೆಯನ್ನೂ ನಡೆಸಿದರು. ನಂತರ ಶಂಕರ ಮಠದಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಇದ್ರೀಷ್ ಪಾಷಾ ಅಂತ್ಯಕ್ರಿಯೆ ನೆರವೇರಿಸಲಾಯಿತು. ಈ ಸಂಬಂಧ ಸಾತನೂರು ಠಾಣೆ ಪೊಲೀಸರು ಮೂರು ಪ್ರಕರಣಗಳನ್ನು ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ತಂತ್ರಗಾರಿಕೆ ಅಳವಡಿಕೆಗೆ ಮುಂದಾದ ಬಿಜೆಪಿ

ಆಂಧ್ರ ಪ್ರದೇಶದ ನಾಯಕ ಪಿ ಸುಧಾಕರ್ ರೆಡ್ಡಿ ಅವರು ಹಲವು ಚುನಾವಣೆಗಳಲ್ಲಿ ನಿರ್ವಹಿಸಿದ ಅನುಭವವನ್ನು ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಪಕ್ಷವು 224 ವಿಧಾನಸಭಾ ಕ್ಷೇತ್ರಗಳ ಪೈಕಿ 115 ಕ್ಷೇತ್ರಗಳನ್ನು ಗುರುತಿಸಿದೆ. ಪ್ರತಿಯೊಬ್ಬ ನಾಯಕನಿಗೆ 2–3 ಕ್ಷೇತ್ರಗಳ ಜವಾಬ್ದಾರಿಯನ್ನು ನೀಡಲಾಗಿದೆ ಮತ್ತು ಪಕ್ಷಕ್ಕೆ ನೆಲೆ ಇಲ್ಲದ ಕ್ಷೇತ್ರಗಳಲ್ಲಿ ಪಕ್ಷದ ಅವಕಾಶಗಳನ್ನು ಹೆಚ್ಚಿಸುವಂತೆ ಕೇಳಿಕೊಳ್ಳಲಾಗಿದೆ. ಗುಜರಾತ್ ಚುನಾವಣೆ ಸಮಯದಲ್ಲಿ, ಆಡಳಿತಾರೂಢ ಬಿಜೆಪಿ ಭಾರಿ ಜನಾ ದೇಶದೊಂದಿಗೆ ಮತ್ತೆ ಅಧಿಕಾರಕ್ಕೆ ಬಂತು. ಕೇಸರಿ ಪಕ್ಷವು ವಿವಿಧ ನಾಯಕರಿಗೆ ಪ್ರಮುಖ ಚುನಾವಣಾ ಜವಾಬ್ದಾರಿಗಳನ್ನು ವಹಿಸಿ, ಅಪೇಕ್ಷಿತ ಲಾಭಾಂಶವನ್ನು ಗಳಿಸಿತು. ಬಿಜೆಪಿ ಅಧಿಕಾರದಲ್ಲಿರುವ ದಕ್ಷಿಣದ ಏಕೈಕ ರಾಜ್ಯ ಕರ್ನಾಟಕವಾಗಿದೆ. ಪಕ್ಷವು ರಾಜ್ಯದಲ್ಲಿ ಮುಖ್ಯಮಂತ್ರಿಯನ್ನು ಬದಲಾಯಿಸಿತು. ಪ್ರಬಲ ಲಿಂಗಾಯತ ನಾಯಕರೆಂದೇ ಗುರುತಿಸಿಕೊಂಡಿರುವ ಹಿರಿಯ ಬಿಜೆಪಿ ಮುಖಂಡ ಬಿಎಸ್ ಯಡಿಯೂರಪ್ಪ ಅವರ ಸ್ಥಾನದಲ್ಲಿ ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿತು.

ಎಲ್ಲರಿಗೂ ಮೀಸಲಾತಿ

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಈ ದೇಶಕ್ಕೆ ಸಂವಿಧಾನ ಕೊಟ್ಟಿದ್ದಾರೆ. ಜಾತಿ ವ್ಯವಸ್ಥೆ ಕಾರಣಕ್ಕಾಗಿ ದೇಶದಲ್ಲಿ ಅಸಮಾನತೆ ಇದ್ದು, ಇದನ್ನು ಹೋಗಲಾಡಿಸುವುದು ಸಂವಿಧಾನದ ಮೂಲ ಉದ್ದೇಶ. ಅಸಮಾನತೆ ಹೋಗಲಾಡಿಸುವುದು ಸರ್ಕಾರಗಳ ಕರ್ತವ್ಯ. ಇಲ್ಲವಾದರೆ ಅಸಮಾನತೆಯಿಂದ ನರಳಿದ ಜನತೆಯೇ ಸ್ವಾತಂತ್ರ್ಯದ ಸೌಧ ಧ್ವಂಸ ಮಾಡುತ್ತಾರೆ ಎಂದು ಅಂಬೇಡ್ಕರ್ ಅವರು ಸಂವಿಧಾನದ ಸಭೆಯಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು ಎಂದರು.

ಬಾಯ್ತಪ್ಪಿ ಬಿಜೆಪಿ ಎಂದ ಸಿದ್ದರಾಮಯ್ಯ: 2011ರ ಜನಗಣತಿಯಂತೆ ಪರಿಶಿಷ್ಟ ಜಾತಿಯವರು ರಾಜ್ಯದಲ್ಲಿ ಶೇ.17.15ರಷ್ಟು ಜನಸಂಖ್ಯೆ ಹೊಂದಿದ್ದು, ಪರಿಶಿಷ್ಟ ಪಂಗಡದವರು ಶೇ.6.95ರಷ್ಟು ಇದ್ದಾರೆ. ಈ ಇಬ್ಬರನ್ನೂ ಸೇರಿಸಿದಂತೆ ಶೇ.24.1 ಜನಸಂಖ್ಯೆ ಆಗಲಿದೆ. ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕೊಡಬೇಕೆಂಬುದನ್ನು ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ. ಅದಕ್ಕಾಗಿ ಹೋರಾಟ ಮಾಡುತ್ತಿದ್ದರು. ಹಾಗಾಗಿ ನಾವು ಮತ್ತು ಬಿಜೆಪಿಯವರು ಸಮ್ಮಿಶ್ರ ಸರ್ಕಾರ ಮಾಡಿದ್ದಾಗ ಎಂದು ಬಾಯ್ತಪ್ಪಿ ಹೇಳಿದ ಸಿದ್ದರಾಮಯ್ಯ ತಕ್ಷಣವೇ ಸರಿಪಡಿಸಿಕೊಂಡು, ಜೆಡಿಎಸ್‌ನವರೊಂದಿಗೆ ಸಮ್ಮಿಶ್ರ ಸರ್ಕಾರ ಮಾಡಿದ್ದಾಗ ನ್ಯಾ.ನಾಗಮೋಹನ್‌ದಾಸ್ ಅಧ್ಯಕ್ಷತೆಯಲ್ಲಿ ಆಯೋಗ ರಚನೆ ಮಾಡಲಾಯಿತು ಎಂಸಿದರು.

ಬಳಿಕ ಬಿಜೆಪಿ ಹಿಂಬಾಗಿಲಿನಿಂದ ಸರ್ಕಾರ ರಚನೆ ಮಾಡಿದ ವೇಳೆಗೆ ಆಯೋಗ ವರದಿ ನೀಡಿತ್ತು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೂರುವರೆ ವರ್ಷಗಳ ಕಾಲ ಸದರಿ ವರದಿ ಕೊಳೆಯುತ್ತ ಬಿದ್ದಿತು. ವರದಿ ಅನುಷ್ಠಾನಕ್ಕೆ ಒತ್ತಾಯಿಸಿ ಫ್ರೀಡಂ ಪಾರ್ಕ್‌ನಲ್ಲಿ ವಾಲ್ಮೀಕಿ ಸ್ವಾಮೀಜಿ ಹೋರಾಟ ನಡೆಸಿದರು. ಭಾರತ್ ಜೋಡೋ ಯಾತ್ರೆ ವೇಳೆ ರಾಹುಲ್ ಗಾಂಧಿಯವರು ಒತ್ತಾಯಿಸಿದರು. ಆದರೂ ಜಗ್ಗಲಿಲ್ಲ ಎಂದು ದೂರಿದರು.

ಕೇಂದ್ರಕ್ಕೆ ತಲುಪದ ಪ್ರಸ್ತಾವನೆ: ಚುನಾವಣೆ ಹತ್ತಿರವಾಗುತ್ತಿದ್ದಂತೆ ಸರ್ವ ಪಕ್ಷಗಳ ಸಭೆ ಕರೆದರು. ಪರಿಶಿಷ್ಟ ಜಾತಿ, ಪಂಗಡಕ್ಕೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಸಂಬಂಧ ಕಾನೂನು ರೂಪಿಸಿ ಬಳಿಕ ಸಂವಿಧಾದ 9ನೇ ಶೆಡ್ಯುಲ್‌ಗೆ ಸೇರಿಸಲು ಕ್ರಮ ವಹಿಸಬೇಕೆಂದು ಸಭೆಯಲ್ಲಿ ನಾನೂ ಒತ್ತಾಯಿಸಿದೆ. ಇಲ್ಲವಾದರೆ ಇದು ಊರ್ಜಿತವಾಗಲ್ಲ ಎಂದು ಎಚ್ಚರಿಸಿದ್ದೆ. ಕೊನೆಗೆ ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸಲು ಕ್ರಮ ವಹಿಸುವುದಾಗಿ ಒಪ್ಪಿಕೊಂಡರು. ಇದಾಗಿ 4 ತಿಂಗಳಾದರೂ ಕೇಂದ್ರ ಸರ್ಕಾರಕ್ಕೆ ಈ ಸಂಬಂಧ ಪ್ರಸ್ತಾವನೆಯನ್ನೇ ಸಲ್ಲಿಸಿರಲಿಲ್ಲ. ಇದಕ್ಕೂ ಪೂರ್ವದಲ್ಲಿ ವರ್ಷಗಟ್ಟಲೆ ವಿಳಂಬ ಮಾಡಿದ್ದೂ ಇಲ್ಲಿ ಗಮನಾರ್ಹ. ಕಾಂಗ್ರೆಸ್ ಪಕ್ಷದಿಂದ ಧರಣಿಗೆ ಮುಂದಾದಾಗ ಮಾ.23ರಂದು ಮುಖ್ಯ ಕಾರ್ಯದರ್ಶಿ ಮೂಲಕ ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದಾರೆ ಎಂದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ, ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಜಮೀರ್ ಅಹಮ್ಮದ್, ಡಾ.ಯತೀಂದ್ರ ಸಿದ್ದರಾಮಯ್ಯ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಎ.ಆರ್ .ಕೃಷ್ಣಮೂರ್ತಿ, ವಾಸು, ಪಿ.ಎಂ.ನರೇಂದ್ರಸ್ವಾಮಿ, ಮುಖಂಡರಾದ ಚಂದ್ರಮೌಳಿ, ಕೆ.ಹರೀಶ್‌ಗೌಡ, ಕೆ.ಮರೀಗೌಡ, ಎಂ.ಪ್ರದೀಪ್‌ಕುಮಾರ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಾಜಿ ಸಂಸದ್ ಆರ್.ಧ್ರುವನಾರಾಯಣ ಪುತ್ರ ದರ್ಶನ್, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

“ ಬಿಜೆಪಿಯವರು ಮೀಸಲಾತಿಗೆ ಅಪಾಯ ಉಂಟಾಗುವ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಚುನಾವಣೆ ದೃಷ್ಟಿಯಲ್ಲಿ ಮೀಸಲಾತಿ ಹೆಚ್ಚಿಸಿ ಪ್ರಕಟಿಸಿದ್ದಾರೆ. ಆದರೆ ಅದಕ್ಕೆ ಕಾನೂನಾತ್ಮಕ ರಕ್ಷಣೆ ನೀಡಲು ಅಗತ್ಯವಾಗಿ ಆಗಬೇಕಿರುವ ಸಂವಿಧಾನ ತಿದ್ದುಪಡಿಗೆ ಮುಂದಾಗಿಲ್ಲ. ಪರಿಶಿಷ್ಟರ ಸಂಬಂಧ ಮೀಸಲಾತಿ ಹೆಚ್ಚಳವೇ ಊರ್ಜಿತವಾಗದೇ ಒಳಮೀಸಲಾತಿ ನೀಡಿದ್ದಾರೆ.
–ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕರು.

“ ದಲಿತ ಸಮುದಾಯಕ್ಕೆ ನೀಡಿರುವ ಒಳ ಮೀಸಲಾತಿಯನ್ನು ಕಾನೂನಾತ್ಮಕವಾಗಿ ಮಾಡಿಲ್ಲ. 2ಬಿಯಲ್ಲಿ ಮುಸ್ಲಿಂ ಸಮುದಾಯಕ್ಕಿದ್ದ ಶೇ.4ರಷ್ಟು ಮೀಸಲಾತಿಯನ್ನು ರದ್ದು ಮಾಡಿದ್ದಾರೆ. ಈ ಸಂಬಂಧ ಈಗಾಗಲೇ ಕಾಂಗ್ರೆಸ್ ಪಕ್ಷ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಸಮುದಾಯದ ಧಾರ್ಮಿಕ ಗುರುಗಳು, ಮುಖಂಡರು ಈಗಗಾಲೇ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದ್ದಾರೆ. **–ತನ್ವೀರ್ ಸೇಠ್, ಶಾಸಕರು.**

“ ವೀರಪ್ಪ ಮೊಯ್ಲಿಯವರು ಸಿಎಂ ಆಗಿದ್ದ ಅವಧಿಯಲ್ಲಿ ಅಲ್ಪಸಂಖ್ಯಾತರಿಗೆ ಶೇ.6ರಷ್ಟು ಮೀಸಲಾತಿ ಕೊಡಲು ಶಿಫಾರಸ್ಸು ಮಾಡಲಾಗಿತ್ತು. ಬಳಿಕ ಮುಖ್ಯಮಂತ್ರಿಯಾದ ಹೆಚ್.ಡಿ.ದೇವೇಗೌಡ ಅವರು ಶೇ.6ಕ್ಕೆ ಬದಲು ಶೇ.4ರಷ್ಟು ಮೀಸಲಾತಿ ನೀಡಿದರು. ಆ ಮೂಲಕ ಶೇ.2ರಷ್ಟು ಮೀಸಲಾತಿ ಕಡಿತಗೊಳಿಸಿ ಅನ್ಯಾಯ ಮಾಡಿದರು. ಈಗ ಬಿಜೆಪಿಯವರು ರದ್ದುಗೊಳಿಸಿದ್ದಾರೆ. ಇದನ್ನು ಪ್ರಶ್ನಿಸಿ ಈಗಾಗಲೇ ಸುಪ್ರೀಂಕೋರ್ಟ್ ಮೊರೆ ಹೋಗಲಾಗಿದೆ. **–ಜಮೀರ್ ಅಹಮ್ಮದ್, ಶಾಸಕರು.**

ಪೋಲೀಸ್ ಧ್ವಜ ದಿನಾಚರಣೆ ಮಹತ್ವ ಕಳೆದುಕೊಳ್ಳುತ್ತಿದೆ





ಮೈಸೂರು, ಏ.2(ಎಂಟಿವೈ)– ಇತ್ತೀಚಿನ ದಿನದಲ್ಲಿ ಪೊಲೀಸ್ ಧ್ವಜ ದಿನ ಮಹತ್ವ ಕಳೆದುಕೊಳ್ಳುತ್ತಿದೆ ಎಂದು ನಿವೃತ್ತ ಐಜಿಪಿ ಕೆ.ಟಿ.ಬಾಲಕೃಷ್ಣ ವಿಷಾದಿಸಿದರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್) ಮೈದಾನದಲ್ಲಿ ಭಾನು ವಾರ ಮೈಸೂರು ನಗರ, ಜಿಲ್ಲಾ ಪೊಲೀಸ್ ಇಲಾಖೆ, ಕರ್ನಾಟಕ ಪೊಲೀಸ್ ಅಕಾಡೆಮಿ ಸೇರಿದಂತೆ ಇನ್ನಿತರ ವಿಭಾಗಗಳ ಪೊಲೀಸ್ ಘಟಕಗಳ ವತಿಯಿಂದ ಆಯೋಜಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಹಿಂದೆ ಪೊಲೀಸ್ ಧ್ವಜ ದಿನಾಚರಣೆ ಎಂದರೆ ಸಂಭ್ರಮ ಇರುತ್ತಿತ್ತು. ದೇಣಿಗೆ ಸಂಗ್ರಹಿಸಲು ಪೊಲೀಸರು ಉತ್ಸುಕರಾಗಿರುತ್ತಿದ್ದರು. ಹಬ್ಬದ ರೀತಿಯಲ್ಲಿ ಪೊಲೀಸ್ ಧ್ವಜ ದಿನಾಚರಣೆ ಆಚರಿಸಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಈ ಹಿಂದೆ ಇದ್ದ ವೈಭವ ಹಾಗೂ ಮಹತ್ವ ಕಳೆದುಕೊಳ್ಳುತ್ತಿದೆ. ಇದಕ್ಕೆ ಸರ್ಕಾರ ನೀಡುತ್ತಿರುವ ಸೌಲಭ್ಯವೂ ಒಂದು ಕಾರಣವಾದರೆ, ದೇಣಿಗೆ ಸಂಗ್ರಹಿಸಲು ಪೊಲೀಸರಿಗೆ ನಿರಾಸಕ್ತಿ ಹಾಗೂ ಭಯ, ದೇಣಿಗೆ ನೀಡಲು ಸಾರ್ವಜನಿಕರ ನಿರಾಕರಣೆಯೂ ಕಾರಣವಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಧ್ವಜ ದಿನಾಚರಣೆಯ ಮಹತ್ವ ಮರುಕಳಿಸುವಂತಾಗಬೇಕು. ಪೊಲೀಸರು ದೇಣಿಗೆ ಸಂಗ್ರಹಿಸಿ, ಪೊಲೀಸರು ಹಾಗೂ ನಿವೃತ್ತ ಪೊಲೀಸರ ಕಲ್ಯಾಣ ನಿಧಿಯ ಮೊತ್ತವನ್ನು ಇನ್ನಷ್ಟು ಬೆಳೆಸುವತ್ತ ಗಮನ ಹರಿಸಬೇಕೆಂದು ಸಲಹೆ ನೀಡಿದರು.

ನಿವೃತ್ತ ಐಜಿಪಿ ಕೆ.ಟಿ.ಬಾಲಕೃಷ್ಣ ವಿಷಾದ

ಚುನಾವಣಾ ಕರ್ತವ್ಯದಲ್ಲಿ ದಕ್ಷತೆ ಪ್ರದರ್ಶಿಸಿ: ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದು, ನೀತಿ ಸಂಹಿತೆ ಜಾರಿಯಲ್ಲಿದೆ. ಈಗಾಗಲೇ ಪೊಲೀಸ್ ಸಿಬ್ಬಂದಿಗಳನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಚುನಾವಣಾ ಕರ್ತವ್ಯವನ್ನು ದಕ್ಷತೆಯಿಂದ ನಿಭಾಯಿಸಬೇಕು ಎಂದು ಸಲಹೆ ನೀಡಿದ ಅವರು, ಈ ಹಿಂದೆ ಆಯಾ ಠಾಣಾ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಪೊಲೀಸ್ ಸಿಬ್ಬಂದಿಗಳು ಸ್ಥಳೀಯ ಪ್ರದೇಶದ ಜನರೊಂದಿಗೆ ಹೊಂದಾಣಿಕೆಯಿಂದ ಕರ್ತವ್ಯ ನಿರ್ವಹಿಸಬೇಕಾಗಿತ್ತು. ಆದರೆ, ಇದೀಗ ಎಲ್ಲೆಡೆ ಒಂದೇ ಮಾದರಿಯಂತೆ ಕೆಲಸ ನಿರ್ವಹಿಸಬೇಕಾಗಿದೆ ಎಂದರು.

ನಿವೃತ್ತರಿಗೆ ಸನ್ಮಾನ: ಧ್ವಜ ದಿನದ ಅಂಗವಾಗಿ ನಿವೃತ್ತ ಪೊಲೀಸ್ ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು. ನಿವೃತ್ತ ಐಜಿಪಿ ಕೆ.ಟಿ.ಬಾಲಕೃಷ್ಣ, ನಿವೃತ್ತ ಪಿಎಸ್‌ಐಗಳಾದ ಪಿ.ಮಹದೇವ, ಛಾಯಾಪತಿ, ನಿವೃತ್ತ ಸಹಾಯಕ ಆಡಳಿತಾಧಿಕಾರಿ ವೈವೈ ಬಗಲಿ, ನಿವೃತ್ತ ಪ್ರ.ದರ್ಜೆ ಸಹಾಯಕ ಶ್ರೀನಿವಾಸ್ ರಾಜು, ನಿವೃತ್ತ ಎಎಸ್‌ಐ ಗಳಾದ ಮಂಜಪ್ಪ ಮುಕುಂದ್ ಸಿಂಗ್, ನಿವೃತ್ತ ಸಿಹೆಚ್‌ಸಿ ವಿ.ನಾರಾಯಣ, ನಿವೃತ್ತ ಆರ್‌ಎಸ್‌ಐಗಳಾದ ಎನ್.ಮುರುಳಿಧರ ಮಾನೆ, ಎಆರ್‌ಎಸ್‌ಐ ಅಕ್ತರ್ ಷರೀಷ್ (ಡಿಎಆರ್), ನಿವೃತ್ತ ಎಹೆಚ್‌ಸಿಗಳಾದ ಹೆಚ್.ಎಂ.ಪ್ರಕಾಶ್ (ಮೌಂಟೆಡ್), ನಿವೃತ್ತ ಎಹೆಚ್‌ಸಿ ತಿಬ್ಬಣ್ಣ (ಡಿಎಆರ್), ಕರ್ನಾಟಿಕ್ ವಾದ್ಯವೃಂದದ ನಿವೃತ್ತ ವಾದ್ಯಗಾರ ಎಂ.ಆರ್. ಉದಯ್ ಕುಮಾರ್, ಆಂಗ್ಲ ವಾದ್ಯವೃಂದ ನಿವೃತ್ತ ವಾದ್ಯಗಾರ ಆರ್.ಕೃಷ್ಣಮೂರ್ತಿ ಹಾಗೂ ಇನ್ನಿತರರನ್ನು ಸನ್ಮಾನಿಸಲಾಯಿತು.

ಆಕರ್ಷಕ ಪಥಸಂಚಲನ: ಕಾರ್ಯಕ್ರಮದ ಅಂಗವಾಗಿ ಆಕರ್ಷಕ ಪಥಸಂಚಲನ ಆಯೋಜಿಸಲಾಗಿತ್ತು. ಮೈಸೂರಿನ ವಿವಿಧ ತುಕಡಿಗಳ ಪೊಲೀಸರು ಪಥಸಂಚಲನ ನಡೆಸಿ, ಗೌರವ ವಂದನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಡಿಸಿಪಿಗಳಾದ ಮುತ್ತುರಾಜ್, ಎಸ್. ಜಾಹ್ನವಿ, ಸಿಎಆರ್ ಡಿಸಿಪಿ ಮಾರುತಿ, ಮೌಂಟೆಡ್ ಡಿಸಿಪಿ ಶಿವರಾಜು, ಮೌಂಟೆಡ್ ಕಮಾಂಡೆಂಟ್ ಜನಾರ್ಧನ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಸಂವಿಧಾನದ ಆಶಯಕ್ಕೆ ಧಕ್ಕೆ ಬಂದಾಗ ಸುಮ್ಮನಿದ್ದ ಛಲವಾದಿ ನಾರಾಯಣಸ್ವಾಮಿಗೆ ಸಿದ್ದರಾಮಯ್ಯ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ

ಮಾಜಿ ಮೇಯರ್ ಪುರುಷೋತ್ತಮ್

ಮೈಸೂರು, ಏ.2(ಎಂಟಿವೈ)– ಸಂವಿಧಾನ ಬದಲಿಸಲೆಂದೇ ಅಧಿಕಾರಕ್ಕೆ ಬಂದಿದ್ದೇವೆ ಎಂದು ಬಿಜೆಪಿ ಸಂಸದರು ಹೇಳಿದಾಗ ಸುಮ್ಮನಿದ್ದ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಸಂವಿಧಾನದ ಆಶಯ ಜಾರಿಗೆ ತರಲು ಪ್ರಯತ್ನಿಸುತ್ತಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ವಿರುದ್ಧ ಅವಹೇಳನ ಮಾಡುವುದನ್ನು ನಿಲ್ಲಿಸಬೇಕು ಎಂದು ಮಾಜಿ ಮೇಯರ್ ಪುರುಷೋತ್ತಮ್ ಆಗ್ರಹಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಅಧಿಕಾರ ನೀಡಿದೆ ಎಂಬ ಕಾರಣಕ್ಕಾಗಿ ಛಲವಾದಿ ನಾರಾಯಣಸ್ವಾಮಿ ಅವರು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡುವುದು ಸರಿಯಲ್ಲ. ಬಿಜೆಪಿ ಸೇರುವ ಮೊದಲು ತಮ್ಮ ಹೇಳಿಕೆಗಳು ಹೇಗಿದ್ದವು ಎಂಬುದನ್ನು ಅವರು ನೆನಪಿಸಿಕೊಳ್ಳಬೇಕೆಂದು ತಾಕೀತು ಮಾಡಿದರು.

ದೇಶವನ್ನು ಹತ್ತು ವರ್ಷ ಆಡಳಿತ ನಡೆಸಿರುವ ಬಿಜೆಪಿ, ರಾಜ್ಯದಲ್ಲಿಯೂ ಅಧಿಕಾರದಲ್ಲಿದೆ. ಆದರೆ ಸಂವಿಧಾನದ ಉಳಿವಿನ ಕೆಲಸ ಆಗುತ್ತಿದೆಯೇ, ಸಂವಿಧಾನದ ಆಶಯ ನುಚ್ಚು ನೂರಾಗುತ್ತಿದೆ. ಮೀಸಲು ಕ್ಷೇತ್ರ ಹೊರತುಪಡಿಸಿ ರಾಜ್ಯದ ಯಾವುದೇ ಕ್ಷೇತ್ರದಿಂದ ಸ್ಪರ್ಧಿಸಿದರೂ ಸಿದ್ದರಾಮಯ್ಯ ಗೆಲ್ಲಬಲ್ಲವರಾಗಿದ್ದಾರೆ. ಆದರೆ ರಾಜಕೀಯ ಪ್ರಾರಂಭಿಸಿದ ಕ್ಷೇತ್ರದಲ್ಲೇ ಕೊನೆ ಚುನಾವಣೆ ಎದುರಿಸಬೇಕೆಂಬ ವರುಣಾ ಕ್ಷೇತ್ರದ ಜನತೆಯ ಒತ್ತಾಯದ ಕಾರಣ ಈ ಬಾರಿ ಇಲ್ಲಿಂದ ಸ್ಪರ್ಧಿಸುತ್ತಿದ್ದಾರೆ. ಜಾತಿ ಹೆಸರಿನಿಂದ ಯಾವೊಬ್ಬ ವ್ಯಕ್ತಿಯ ತೇಜೋವಧೆ ಸರಿಯಲ್ಲ. ಸಿಎಂ ಬಸವರಾಜ ಬೊಮ್ಮಾಯಿ ಎಲ್ಲರ ಹಕ್ಕುಗಳನ್ನು ಕಿತ್ತುಕೊಂಡಿದ್ದಾರೆ. ಮಕ್ಕಳಿಗೆ ವಿದ್ಯಾರ್ಥಿ ವೇತನ ದೊರಕುತ್ತಿಲ್ಲ. ಸರ್ಕಾರಿ ಹುದ್ದೆ ಎಲ್ಲರಿಗೂ ಕನಸಾಗಿದೆ. ಇಡೀ ವ್ಯವಸ್ಥೆಯನ್ನೇ ಜಾತಿ ಆಧಾರದ ಮೇಲೆ ಎತ್ತಿಕಟ್ಟಲಾಗುತ್ತಿದೆ. ಆದರೆ ಸಿದ್ದರಾಮಯ್ಯ ಅವರು ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಟ್ಟಿದ್ದರು. ಹೀಗಾಗಿ ಛಲವಾದಿ ನಾರಾಯಣಸ್ವಾಮಿ ಹಾಗೂ ಅವರ ಬಿಜೆಪಿ ಏನು ಮಾಡಿವೆ ಎಂದು ಕೇಳಿದರು.

ಛಲವಾದಿ ನಾರಾಯಣಸ್ವಾಮಿ ಅವರು ಆರ್‌ಎಸ್‌ಎಸ್ ಚಡ್ಡಿಯನ್ನು ತಲೆಮೇಲೆ ಹೊತ್ತು ತಿರುಗಿದರು. ಹೀಗಾಗಿ ಅವರಿಗೆ ಗೌರವ ಇದೆಯೇ, ಸಂವಿಧಾನದ ಆಶಯಕ್ಕೆ ಧಕ್ಕೆ ಬಂದಾಗ ಸುಮ್ಮನಿದ್ದ ಅವರು ಈಗ ಸಿದ್ದರಾಮಯ್ಯ ಅವರ ವಿರುದ್ಧ ಮಾತನಾಡುವ ನೈತಿಕತೆ ಹೊಂದಿಲ್ಲ. ಆದ್ದರಿಂದ ಎಚ್ಚರಿಕೆಯಿಂದ ಮಾತನಾಡುವಂತೆ ತಾಕೀತು ಮಾಡಿದರು.

ಸುದ್ದಿಗೋಷ್ಠಿಯಲ್ಲಿ ದೇವಳ್ಳಿ ಸೋಮಶೇಖರ್, ಭುಗತಗಳ್ಳಿ ಮುನಿಯಪ್ಪ, ನಾಡನಹಳ್ಳಿ ಪ್ರಸಾದ್, ವಾಜಮಂಗಲ ಸುರೇಶ್ ಇದ್ದರು.

ಸರ್ಕಾರಿ ಕಾರ್ಯಕ್ರಮಕ್ಕೆ ಪ್ರಧಾನಿ ಆಗಮನ: ನೀತಿ ಸಂಹಿತೆ ಉಲ್ಲಂಘನೆ

ಮೈಸೂರು, ಏ.2(ಎಂಟಿವೈ)– ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರೂ ಪ್ರಧಾನಿ ನರೇಂದ್ರ ಮೋದಿ ಆಗಮಿಸುತ್ತಿರುವುದು ನೀತಿ ಸಂಹಿತೆ ಉಲ್ಲಂಘನೆಯಾಗಲಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಬೆಂಗಳೂರಿನ ಜಕ್ಕೂರು ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್ ಮೂಲಕ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಭಾನುವಾರ ಆಗಮಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇದುವರೆಗೂ ಯಾವುದೇ ರಾಜ್ಯದಲ್ಲಾಗಲೀ ಚುನಾವಣೆ ಘೋಷಣೆಯಾದ ನಂತರ ಸರ್ಕಾರಿ ಕಾರ್ಯಕ್ರಮಗಳನ್ನು ಮಾಡಬಾರದು ಎಂಬ ನಿಯಮ ಅನುಸರಿಸಲಾಗಿದೆ. ಚುನಾವಣಾ ನೀತಿ ಸಂಹಿತೆ ಎಲ್ಲರಿಗೂ ಒಂದೇ. ಏ.9ರಂದು ರಾಜ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಆಗಮನ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ರಾಜ್ಯಕ್ಕೆ ಬರಲು ಚುನಾವಣಾ ಆಯೋಗ ಅನುಮತಿ ನೀಡಿದೆಯಾ? ಚುನಾವಣಾ ನೀತಿ ಸಂಹಿತೆ ಜಾರಿಯಾದ ಮೇಲೆ ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರಲ್ಲದೆ, ಚುನಾವಣಾ ನೀತಿ ಸಂಹಿತೆ ಶಾಸಕರಿಗೂ ಹಾಗೂ ಪ್ರಧಾನಿಗೂ ಒಂದೇ ಆಗಿರುತ್ತದೆ. ಈ ಕಾರ್ಯಕ್ರಮ ನಡೆಸಲು ಅನುಮತಿ ಸಿಕ್ಕಿದೆಯೇ ಎಂದು ನೋಡಬೇಕು. ನೀತಿ ಸಂಹಿತೆ, ನಿಯಮ ಎಲ್ಲರಿಗೂ ಒಂದೇ ಎಂದರು.



ಮೀಸಲಾತಿ ಪರಿಷ್ಕರಣೆ ಕೇವಲ ಕಣ್ಣೊರೆಸುವ ತಂತ್ರ: ಯಾವುದೇ ಪೂರ್ವತಯಾರಿ ಮಾಡಿಕೊಳ್ಳದೆ ಚುನಾವಣೆಯಲ್ಲಿ ಲಾಭ ಮಾಡಿಕೊಳ್ಳುವ ಏಕೈಕ ಉದ್ದೇಶದಿಂದ ಮೀಸಲಾತಿ ಪರಿಷ್ಕರಣೆ ಅಸ್ತ್ರ ಪ್ರಯೋಗಿಸಲಾಗಿದೆ. ಮೀಸಲಾತಿ ಪ್ರಮಾಣವನ್ನು ನಿಯಮ ಉಲ್ಲಂಘಿಸಿ ಶೇ.6 ರಷ್ಟು ಹೆಚ್ಚಳ ಮಾಡಲಾಗಿದೆ. ಇದನ್ನು ಜಾರಿಗೊಳಿಸಬೇಕಾದರೆ ಸಂವಿಧಾನದ ತಿದ್ದುಪಡಿ ಮಾಡಬೇಕು. ಅಲ್ಲದೆ, ಸದನದಲ್ಲಿ ಚರ್ಚೆ ನಡೆಸಬೇಕು. ಇದ್ಯಾವುದನ್ನೂ ಮಾಡದೇ ಕೇವಲ ಘೋಷಣೆ ಮಾಡಿ ಸುಮ್ಮನೆ ಕೂತಿದ್ದಾರೆ. ಇದರ ಅರ್ಥವನ್ನು ಜನ ಅರಿಯಬೇಕು. ಕೇವಲ ಬಾಯಿ ಮಾತಿಗೆ ಹೇಳಿ ಚುನಾವಣೆಯಲ್ಲಿ ಮತ ಪಡೆದು, ಕಾನೂನು ತೊಡಕಿನಿಂದ ಮೀಸಲಾತಿ ಪರಿಷ್ಕರಣೆ ಸಾಧ್ಯವಾಗಲಿಲ್ಲ ಎಂದು ಸಬೂಬು ಹೇಳುತ್ತಾರೆ. ನಿಯಮಾನುಸಾರ ಯಾವುದೇ ಪ್ರಕ್ರಿಯೆ ಮಾಡದೇ ಕೇವಲ ಘೋಷಣೆ ಮಾಡಿರುವುದರಿಂದ ನ್ಯಾಯಾಲಯ ಸರ್ಕಾರದ ಪ್ರಸ್ತಾಪವನ್ನು ತಿರಸ್ಕರಿಸುತ್ತದೆ ಎಂದು ವಿಶ್ಲೇಷಿಸಿದರು.

ಜೇನುಗೂಡಿಗೆ ಕೈ ಹಾಕಿ ಜನರಿಗೆ ಸಿಹಿ ಹಂಚಿದ್ದೇನೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿಕೆ ನೀಡಿದ್ದಾರೆ. ಮೀಸಲಾತಿ ಪರಿಷ್ಕರಣೆ ಮಾಡಿದ್ದು ಇದೇ ಮೊದಲಲ್ಲ. 2ಎ, 2ಬಿ, 3ಎ, 3ಬಿಗಳನ್ನು ಇದಕ್ಕೂ ಮೊದಲೇ ಮಾಡಲಾಗಿದೆ. 1994ರಿಂದ 2ಬಿ ಮೀಸಲಾತಿ ಇತ್ತು ಅದನ್ನು 2023ರಲ್ಲಿ ಏಕೆ ತೆಗೆಯಲಾಯಿತು ಎಂದು ಪ್ರಶ್ನಿಸಿದರು.

ಮೈಸೂರಿನ ಚಾಮರಾಜ, ಚಾಮುಂಡೇಶ್ವರಿ ಕ್ಷೇತ್ರಗಳ ಟಿಕೆಟ್ ವಿಚಾರ ನಾಡಿದ್ದು ಇತ್ಯರ್ಥವಾಗಲಿದೆ. ಮೀಟಿಂಗ್ ಬಳಿಕ ಕಾಂಗ್ರೆಸ್ ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆ ಆಗಲಿದೆ. ನಾನು ಕೋಲಾರದಲ್ಲಿ ಸ್ಪರ್ಧೆ ಮಾಡುವ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡಲಿದೆ. ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಯಾರೂ, ಯಾರನ್ನೂ ಕಟ್ಟಿಹಾಕಲು ಸಾಧ್ಯವಿಲ್ಲ. ಸೋಲಿಸುವುದು, ಗೆಲ್ಲಿಸುವುದು ಎಲ್ಲಾ ಜನರ ಕೈಯಲ್ಲಿದೆ. ನಾನು ವರುಣಾ ಕ್ಷೇತ್ರಕ್ಕೆ ಪ್ರಚಾರಕ್ಕೆ ಈಗಲೂ ಹೋಗುವುದಿಲ್ಲ. ನಾಮಪತ್ರ ಸಲ್ಲಿಕೆಗೆ ಮಾತ್ರ ಹೋಗುತ್ತೇನೆ ಎಲ್ಲವನ್ನೂ ಶಾಸಕ ಡಾ.ಯತೀಂದ್ರ ನೋಡಿಕೊಳ್ಳುತ್ತಾರೆ ಎಂದರು.

ಕಾರು–ಲಾರಿ ಮುಖಾಮುಖಿ ಡಿಕ್ಕಿ, ಖ್ಯಾತ ರಂಗಭೂಮಿ ಕಲಾವಿದ ಬೆಳಗಲ್ ವೀರಣ್ಣ ಸಾವು





ಚಳ್ಳಕೆರೆ, ಏ.2– ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ತಳಕು ಹೋಬಳಿ ವ್ಯಾಪ್ತಿಯಲ್ಲಿ ಭಾನುವಾರ ಬೆಳಿಗ್ಗೆ ಕಾರು ಮತ್ತು ಲಾರಿ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ರಂಗಭೂಮಿ ಹಾಗೂ ತೊಗಲು ಗೊಂಬೆಯಾಟದ ಹಿರಿಯ ಕಲಾವಿದ ಬೆಳಗಲ್ ವೀರಣ್ಣ ಸಾವಿಗೀಡಾಗಿದ್ದಾರೆ. ಬಳ್ಳಾರಿ ಮೂಲದವರಾದ ವೀರಣ್ಣ ಅವರು ಪುತ್ರ ಹನುಮಂತ ಅವರೊಂದಿಗೆ ಬೆಳಿಗ್ಗೆ ಬೆಂಗಳೂರಿಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ ಎಂದು ತಿಳಿದುಬಂದಿದೆ.

ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ವೀರಣ್ಣ ಅವರನ್ನು ಚಳ್ಳಕೆರೆ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಅವರು ಮಾರ್ಗ ಮಧ್ಯೆ ಸಾವಿಗೀಡಾಗಿದ್ದರು. ವೀರಣ್ಣ ಅವರ ಜೊತೆಗಿದ್ದ ಪುತ್ರ ಹನುಮಂತ ಅವರು ತೀವ್ರ ಗಾಯಗೊಂಡಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಪರಿಸ್ಥಿತಿ ಗಂಭೀರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಬೆಳಗಲ್ ವೀರಣ್ಣ (91) ಅವರು ಹಂಪಿ ಕನ್ನಡ ವಿವಿಯ ನಾಡೋಜ, ಕರ್ನಾಟಕ ರಾಜ್ಯೋತ್ಸವ, ಜಾನಪದ ಅಕಾಡೆಮಿ ಮತ್ತಿತರ ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ. ಜತೆಗೆ, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಮಾಜಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ತೊಗಲು ಗೊಂಬೆಯಾಟವನ್ನು ದೇಶ– ವಿದೇಶಗಳಲ್ಲಿ ಪ್ರಖ್ಯಾತಪಡಿಸಿದ್ದ ವೀರಣ್ಣ, ಖ್ಯಾತ ಸಂಗೀತ ಕಲಾವಿದ ಪಂಡಿತ್ ವೆಂಕಟೇಶಕುಮಾರ್ ಅವರ ಮಾವ.

ಇಸ್ರೊ: ಚಿನೂಕ್ ಹೆಲಿಕಾಪ್ಟರ್ ಬಳಸಿ ಉಡಾವಣಾ ವಾಹನದ ಲ್ಯಾಂಡಿಂಗ್ ಪರೀಕ್ಷೆ ಯಶಸ್ವಿ

ಬೆಂಗಳೂರು, ಏ.2– ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು(ISRO) ಭಾನುವಾರ ಚಿತ್ರದುರ್ಗದಲ್ಲಿ ತನ್ನ ಅಭಿವೃದ್ಧಿ ಹಂತದಲ್ಲಿರುವ ಮರುಬಳಕೆ ಮಾಡಬಹುದಾದ ಉಡಾವಣಾ ವಾಹನ (RLV) ಲ್ಯಾಂಡಿಂಗ್ ಪ್ರದರ್ಶನವನ್ನು ಯಶಸ್ವಿಯಾಗಿ ನಡೆಸಿತು. ಇಸ್ರೊ ಸಂಸ್ಥೆ ಡಿಆರ್‌ಡಿಒ ಮತ್ತು ಭಾರತೀಯ ವಾಯುಪಡೆಯ ಜೊತೆಗೆ ಸೇರಿ ಈ ಕಾರ್ಯಾಚರಣೆ ನಡೆಸಿದೆ.

ಇಂದು ಮುಂಜಾನೆ ಚಿತ್ರದುರ್ಗದ ಏರೋನಾಟಿಕಲ್ ಟೆಸ್ಟ್ ರೇಂಜ್ (ATR)ನಲ್ಲಿ ಪ್ರದರ್ಶನ ಕಾರ್ಯ ನಡೆಸಲಾಯಿತು. ಬಾಹ್ಯಾಕಾಶ ನೌಕೆಯು ನಾಸಾದ ಬಾಹ್ಯಾಕಾಶ ನೌಕೆಗಳನ್ನು ಹೋಲುತ್ತದೆ, ಇದು ಯುಎಸ್ ಬಾಹ್ಯಾಕಾಶ ಸಂಸ್ಥೆಯ ಅತಿದೊಡ್ಡ ಸಾಗಣೆದಾರವಾಗಿ ಲೋ ಅರ್ಥ್ ಆರ್ಬಿಟ್ (LEO)ಗೆ ಕಾರ್ಯನಿರ್ವಹಿಸುತ್ತದೆ.

ಭಾರತೀಯ ವಾಯುಪಡೆಯ ಚಿನೂಕ್ ಹೆಲಿಕಾಪ್ಟರ್ ಮೂಲಕ ಬಾಹ್ಯಾಕಾಶ ನೌಕೆಯು ಇಂದು ನಸುಕಿನ ಜಾವದಲ್ಲಿ ಹಾರಾಟ ನಡೆಸಿತು. ಹೆವಿ–ಲಿಫ್ಟ್ ಚಾಪರ್‌ನಲ್ಲಿ ಮೇಲ್ಮೈಯಿಂದ 4.5 ಕಿಲೋಮೀಟರ್ ಎತ್ತರಕ್ಕೆ ಅಂಡರ್‌ಸ್ಲಂಗ್ ತೂಕವಾಗಿ ಉಡಾವಣೆ ಮಾಡಲಾಯಿತು. ಒಮ್ಮೆ ಅದು ಪರೀಕ್ಷಾ ಎತ್ತರವನ್ನು ತಲುಪಿದಾಗ, RLV ಯ ಮಿಷನ್ ಮ್ಯಾನೇಜ್ಮೆಂಟ್ ಕಂಪ್ಯೂಟರ್ ಸಂಜ್ಞೆಯನ್ನು ಆಧರಿಸಿ, ಆರ್‌ಎಲ್‌ವಿಯನ್ನು ಗಾಳಿಯಲ್ಲಿ ಬಿಡುಗಡೆ ಮಾಡಲಾಯಿತು.

ಆರ್‌ಎಲ್‌ವಿ ನಂತರ ಇಂಟಿಗ್ರೇಟೆಡ್ ನ್ಯಾವಿಗೇಷನ್, ಮಾರ್ಗದರ್ಶನ ಮತ್ತು ನಿಯಂತ್ರಣ ವ್ಯವಸ್ಥೆಯನ್ನು ಬಳಸಿಕೊಂಡು ವಿಧಾನ ಮತ್ತು ಲ್ಯಾಂಡಿಂಗ್ ತಂತ್ರಗಳನ್ನು ನಿರ್ವಹಿಸಿತು.ಎಟಿಆರ್ ಏರ್‌ಸ್ಟ್ರಿಪ್‌ನಲ್ಲಿ ಸ್ವಾಯತ್ತ ಲ್ಯಾಂಡಿಂಗ್ ಅನ್ನು ಪೂರ್ಣಗೊಳಿಸಿದೆ ಎಂದು ಇಸ್ರೋ ಹೇಳಿದೆ. ಹೆಲಿಕಾಪ್ಟರ್ ಮೂಲಕ 4.5 ಕಿಮೀ ಎತ್ತರಕ್ಕೆ ಸಾಗಿಸಿ ರನ್‌ವೇಯಲ್ಲಿ ಸ್ವಯಂ ಲ್ಯಾಂಡಿಂಗ್ ಮಾಡಲು ಬಿಡುಗಡೆ ಮಾಡಿರುವುದು ವಿಶ್ವದಲ್ಲಿ ಇದೇ ಮೊದಲು ಎಂದು ಇಸ್ರೋ ಹೇಳಿದೆ.

ಚುನಾವಣಾ ಅಕ್ರಮ ತಡೆಗೆ ಜಿಲ್ಲಾಡಳಿತ ಕಟ್ಟುನಿಟ್ಟಿನ ಕ್ರಮ

ವರುಣಾ ಬಳಿ 18 ಲಕ್ಷ ರೂ. ನಗದು, ಅಗತ್ಯ ವಸ್ತುಗಳ ವಶ

ತಪಾಸಣಾ ತಂಡದಿಂದ 1.25 ಕೋಟಿ ಮೌಲ್ಯದ ಮದ್ಯ, 61 ಲಕ್ಷ ಮೌಲ್ಯದ ವಸ್ತುಗಳ ವಶ


ಮೈಸೂರು, ಏ.2(ಎಂಟಿವೈ)– ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಮತದಾರರಿಗೆ ಹಂಚಿಕೆ ಮಾಡಿ ಆಮಿಷವೊಡ್ಡುವ ಪ್ರಕ್ರಿಯೆ ತೆರೆಮರೆಯಲ್ಲಿ ನಡೆಯುತ್ತಿದ್ದು, ಅದಕ್ಕೆ ಕಡಿವಾಣ ಹಾಕಲು ಜಿಲ್ಲಾಡಳಿತ ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವ ಹಿನ್ನೆಲೆಯಲ್ಲಿ 18 ಲಕ್ಷ ರೂ. ನಗದು ಸೇರಿದಂತೆ 1.25 ಕೋಟಿ ರೂ. ಮೌಲ್ಯದ ಮದ್ಯ ಹಾಗೂ 61 ಲಕ್ಷ ರೂ. ಮೌಲ್ಯದ ವಿವಿಧ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಚುನಾವಣಾ ಅಕ್ರಮ ತಡೆಗೆ ಜಿಲ್ಲೆಯಲ್ಲಿ 162 ಫ್ಲೈಯಿಂಗ್ ಸ್ಕ್ವಾಡ್ ತಂಡ, 149 ಸ್ಟಾಟಿಕ್ ಸರ್ವಲೆನ್ಸ್ ತಂಡ ಹಾಗೂ 14 ಅಬಕಾರಿ ತಂಡವನ್ನು ರಚಿಸಲಾಗಿದ್ದು, ಜಿಲ್ಲೆಯಾದ್ಯಂತ ಸಂಚರಿಸಿ ಸರಕು ಸಾಗಾಣಿಕೆ, ಹಣ ಸಾಗಾಣಿಕೆ ಮೇಲೆ ಹದ್ದಿನ ಕಣ್ಣಿಟ್ಟಿದೆ. ಕಳೆದ 24 ಗಂಟೆಯಲ್ಲೇ ಮೈಸೂರು ಜಿಲ್ಲೆಯಲ್ಲಿ ಅಪಾರ ಪ್ರಮಾಣ ಹಣ ಹಾಗೂ ವಿವಿಧ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ.



18 ಲಕ್ಷ ರೂ. ಜಪ್ತಿ: ಮೈಸೂರು–ತಿ.ನರಸೀಪುರ ಮುಖ್ಯ ರಸ್ತೆಯ ವರುಣಾ ಬಳಿ ನಿರ್ಮಿಸಿರುವ ಚೆಕ್‌ಪೋಸ್ಟ್‌ನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 18 ಲಕ್ಷ ರೂ. ನಗದನ್ನು ಎಸ್‌ಎಸ್‌ಟಿ ತಂಡ ವಶಪಡಿಸಿಕೊಂಡಿದೆ. ತಪಾಸಣೆ ವೇಳೆ ವ್ಯಕ್ತಿಯೊಬ್ಬ ಕಾರಿನಲ್ಲಿ ಬ್ಯಾಗ್‌ವೊಂದರಲ್ಲಿ ಹಣದ ಕಂತೆಯನ್ನು ಸಾಗಿಸುತ್ತಿದ್ದಾಗ ಸಿಕ್ಕಿಬಿದ್ದಿದ್ದಾನೆ. ಹಣಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ತೋರಿಸದ ಕಾರಣ ಹಣವನ್ನು ಜಪ್ತಿ ಮಾಡಿರುವ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಅಲ್ಲದೆ, ಜಪ್ತಿ ಮಾಡಲಾದ ಹಣವನ್ನು ಆದಾಯ ತೆರಿಗೆ ಇಲಾಖೆಯ ವಶಕ್ಕೆ ಒಪ್ಪಿಸಿದ್ದಾರೆ.

19 ಲಕ್ಷ ರೂ. ಮೊತ್ತದ ವಸ್ತು ವಶ: ಜಿಲ್ಲೆಯಲ್ಲಿ ಫ್ಲೈಯಿಂಗ್ ಸ್ಕ್ವಾಡ್ ತಂಡವು ನಡೆಸಿದ ಕಾರ್ಯಾಚರಣೆಯಲ್ಲಿ ಭಾರೀ ಮೊತ್ತದ ವಿವಿಧ ವಸ್ತುಗಳನ್ನು ವಶಪಡಿಸಿಕೊಂಡಿದೆ. ಅದರಲ್ಲಿ 8,38,630 ರೂ. ಮೌಲ್ಯದ 137 ಗ್ರಾಂ ಚಿನ್ನ, 19,69,647 ರೂ. ಮೌಲ್ಯದ 26 ಕೆ.ಜಿ. ಸಾಮರ್ಥ್ಯದ 732 ಅಕ್ಕಿಮೂಟೆ, 722 ಕಿಟ್‌ಬ್ಯಾಗ್, 73 ಬಾಕ್ಸ್ ಸನ್‌ಫ್ಲ್ಯೂರ್ ವನಸ್ಪತಿ, 60 ಬಾಕ್ಸ್ ಜ್ಯೂಸ್, 146 ಬಾಕ್ಸ್ ಸನ್‌ಫ್ಲ್ಯೂರ್ ಎಣ್ಣೆ ವಶಪಡಿಸಿಕೊಂಡಿದ್ದಾರೆ.



ಎಸ್‌ಎಸ್‌ಟಿ ತಂಡದಿಂದ 42 ಲಕ್ಷದ ವಸ್ತು ವಶ: ಸ್ಟಾಟಿಕ್ ಸರ್ವಲೆನ್ಸ್ ತಂಡವೂ ಭರ್ಜರಿ ಬೇಟೆಯಾಡಿದ್ದು, ಇದುವರೆಗೂ ಜಿಲ್ಲೆಯ ವಿವಿಧೆಡೆ ನಡೆಸಿದ ಕಾರ್ಯಾಚರಣೆಯಲ್ಲಿ 42,95,865 ರೂ. ಮೌಲ್ಯದ ವಿವಿಧ ವಸ್ತುಗಳನ್ನು ವಶಪಡಿಸಿಕೊಂಡಿದೆ.

1.25 ಕೋಟಿ ರೂ. ಮೌಲ್ಯದ ಮದ್ಯ ವಶ: ಜಿಲ್ಲೆಯಲ್ಲಿ 14 ಅಬಕಾರಿ ತಂಡವು ಕಾರ್ಯಾಚರಣೆ ನಡೆಸುತ್ತಿದ್ದು, ಪೊಲೀಸರ ಸಹಕಾರದೊಂದಿಗೆ ಅಕ್ರಮವಾಗಿ ಸಾಗಿಸುತ್ತಿದ್ದ ಬೃಹತ್ ಮೌಲ್ಯದ ಮದ್ಯವನ್ನು ವಶಪಡಿಸಿಕೊಂಡಿದ್ದಾರೆ. ಒಟ್ಟು 23,706.34 ಲೀಟರ್ ಮದ್ಯ ವಶಪಡಿಸಿಕೊಳ್ಳಲಾಗಿದ್ದು, ಅವುಗಳ ಮೊತ್ತ 1,25,70,212 ರೂ. ಎಂದು ಅಂದಾಜಿಸಲಾಗಿದೆ. ಅದರಲ್ಲಿ ಅಬಕಾರಿ ತಂಡವು 1,25,13,662 ರೂ. ಮೌಲ್ಯದ 23,560.83 ಲೀಟರ್ ಮದ್ಯವನ್ನು ವಶಪಡಿಸಿಕೊಂಡಿದ್ದರೆ, ಪೊಲೀಸರು 56,550 ರೂ. ಮೌಲ್ಯದ 145.51 ಲೀಟರ್ ಮದ್ಯವನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರು ಮಿತ್ರ ಸೋಮವಾರ 3 ಏಪ್ರಿಲ್ 2023

ಲಿಂಗಾಯತರು ಸಿದ್ದರಾಮಯ್ಯರನ್ನು ಬೆಂಬಲಿಸುವ ಹೇಳಿಕೆಗೆ ಖಂಡನೆ

ತಿ.ನರಸೀಪುರ, ಏ.2– ವರುಣಾ ಕ್ಷೇತ್ರದ ವೀರಶೈವ ಲಿಂಗಾಯತರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಬೆಂಬಲಿಸಲಿದ್ದಾರೆ ಎಂದು ಕಾಂಗ್ರೆಸ್‌ನ ವೀರಶೈವ ಮುಖಂಡರೊಬ್ಬರು ನೀಡಿರುವ ಹೇಳಿಕೆ ಸಮಾಜವನ್ನು ದಿಕ್ಕು ತಪ್ಪಿಸುವ ಉದ್ದೇಶ ಹೊಂದಿದೆ ಎಂದು ವರುಣಾ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಆರೋಪಿಸಿದರು.



ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ವರುಣಾ ಮಹೇಶ್ ಹೆಸರೇಳದೇ ಅವರ ಹೇಳಿಕೆ ಖಂಡಿಸಿದ ಮಂಜುನಾಥ್, ಮೈಸೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ವೀರಶೈವ ಮುಖಂಡರೊಬ್ಬರು ವೀರಶೈವರು ಕಾಂಗ್ರೆಸ್ ಪರವಾಗಿದ್ದಾರೆ. ವೀರಶೈವರೆಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಸೇರಲಿದ್ದಾರೆ ಎಂದು ನೀಡಿರುವ ಹೇಳಿಕೆ ಖಂಡನೀಯ. ಇದು ತಮ್ಮ ಪಕ್ಷದ ನಾಯಕರನ್ನು ಮೆಚ್ಚಿಸಿಕೊಳ್ಳಲು ನೀಡಿರುವ ಹೇಳಿಕೆ ಎಂದರು.

ವರುಣಾದಲ್ಲಿ 63 ಸಾವಿರ ವೀರಶೈವ ಮತದಾರರಿದ್ದು, ಇದರಲ್ಲಿ ಹೆಚ್ಚಿನ ವೀರಶೈವರು ಸಿದ್ದರಾಮಯ್ಯರನ್ನು ಬೆಂಬಲಿಸುತ್ತಾರೆ ಎಂದಿರುವ ಅವರ ಹೇಳಿಕೆ ಬಾಲಿಶತನದಿಂದ ಕೂಡಿದೆ. ಕ್ಷೇತ್ರದಲ್ಲಿ ಬಿಜೆಪಿಗೆ ತನ್ನದೇ ಆದ ಮತ ಬ್ಯಾಂಕ್ ಇದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಸಮಾಜಕ್ಕೆ ತನ್ನದೇ ಆದ ಕೊಡುಗೆ ನೀಡಿದ್ದಾರೆ. ಹಾಗಾಗಿ ಸಹಜವಾಗಿ ಯಾವ ಪಕ್ಷ ಬೆಂಬಲಿಸಬೇಕೆಂಬ ಕನಿಷ್ಠ ಅರಿವು ವೀರಶೈವರಿಗಿದೆ. ಇವರಿಂದ ಏನನ್ನೂ ತಿಳಿದುಕೊಳ್ಳುವ ಅನಿವಾರ್ಯತೆ ಸಮಾಜಕ್ಕಿಲ್ಲ ಎಂದು ಕಿಡಿಕಾರಿದರು.

ಸಿದ್ದರಾಮಯ್ಯನವರ ಪರ ಹೇಳಿಕೆ ನೀಡುವ ಕಾಂಗ್ರೆಸ್ ವೀರಶೈವ ಮುಖಂಡರು ವೀರಶೈವ ಸಮಾಜಕ್ಕೆ ಟಿಕೆಟ್ ಕೇಳಲು ಹಿಂಜರಿಯುತ್ತಿರುವುದೇಕೆ, ಟಿಕೆಟ್‌ಗಾಗಿ ಅರ್ಜಿ ಹಾಕುವ ಅರ್ಹತೆ ಇವರಿಗಿಲ್ಲವೇ ಎಂದು ಪ್ರಶ್ನಿಸಿದರು. ಗುಂಡ್ಲುಪೇಟೆ ಹೊರತುಪಡಿಸಿ ಚಾಮರಾಜನಗರ, ಹಾಸನ, ಮೈಸೂರು, ಮಂಡ್ಯ ಭಾಗದಲ್ಲಿ ಎಷ್ಟು ಮಂದಿ ವೀರಶೈವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ ಎಂಬುದನ್ನು ಅವರು ಸ್ಪಷ್ಟಪಡಿಸಲಿ. ಅಲ್ಲದೇ ಮೈಸೂರು ಭಾಗದ ಸಜ್ಜನ ರಾಜಕಾರಣಿ ಎಂ.ರಾಜಶೇಖರ ಮೂರ್ತಿ, ನಂಜನಗೂಡಿನ ಎಂ.ಮಹದೇವ್ ಅವರನ್ನು ಕಾಂಗ್ರೆಸ್ ಯಾವ ರೀತಿ ಮೂಲೆಗುಂಪು ಮಾಡಿತು ಎಂಬುದನ್ನು ಅರಿಯಲಿ. ಹಾಗಾಗಿ ಇವರ ಹೇಳಿಕೆಗೆ ಯಾವುದೇ ಮನ್ನಣೆ ನೀಡಬೇಕಾಗಿಲ್ಲ. ಅವರು ನೀಡಿರುವ ಹೇಳಿಕೆ ಕೇವಲ ಕಾಂಗ್ರೆಸ್ ನಾಯಕರನ್ನು ಮೆಚ್ಚಿಸಲು ಹಾಗೂ ಪಕ್ಷದಲ್ಲಿ ತನ್ನ ಸ್ಥಾನ ಗಟ್ಟಿಗೊಳಿಸಲು ಮಾತ್ರವಾಗಿದೆ ಎಂದು ವ್ಯಂಗ್ಯವಾಡಿದರು.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ವರುಣಾಕ್ಕೆ 48 ಕೋಟಿ ರೂ. ಬಿಡುಗಡೆ ಮಾಡಿದ್ದರು. ಆದರೆ ಶಾಸಕ ಡಾ.ಯತೀಂದ್ರ ಬಿಡುಗಡೆಯಾಗಿದ್ದ ಹಣ ತಡೆ ಹಿಡಿದರು. ಆಗ ಈ ಬಗ್ಗೆ ಮುಖಂಡರು ಚಕಾರ ಎತ್ತಲಿಲ್ಲ ಏಕೆ ಎಂದು ಪ್ರಶ್ನಿಸಿದ ಮಂಜುನಾಥ್ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಗೊಂದಲದ ಹೇಳಿಕೆ ನೀಡದೇ ಕಾಂಗ್ರೆಸ್ ಕಾರ್ಯಕರ್ತನಂತೆ ಮಾತನಾಡಲಿ. ಅದನ್ನು ಬಿಟ್ಟು ವೀರಶೈವರೆಲ್ಲರೂ ಸಿದ್ದರಾಮಯ್ಯ ಪರವಾಗಿದ್ದಾರೆ ಎನ್ನುವ ಸಮಾಜ ಒಡೆಯುವಂತಹ ಹೇಳಿಕೆ ನೀಡುವುದು ಬೇಡ. ಇದು ಹೀಗೆ ಮುಂದುವರೆದರೆ ಉಗ್ರ ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ ಮುಖಂಡ ಕುಪ್ಪೇಗಾಲ ಶಿವಬಸಪ್ಪ ಮಾತನಾಡಿ, ಕಾಂಗ್ರೆಸ್ ವೀರಶೈವ ಮುಖಂಡರು ವೀರಶೈವ ಲಿಂಗಾಯತರು ಸಿದ್ದರಾಮಯ್ಯ ಪರವಾಗಿದ್ದಾರೆ ಎಂದು ಹೇಳಿಕೆ ನೀಡಿರುವುದು ಖಂಡನೀಯ. ಅವರು ಒಡೆದು ಆಳುವ ನೀತಿ ಅನುಸರಿಸಿದಂತೆ ಕಾಣುತ್ತಿದೆ. ಸಿದ್ದರಾಮಯ್ಯರವರು ವೀರಶೈವರ ಮತ ಕೇಳುತ್ತಾರೆ. ಆದರೆ ಅವರಿಗೆ ಕ್ಷೇತ್ರದಲ್ಲಿ ಬಹು ಸಂಖ್ಯಾತರಾಗಿರುವ ಲಿಂಗಾಯಿತರಿಗೆ ಪಕ್ಷದ ಟಿಕೆಟ್ ಕೊಡಿಸಲು ಶಕ್ತಿ ಇಲ್ಲವೇ ಎಂದು ಪ್ರಶ್ನಿಸಿದರು. ವೀರಶೈವರು ಪ್ರಜ್ಞಾವಂತರಾಗಿದ್ದು ಯಾರನ್ನು ಬೆಂಬಲಿಸಬೇಕೆನ್ನುವ ಕನಿಷ್ಠ ಅರಿವನ್ನು ಹೊಂದಿದ್ದಾರೆ. ವೀರಶೈವರು ಕಾಂಗ್ರೆಸ್ ಪಕ್ಷದ ಪರವಾಗಿಲ್ಲ ಎಂಬುದಕ್ಕೆ ಸಾಕಷ್ಟು ಉದಾಹರಣೆ ಇದೆ. ಹಾಗಾಗಿ ವೀರಶೈವ ಕಾಂಗ್ರೆಸ್ ಮುಖಂಡರು ತಮ್ಮ ರಾಜಕೀಯ ಏಳಿಗೆಗಾಗಿ ಇಡೀ ವೀರಶೈವ ಸಮಾಜವನ್ನು ದಿಕ್ಕು ತಪ್ಪಿಸುವ ಕೆಲಸ ಮಾಡದೇ ತಮ್ಮ ಪಕ್ಷದ ಕೆಲಸ ಮಾಡಿಕೊಂಡು ಹೋಗಲಿ ಎಂದು ಸಲಹೆ ನೀಡಿದರು.

ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಡಿ.ಮಹೇಶ್ ಮಾತನಾಡಿದರು. ಬಿಜೆಪಿ ಮಹಾಶಕ್ತಿ ಕೇಂದ್ರದ ಕವಲಂದೆ ಮಲ್ಲಣ್ಣ, ವರುಣಾ ಯುವ ಮೋರ್ಚಾ ಅಧ್ಯಕ್ಷ ಮೋಹನ್, ತಗಡೂರು ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನಗರ್ಲೆ ಮಹೇಶ್, ವಕೀಲ ಶಂಭುಲಿಂಗಸ್ವಾಮಿ, ರೈತ ಮುಖಂಡ ಕುಪ್ಪೇಗಾಲ ಸೋಮಶೇಖರ್ ಸುದ್ದಿಗೋಷ್ಠಿಯಲ್ಲಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಬ್ಜ (ಕ): ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.10.25ಕ್ಕೆ, ಮ.1.30ಕ್ಕೆ, ದಾಸ್ ಕಾ ಧಮ್ಕಿ (ತೆ): ಸಂ.4.30ಕ್ಕೆ, ರಾ.7.25ಕ್ಕೆ, ಶಾಜಮ್ ದಿ ಫ್ಯೂರಿ ಆಫ್ ದಿ ಗಾಡ್ಸ್ (ಇಂ): ರಾ.10.20ಕ್ಕೆ,
ಸ್ಕ್ರೀನ್ 3	ಶಾಜಮ್ ದಿ ಫ್ಯೂರಿ ಆಫ್ ದಿ ಗಾಡ್ಸ್ (ಇಂ): ಬೆ.11.10ಕ್ಕೆ, ಮ.1.50ಕ್ಕೆ, ಮಿಸ್ ಚಟರ್ಜಿ Vs ನಾರ್ವೆ (ಹಿಂ): ಸಂ.4.30ಕ್ಕೆ, ರಾ.7.10ಕ್ಕೆ, ರಾ.9.50ಕ್ಕೆ
ಸ್ಕ್ರೀನ್ 4	ಕಬ್ಜ (ಕ): ಬೆ.10.35ಕ್ಕೆ, ಮ.1.20ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕಬ್ಜ (ಕ): ಬೆ.9.10ಕ್ಕೆ, ಮ.12ಕ್ಕೆ, ಮ.2.50ಕ್ಕೆ, ಸಂ.5.40ಕ್ಕೆ, ರಾ.8.30ಕ್ಕೆ.
ಸ್ಕ್ರೀನ್ 2	ಕಬ್ಜ (ಕ): ಬೆ.10.10ಕ್ಕೆ, ಮ.1ಕ್ಕೆ, ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಬ್ಜ (ಕ): ಬೆ.7.50ಕ್ಕೆ, ಬೆ.10.40ಕ್ಕೆ, ಮ.1.30ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಶಾಜಮ್ ದಿ ಫ್ಯೂರಿ ಆಫ್ ದಿ ಗಾಡ್ಸ್ (ಇಂ): ಬೆ.10.10ಕ್ಕೆ, ಮ.12.55ಕ್ಕೆ, ಸಂ.6.25ಕ್ಕೆ, ರಾ.9.10ಕ್ಕೆ, ಫಲನ ಅಬ್ಬೈ ಫಲನ ಅಮ್ಮೈ (ತೆ): ಸಂ.5.05ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ (ಕ):** ಸಂ.4.50ಕ್ಕೆ, **ಚೌಕಾಬಾರ (ಕ):** ರಾ.7.50ಕ್ಕೆ, **ಕ್ರಿಡ್ 3 (ಇಂ):** ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ (ಮ):** ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್ (ತ):** ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6 (ಇಂ):** ಮ.2.45ಕ್ಕೆ, ರಾ.7.45ಕ್ಕೆ, **65 (ಇಂ):** ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಿಡುದಲೈ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಹೊಯ್ಸಳ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತು ತೋತಿ ಮೆ ಮಕ್ಕರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಹೊಯ್ಸಳ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಬ್ಜ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ದಸರಾ (ತೆ)	4 ಪ್ರದರ್ಶನಗಳು
ಸಂಗಂ	
ಭೋಲಾ (ಹಿ)	4 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೋಲಾ (ಹಿ)	4 ಪ್ರದರ್ಶನಗಳು
ಪ್ರಭಾ	
ಪತು ತಲಾ (ತ)	4 ಪ್ರದರ್ಶನಗಳು

ಮೊಳೆಯೂರಲ್ಲಿ ಶ್ರೀಬಿಲ್ ಕುಮಾರಸ್ವಾಮಿ ರಥೋತ್ಸವ



ಸರಗೂರು, ಏ.2– ತಾಲೂಕಿನ ಮೊಳೆಯೂರು ಗ್ರಾಮದಲ್ಲಿ ಶ್ರೀಬಿಲ್ ಕುಮಾರಸ್ವಾಮಿ ರಥೋತ್ಸವ ಹಾಗೂ ಕೊಂಡೋತ್ಸವ ವಿಜೃಂಭಣೆಯಿಂದ ನೆರವೇರಿತು.

ಗ್ರಾಮದ ಹೊರವಲಯದಲ್ಲಿರುವ ಶ್ರೀಬಿಲ್ ಕುಮಾರಸ್ವಾಮಿ ದೇವಸ್ಥಾನ ಹಾಗೂ ಗ್ರಾಮವನ್ನು ತಳಿರು ತೋರಣ, ಬಣ್ಣ ಬಣ್ಣದ ರಂಗೋಲಿಯಿಂದ ಸಿಂಗರಿಸಲಾಗಿತ್ತು. ಮುಂಜಾನೆ ದೇವರಿಗೆ ಹೋಮ, ಹವನ ಪೂಜೆಗಳು ನೆರವೇರಿದವು. ನಂತರ ಹತ್ತಿರದ ಕೆರೆಗೆ ತೆರಳಿ ಗಂಗೆ ಪೂಜೆ ನಡೆಸಿ ಬಳಿಕ ವಿವಿಧ ಹೂಗಳಿಂದ ಸಿಂಗರಿಸಿದ್ದ ಶ್ರೀ ಬಿಲ್‌ಕುಮಾರಸ್ವಾಮಿ ಉತ್ಸವ ಮೂರ್ತಿಯನ್ನು ರಥದ ಮೇಲೆ ಪ್ರತಿಷ್ಠಾಪಿಸಿ ಪೂಜೆ ನೆರವೇರಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕೋಲಾಟ, ಸತ್ತಿಗೆ ಸೂರಪಾನಿ, ಬ್ಯಾಂಡ್‌ಸೆಟ್‌ನೊಂದಿಗೆ ಮೆರವಣಿಗೆ ಮಾಡಲಾಯಿತು.

ಬಳಿಕ ದೇವಾಲಯದ ಆವರಣದಲ್ಲಿ ನಡೆದ ಕೊಂಡೋತ್ಸವವನ್ನು ಕಣ್ತುಂಬಿಕೊಳ್ಳಲು ಭಕ್ತರು ಕಿಕ್ಕಿರಿದು ತುಂಬಿದ್ದರು. ಕೊಂಡ ಆಯ್ದ ಭಕ್ತರಿಗೆ ಮಜ್ಜಿಗೆ ವಿತರಿಸಲಾಯಿತು. ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಈ ವೇಳೆ ಗ್ರಾಮದ ಗುಡಿಗೌಡರಾದ ಎಂ.ಸಿ.ಬೀರೇಗೌಡ, ಮುಖಂಡರಾದ ಎಂ.ಎಸ್.ದೇವರಾಜು, ಎಂ.ಎಸ್.ಆನಂದ್, ಎಂ.ಕೆ ಹರಿದಾಸ್, ಎಂ.ಎನ್.ಅನಂತಕೃಷ್ಣಮೂರ್ತಿ, ಎಂ.ಎನ್.ಭೀಮರಾಜ್, ಜವರೇಗೌಡ, ಎಂ.ಕೆ. ಕೃಷ್ಣಪ್ಪ, ಕರಿಗೌಡ, ಬೀರೇಗೌಡ, ರಾಜಶೆಟ್ಟಿ, ಗ್ರಾಪಂ ಉಪಾಧ್ಯಕ್ಷ ದೇವದಾಸ್, ಸದಸ್ಯರಾದ ನಾಗಯ್ಯ, ನಿಂಗರಾಜು, ಬಸವರಾಜು, ಮೊಳೆಯೂರು ಹಾಗೂ ಸುತ್ತಮುತ್ತಲ ಗ್ರಾಮಗಳ ಭಕ್ತರು ದೇವರ ದರ್ಶನ ಪಡೆದರು.



ಸರಗೂರಲ್ಲಿ ಡಾ.ಶ್ರೀ ಶಿವಕುಮಾರಸ್ವಾಮೀಜಿ ಸೇವಾ ಸ್ವಸಹಾಯ ಸಂಘ ಆಯೋಜಿಸಿದ್ದ ತ್ರಿವಿಧ ದಾಸೋಹಿ ಲಿಂಗೈಕ್ಯ ಡಾ.ಶ್ರೀಶಿವಕುಮಾರ ಸ್ವಾಮೀಜಿಯವರ ಜಯಂತಿಯಲ್ಲಿ ಹಂಚೀಪುರ ಸಿದ್ದಮಲ್ಲೇಶ್ವರ ಪಟ್ಟದ ಮಠದ ಚನ್ನಬಸವಸ್ವಾಮೀಜಿ ಅವರಿಗೆ 75 ವಸಂತ ಪೂರೈಸಿದ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಲಾಯಿತು.

ಕೋಟೆಯಲ್ಲಿ ನ್ಯಾಯಸಮ್ಮತ ಚುನಾವಣೆಗೆ ಕ್ರಮ

ಚುನಾವಣಾಧಿಕಾರಿ ಕುಮುದಾ ಶರತ್

ಹೆಚ್.ಡಿ.ಕೋಟೆ, ಏ.2– ವಿಧಾನಸಭಾ ಚುನಾವಣಾ ಹಿನ್ನೆಲೆಯಲ್ಲಿ ನೀತಿಸಂಹಿತೆ ಉಲ್ಲಂಘನೆಯಾಗದಂತೆ ನಿಗಾ ವಹಿಸಲು ತಾಲೂಕಿನಲ್ಲಿ 3 ಚೆಕ್‌ಪೋಸ್ಟ್‌ಗಳನ್ನು ತೆರೆದು ನ್ಯಾಯಸಮ್ಮತ ಚುನಾವಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಚುನಾವಣಾಧಿಕಾರಿ ಕುಮುದಾ ಶರತ್ ತಿಳಿಸಿದರು.



ಪಟ್ಟಣದ ತಾಲೂಕು ಕಚೇರಿಯಲ್ಲಿ ಮಾತನಾಡಿದ ಅವರು, ಕೇರಳ ಗಡಿಭಾಗವಾದ ಬಾವಲಿ, ಕಂಚಮಳ್ಳಿ, ಭೀಮನಹಳ್ಳಿ ಸೇರಿದಂತೆ 3 ಚೆಕ್‌ಪೋಸ್ಟ್ ತೆರೆಯಲಾಗಿದ್ದು, ಸೆಕ್ಟರ್ ಹಾಗೂ ಸಿಬ್ಬಂದಿಗಳನ್ನು ನೇಮಿಸಲಾಗಿದೆ. ಕ್ಷೇತ್ರದಿಂದ ಹೊರ ಹೋಗುವವರು ಹಾಗೂ ಕ್ಷೇತ್ರದ ಒಳ ಬರುವವರನ್ನು ತೀವ್ರ ತಪಾಸಣೆ ನಡೆಸಲಾಗುವುದು ಎಂದು ತಿಳಿಸಿದರು.

50 ಸಾವಿರಕ್ಕಿಂತ ಹೆಚ್ಚು ಹಣವನ್ನು ದಾಖಲಾತಿ ಇಲ್ಲದೆ ಕೊಂಡೊಯ್ದರೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಅದೇ ರೀತಿ ಮದ್ಯ ಇನ್ನಿತರ ನೀತಿ ಸಂಹಿತೆಗೆ ಒಳಪಡುವ ವಸ್ತುಗಳನ್ನು ಸಹ ವಶಕ್ಕೆ ಪಡೆದು ಕ್ರಮ ಜರುಗಿಸಲಾಗುವುದು ಎಂದರು.

6 ಫ್ಲೈಯಿಂಗ್ ಸ್ಕ್ವಾಡ್ ತಂಡಗಳೊಂದಿಗೆ 28 ಸೆಕ್ಟರ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಚುನಾವಣಾ ನೀತಿ ಸಂಹಿತೆಗೆ ಸಂಬಂಧಿಸಿದಂತೆ ಹೆಚ್.ಡಿ.ಕೋಟೆ ತಾಲೂಕು ಕಚೇರಿಯಲ್ಲಿ ಕಂಟ್ರೋಲ್ ರೂಂ ತೆರೆಯಲಾಗಿದ್ದು, ದೂ:08228 255325 ಸಂಖ್ಯೆಗೆ ಸಾರ್ವಜನಿಕರು ಕರೆ ಮಾಡಿ ಸಕ್ರಮಗಳಿಗೆ ಸಂಬಂಧಿಸಿದಂತೆ ದೂರು ನೀಡಬಹುದು ಎಂದರು.

ಮಾ.29 ರಿಂದ ಮೇ 15ರವರೆಗೆ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ಈ ಸಂದರ್ಭ ಸಾರ್ವಜನಿಕರು ಹಬ್ಬ ಹರಿದಿನಗಳನ್ನು ಮಾಡಲು ಅನುಮತಿ ಪಡೆಯುವುದು ಕಡ್ಡಾಯವಾಗಿದ್ದು, 48 ಗಂಟೆ ಮುಂಚಿತವಾಗಿ ಅರ್ಜಿ ಸಲ್ಲಿಸಬೇಕು ಎಂದರು.

ರಾಜಕೀಯ ಪಕ್ಷಗಳ ಮುಖಂಡರು ಯಾವುದೇ ಸಭೆ ಸಮಾರಂಭ ನಡೆಸಲು ಮುಂಚಿತವಾಗಿ ಅನುಮತಿ ಪಡೆಯಬೇಕು. ಒಬ್ಬ ಅಭ್ಯರ್ಥಿ 40 ಲಕ್ಷ ಹಣ ಖರ್ಚು ಮಾಡಲು ನಿಗದಿ ಮಾಡಲಾಗಿದ್ದು, ಪ್ರತಿದಿನ ಖರ್ಚಿನ ಬಗ್ಗೆ ವಿವರ ಸಲ್ಲಿಸಬೇಕು. ಕಾಲಕಾಲಕ್ಕೆ ತಕ್ಕಂತೆ ರಾಜಕೀಯ ಪಕ್ಷಗಳ ಸಭೆ ಮಾಡಲಾಗುವುದು. ಈಗಾಗಲೇ ಎಲ್ಲಾ ರಾಜಕೀಯ ಪಕ್ಷದವರ ಸಭೆ ಕರೆದು ತಿಳುವಳಿಕೆ ನೀಡಲಾಗಿದೆ. ಪಾರದರ್ಶಕ ಚುನಾವಣೆ ಮಾಡಲು ಎಲ್ಲರೂ ಸಹಕರಿಸಬೇಕು ಎಂದರು. ಸಭೆಯಲ್ಲಿ ಸಹಾಯಕ ಚುನಾವಣಾಧಿಕಾರಿ ಪಿ.ಎಸ್.ಮಹೇಶ್, ಶ್ರೀಶಂಷಾಲಂ, ಸಣ್ಣರಾಮಪ್ಪ, ಕುಮಾರ್, ಶಶಿಧರ್ ನಾಯಕ್ ಇದ್ದರು.

> **6** ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ ಒಟ್ಟು 2,21,346 ಮತದಾರರಿದ್ದು, ಇದರಲ್ಲಿ 1,11315 ಪುರುಷರು, 1,10,031 ಮಹಿಳೆಯರು, ಪಿಡಬ್ಲ್ಯೂಡಿ ವೋಟರ್ಸ್ 3429, 80 ವರ್ಷ ಮೇಲ್ಪಟ್ಟವರು 273, ಸರ್ವಿಸ್ ವೋಟರ್ಸ್ 79 ಮತದಾರರಿದ್ದಾರೆ. ಒಟ್ಟು 282 ಮತಗಟ್ಟೆಗಳನ್ನು ತೆರೆಯಲಾಗಿದ್ದು, ಈ ಪೈಕಿ 8 ಅತಿ ಸೂಕ್ಷ್ಮ, 56 ಸೂಕ್ಷ್ಮ ಮತಗಟ್ಟೆಗಳನ್ನು ತೆರೆಯಲಾಗಿದೆ.
> – ಕುಮುದಾ ಶರತ್, ಚುನಾವಣಾಧಿಕಾರಿ.

ಒಳಮೀಸಲಾತಿ ವರದಿ ಜಾರಿಗೆ ಶ್ರಮಿಸಿದ

ಎ.ನಾರಾಯಣಸ್ವಾಮಿ ಸನ್ಮಾನಿಸಿದ ಮಾದಿಗ ಸಮುದಾಯ



ತಿ.ನರಸೀಪುರ, ಏ.2– ಒಳಮೀಸಲಾತಿ ವರದಿ ಜಾರಿಗೆ ಶ್ರಮಿಸಿದ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಅವರನ್ನು ಮೈಸೂರಲ್ಲಿ ಮಾದಿಗ ಸಮುದಾಯದ ಮುಖಂಡರು ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು.

ಮಾದಿಗ ಸಮುದಾಯ ಕಳೆದ 30 ವರ್ಷಗಳಿಂದ ನಡೆಸುತ್ತಿದ್ದ ಒಳಮೀಸಲಾತಿ ಹೋರಾಟಕ್ಕೆ ಜಯ ಸಿಕ್ಕಿದ್ದು, ಬಿಜೆಪಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವಲ್ಲಿ ಸಮುದಾಯದ ಶ್ರೀಗಳು, ನಾರಾಯಣಸ್ವಾಮಿ ಹಾಗೂ ಅನೇಕ ಮುಖಂಡರು ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಹಾಗೂ ಹಾಲಿ ಸಿಎಂ ಬಸವರಾಜು ಬೊಮ್ಮಾಯಿ, ಆರ್‌ಎಸ್‌ಎಸ್ ಮುಖಂಡರಿಗೆ ಮನವಿ ಮಾಡಿ ಸರ್ಕಾರದ ಮೇಲೆ ಒತ್ತಡ ತಂದು ಶಿಫಾರಸು ಮಾಡುವಲ್ಲಿ ಯಶಸ್ವಿಯಾದ ಕಾರಣ ಒಳ ಮೀಸಲಾತಿ ಸಿಕ್ಕಿದೆ. ಹಿಂದಿನ ಸರ್ಕಾರಗಳು ನಮ್ಮ ಮನವಿಗೆ ಸ್ಪಂದಿಸಿರಲಿಲ್ಲ. ಬಿಜೆಪಿ ಸರ್ಕಾರ ಸ್ಪಂದಿಸಿದೆ. ಇದು ಸಮುದಾಯಕ್ಕೆ ಬಹುದೊಡ್ಡ ಕೊಡುಗೆ ಎಂದು ವಿಜಯೇಂದ್ರ ಅಭಿಮಾನಿ ಬಳಗದ ಭೈರಾಪುರ ಬಾಲರಾಜ್ ತಿಳಿಸಿದರು.

ಈ ವೇಳೆ ಸಮುದಾಯದ ಹೋರಾಟಗಾರ ಪ್ರಸನ್ನ ಚಕ್ರವರ್ತಿ, ನರಸೀಪುರ ಬಿಜೆಪಿ ಮುಖಂಡ ಎಂ.ದಾಸಯ್ಯ, ಚಾಮರಾಜನಗರ ಜಿಲ್ಲೆ ಬಿಜೆಪಿ ಮುಖಂಡರಾದ ನಾಗೇಂದ್ರ ಅರಕಲವಾಡಿ, ಮಧುರಾಜ್, ಮಳವಳ್ಳಿ ಆದಿಜಾಂಬವ ಸಂಘದ ಅಧ್ಯಕ್ಷ ಮಂಜುನಾಥ್, ಕಿಟ್ಟಪ್ಪ, ಹುಳಿಮಾವು ಶಿವು, ಶ್ರೀನಿವಾಸ್, ವೆಂಕಟೇಶ್, ಹೂವಿನ ಕೊಪ್ಪಲು ಶಿವಕುಮಾರ್, ವಿಷ್ಣು ಹಾಜರಿದ್ದರು.

ಹುಣಸೂರಿನ ಚೆಕ್‌ಪೋಸ್ಟ್‌ಗಳಲ್ಲಿ 15.26 ಲಕ್ಷ ರೂ. ವಶ

ಹುಣಸೂರು, ಏ.2– ಹುಣಸೂರು ತಾಲೂಕಿನ 2 ಚೆಕ್‌ಪೋಸ್ಟ್‌ಗಳಲ್ಲಿ 15.26 ಲಕ್ಷ ರೂ.ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣಾಧಿಕಾರಿ ರುಚಿ ಬಿಂದಾಲ್ ತಿಳಿಸಿದ್ದಾರೆ.



ಹುಣಸೂರು–ಮಡಿಕೇರಿ ಹೆದ್ದಾರಿಯ ಚಿಲ್ಕುಂದ ಚೆಕ್‌ಪೋಸ್ಟ್‌ನಲ್ಲಿ ಮಾ.31ರ ಮಧ್ಯರಾತ್ರಿ ಕೇರಳ ಮೂಲದವರಿಂದ 8.91ಲಕ್ಷ ರೂ., ಏ.1 ರ ಮಧ್ಯಾಹ್ನ ಇದೇ ಚೆಕ್‌ಪೋಸ್ಟ್‌ನಲ್ಲಿ ಮೈಸೂರಿನ ಬೋಗಾದಿ ರಸ್ತೆಯ ಕೃಷ್ಣ ಪೌಲ್ಟ್ರಿಗೆ ಸೇರಿದ 5.68 ಲಕ್ಷ ರೂ. ಹಾಗೂ ಮಾ.30ರಂದು ಹುಣಸೂರು–ವಿರಾಜಪೇಟೆ ರಸ್ತೆಯ ಮುತ್ತುರಾಯನಹೊಸಳ್ಳಿ ಚೆಕ್‌ಪೋಸ್ಟ್‌ನಲ್ಲಿ 67 ಸಾವಿರ ರೂ. ಸೇರಿದಂತೆ ಯಾವುದೇ ದಾಖಲೆಗಳಿಲ್ಲದೆ ಸಾಗಿಸುತ್ತಿದ್ದ 15.26 ಲಕ್ಷ ರೂ.ಗಳನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿದ್ದಾರೆಂದು ತಿಳಿಸಿದರು. ಈ ಸಂಬಂಧ ತನಿಖೆ ನಡೆಸುವಂತೆ ಚುನಾವಣಾ ಪರಿಶೀಲನಾ ಸಮಿತಿಗೆ ವಹಿಸಲಾಗಿದೆ.

ಮಧ್ಯರಾತ್ರಿ ಭೇಟಿ ನೀಡಿದ ಎಸಿ: ಚುನಾವಣಾಧಿಕಾರಿ ರುಚಿ ಬಿಂದಾಲ್ ಶುಕ್ರವಾರ ಮಧ್ಯರಾತ್ರಿ ಚಿಲ್ಕುಂದದ ಚೆಕ್‌ಪೋಸ್ಟ್‌ಗೆ ಅನಿರೀಕ್ಷಿತ ಭೇಟಿ ನೀಡಿ ತನಿಖಾಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯವೈಖರಿ ಪರಿಶೀಲಿಸಿ, ನಿದ್ರೆ ಮಂಪರಿನಲ್ಲಿದ್ದ ಸಿಬ್ಬಂದಿಗಳಿಗೆ ಚುರುಕು ಮುಟ್ಟಿಸಿದರಲ್ಲದೆ, ಕೆಲ ಸಲಹೆ ನೀಡಿದರು.

ಐದನೇ ವರ್ಷವೂ ನಡೆಯದ ಶ್ರೀ ಅಗಸ್ತ್ಯೇಶ್ವರಸ್ವಾಮಿ ರಥೋತ್ಸವ

ಲಕ್ಷಾಂತರ ಭಕ್ತರಿಗೆ ನಿರಾಸೆ, ರಥ ದುರಸ್ತಿಗೆ ಮುಂದಾಗದ ಸರ್ಕಾರ





ತಿ.ನರಸೀಪುರ, ಏ.2– ರಥ ಶಿಥಿಲಗೊಂಡಿರುವ ಹಿನ್ನೆಲೆಯಲ್ಲಿ ತ್ರಿವೇಣಿ ಸಂಗಮ ಹಾಗೂ ಕುಂಭಮೇಳ ಖ್ಯಾತಿಯ ಹಳೇ ತಿರುಮಕೂಡಲಿನ ಶ್ರೀಅಗಸ್ತ್ಯೇಶ್ವರಸ್ವಾಮಿ ರಥೋತ್ಸವ 5ನೇ ವರ್ಷವೂ ನಡೆಯದೆ ಈ ಭಾಗದ ಲಕ್ಷಾಂತರ ಭಕ್ತರು ನಿರಾಸೆಗೊಂಡಿದ್ದಾರೆ.

ತಿರುಮಕೂಡಲಿನಲ್ಲಿ ಕಾವೇರಿ, ಕಪಿಲಾ ಹಾಗೂ ಸ್ಫಟಿಕ ಸರೋವರಗಳ ಸಂಗಮವಾಗುತ್ತದೆ. ಹೀಗಾಗಿ ಉತ್ತರ ಭಾರತದಲ್ಲಿ ನಡೆಯುತ್ತಿದ್ದ ಕುಂಭಮೇಳವನ್ನು ದಕ್ಷಿಣ ಭಾರತದಲ್ಲಿ ನಡೆಸುವ ಸಲುವಾಗಿ ಪ್ರಮುಖ ಮಠಾಧೀಶರು ತ್ರಿವೇಣಿ ಸಂಗಮ ಗುರುತಿಸಿ ಅನೇಕ ವರ್ಷಗಳಿಂದ ಕುಂಭಮೇಳ ನಡೆಸುತ್ತಾ ಬಂದಿದ್ದಾರೆ. ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿದರೆ ಕಾಶಿಗಿಂತಲೂ ಗುಲಗಂಜಿಯಷ್ಟು ಪುಣ್ಯ ಪ್ರಾಪ್ತಿಯಾಗುತ್ತದೆಂಬ ಪ್ರತೀತಿ ಇದೆ. ಹಾಗೆಯೇ ಇಲ್ಲಿನ ಅಗಸ್ತ್ಯೇಶ್ವರಸ್ವಾಮಿ ದೇವಸ್ಥಾನವೂ ಅನೇಕ ಕಾರಣಗಳಿಗೆ ಪ್ರಸಿದ್ಧಿ ಪಡೆದಿದೆ. ದೇವಸ್ಥಾನದ ಗರ್ಭಗುಡಿಯಲ್ಲಿರುವ ಶಿವಲಿಂಗದಲ್ಲಿ ಯಾವಾಗಲೂ ನೀರು ತುಂಬಿರುವುದು ಹಾಗೂ ಅದನ್ನೇ ತೀರ್ಥವನ್ನಾಗಿ ನೀಡುತ್ತಿರುವುದನ್ನು ಇಂದಿಗೂ ಕಾಣಬಹುದಾಗಿದೆ.

ಪ್ರಸಿದ್ಧ ಕ್ಷೇತ್ರವಾದ ಇಲ್ಲಿ ಪ್ರತಿ ವರ್ಷಕ್ಕೊಮ್ಮೆ ಶ್ರೀ ಅಗಸ್ತ್ಯೇಶ್ವರಸ್ವಾಮಿಯವರ ರಥೋತ್ಸವ ನಡೆಯುತ್ತಿದೆ. ಆದರೆ ರಥ ಶಿಥಿಲಗೊಂಡ ಹಿನ್ನೆಲೆಯಲ್ಲಿ ಕಳೆದ 5 ವರ್ಷಗಳಿಂದ ರಥೋತ್ಸವ ಸ್ಥಗಿತಗೊಳಿಸಲಾಗಿದೆ. ನಂಜನಗೂಡು ಪಂಚ ಮಹಾರಥೋತ್ಸವದ ದಿನವೇ ಇಲ್ಲಿಯೂ ರಥೋತ್ಸವ ಜರುಗಬೇಕಿತ್ತಾದರೂ, ದುರಸ್ತಿ ಹಿನ್ನೆಲೆಯಲ್ಲಿ ಭಕ್ತರು ನಿರಾಶೆಗೊಂಡು ದೇವಸ್ಥಾನಕ್ಕೆ ಬಂದು ಪೂಜೆ ಮಾಡಿಸಿಕೊಂಡು ಹೋಗುವಂತಾಯಿತು. ರಥೋತ್ಸವ ನಡೆಯದ ಹಿನ್ನೆಲೆಯಲ್ಲಿ ಅಗಸ್ತ್ಯೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ದೇವಸ್ಥಾನದಲ್ಲಿಟ್ಟು ದರ್ಶನಕ್ಕೆ ಅವಕಾಶ ಕಲ್ಪಿಸಿ ಕೊಡಲಾಯಿತು.

ದುರಸ್ತಿಯಾಗದ ರಥ, ದೇವಾಲಯ: ಗ್ರಾಮಸ್ಥರು ರಥದ ದುರಸ್ತಿ ಅಥವಾ ನೂತನ ರಥ ನಿರ್ಮಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಕುಂಭಮೇಳಕ್ಕೆ ಆಗಮಿಸಿದ್ದ ವೇಳೆ ದೇವಸ್ಥಾನದ ದುರಸ್ತಿ ಕಾರ್ಯಕ್ಕೆ 5 ಕೋಟಿ ರೂ. ಬಿಡುಗಡೆ ಮಾಡುವುದಾಗಿ ಹೇಳಿದ್ದರು. ನಂತರ ದೇವಸ್ಥಾನದ ಅಭಿವೃದ್ಧಿ ಕೆಲಸಕ್ಕೆ ಚಾಲನೆ ನೀಡಲಾಯಿತು. ಆದರೆ 5 ವರ್ಷ ಕಳೆಯುತ್ತಾ ಬಂದರೂ ದೇವಸ್ಥಾನದ ಅಭಿವೃದ್ಧಿ ಕುಂಟುತ್ತಾ ಸಾಗಿದೆ. ಈ ಬಗ್ಗೆ ಗ್ರಾಮಸ್ಥರು ಸಂಬಂಧಿಸಿದ ಶಾಸಕರು, ಸಚಿವರಿಗೆ ಮನವಿ ಸಲ್ಲಿಸಿದರೂ, ಯಾವುದೇ ಪ್ರಯೋಜನವಾಗಿಲ್ಲ. ದೇವಸ್ಥಾನದ ದುರಸ್ತಿ ಕಾರ್ಯ ಕುಂಟುತ್ತಾ ಸಾಗಿರುವುದರಿಂದ ದೇವತಾ ಕಾರ್ಯ ಹಾಗೂ ಪೂಜಾ ಕೈಂಕರ್ಯಗಳಿಗೆ ತೊಂದರೆಯಾಗಿದೆ. ಅಲ್ಲದೇ ಭಕ್ತರಿಗೂ ನಿರಾಶೆಯಾಗಿದೆ. ಜೊತೆಗೆ ರಥ ದುರಸ್ತಿಯಾಗದ ಹಿನ್ನೆಲೆಯಲ್ಲಿ ಭಕ್ತರು ಮತ್ತು ಗ್ರಾಮಸ್ಥರ ಧಾರ್ಮಿಕ ನಂಬಿಕೆಗೆ ಧಕ್ಕೆ ಉಂಟಾಗಿದೆ.

ದೇವಸ್ಥಾನದೊಂದಿಗೆ ರಥ ನಿರ್ಮಾಣವಾಗಬೇಕು: ಭಾನುವಾರ ಅಗಸ್ತ್ಯೇಶ್ವರಸ್ವಾಮಿ ರಥೋತ್ಸವ ಹಿನ್ನೆಲೆಯಲ್ಲಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜಿ.ವೆಂಕಟೇಶ್, ಶೃಂಗಾರ್ ಹೋಟೆಲ್‌ನ ಉಮೇಶ್ ಹಾಗೂ ಗ್ರಾಮದ ಮುಖಂಡ ವೆಂಕಟೇಶ್ ರಥ ನಿರ್ಮಾಣ ಆಗದ ಹಿನ್ನೆಲೆಯಲ್ಲಿ ಕಳೆದ 5 ವರ್ಷದಿಂದ ರಥೋತ್ಸವ ನಡೆದಿಲ್ಲ. ದೇವಸ್ಥಾನದ ಕಾಮಗಾರಿ ಸಹ ಪೂರ್ಣಗೊಂಡಿಲ್ಲ. ಹಾಗಾಗಿ ಗ್ರಾಮಸ್ಥರು ಹಾಗೂ ಭಕ್ತರ ಪೂಜಾ ಕೈಂಕರ್ಯಕ್ಕೆ ತೊಂದರೆ ಉಂಟಾಗಿರುವುದರಿಂದ ಕೂಡಲೇ ಎರಡೂ ಕಾಮಗಾರಿಯನ್ನು ಮುಗಿಸಿ ಭಕ್ತರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಒತ್ತಾಯಿಸಿದರು.

ಪಿ.ಪುಟ್ಟರಾಜು ಮಾತನಾಡಿ, ದೇವಸ್ಥಾನ ಕಾಮಗಾರಿ ಆರಂಭಗೊಂಡು 5 ವರ್ಷಗಳೇ ಕಳೆದಿವೆ. ಕಾಮಗಾರಿ ವೇಗ ಹೆಚ್ಚಿಸುವಂತೆ ಸಂಬಂಧಿಸಿದ ಶಾಸಕರು ಹಾಗೂ ಸಚಿವರಿಗೆ ಮನವಿ ಮಾಡಿದ್ದೇವೆ. ಆದರೂ ಕಾಮಗಾರಿ ಸಮರ್ಪಕವಾಗಿ ನಡೆಯದೇ ಸ್ಥಗಿತಗೊಂಡಿದೆ. ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿ ಕುಂಟುತ್ತಲೇ ಸಾಗಿದೆ. ಹಾಗಾಗಿ ದೇವಸ್ಥಾನ ಕಾಮಗಾರಿಯನ್ನು ತ್ವರಿತವಾಗಿ ಮಾಡಿ ಭಕ್ತರಿಗೆ ಅನುಕೂಲ ಕಲ್ಪಿಸಬೇಕು. ಅಲ್ಲದೇ ನೂತವಾಗಿ ರಥ ನಿರ್ಮಾಣ ಮಾಡಿ ಭಕ್ತರ ಧಾರ್ಮಿಕ ನಂಬಿಕೆಗೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿದರು.

> **ಗ್ರಾಮಸ್ಥರಿಂದಲೇ ಹೊಸ ರಥ ನಿರ್ಮಾಣಕ್ಕೆ ಚಾಲನೆ**
>
> ರಥದ ದುರಸ್ತಿಗಾಗಿ ಗ್ರಾಮಸ್ಥರು ಸಲ್ಲಿಸಿದ ಮನವಿಗೆ ಸ್ಪಂದನೆ ದೊರಕದಿದ್ದರಿಂದ ಕೆಲ ವರ್ಷಗಳ ಹಿಂದೆ ಗ್ರಾಮಸ್ಥರೇ ನೂತನ ರಥ ನಿರ್ಮಾಣಕ್ಕೆ ಮುಂದಾಗಿ ರಥ ನಿರ್ಮಾಣದ ಸಮಿತಿ ರಚಿಸಿದ್ದರು. ಪೆಟ್ರೋಲ್ ಬಂಕ್ ಚಂದು ಹಾಗೂ ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು ಕ್ರಮವಾಗಿ ಸಮಿತಿ ಅಧ್ಯಕ್ಷ ಹಾಗೂ ಗೌರವಾಧ್ಯಕ್ಷರಾಗಿ ಆಯ್ಕೆಯಾದರು. ರಥ ನಿರ್ಮಾಣ ಮಾಡಲು ಕೈ ಸಾಲದ ರೂಪದಲ್ಲಿ ಪಿ.ಪುಟ್ಟರಾಜು 3.50 ಲಕ್ಷ ರೂ. ನೀಡಿ ರಥ ನಿರ್ಮಾಣದ ಕಾರ್ಯಕ್ಕೆ ಚಾಲನೆ ನೀಡಿದ್ದರು. ಆನಂತರ ರಥ ನಿರ್ಮಿಸಲು ಬೇಕಾಗುವ ಮರ, ತಮಿಳುನಾಡಿನ ಕೆತ್ತನೆಗಾರರನ್ನು ಭೇಟಿ ಮಾಡಿ ಮಾತುಕತೆ ನಡೆಸಲಾಗಿತ್ತು. ಈ ನಡುವೆ ಗ್ರಾಮದಲ್ಲಿ ರಥ ನಿರ್ಮಾಣದ ವಿಷಯ ಮುಂದಿಟ್ಟುಕೊಂಡು ಕೆಲವರು ಚಂದಾ ವಸೂಲಿ ಆರಂಭಿಸಿದ ಹಿನ್ನೆಲೆಯಲ್ಲಿ ಬೇಸತ್ತ ಸಮಿತಿ ರಥ ನಿರ್ಮಾಣದ ಕಾರ್ಯವನ್ನೇ ಕೈ ಬಿಟ್ಟಿತು ಎನ್ನಲಾಗಿದೆ. ಹಾಗಾಗಿ ಇಂದಿಗೂ ರಥ ನಿರ್ಮಾಣ ಕಾರ್ಯ ಆರಂಭಗೊಂಡಿಲ್ಲ. ಆರಂಭಗೊಳ್ಳುವ ಭರವಸೆ ಸಹ ಗ್ರಾಮಸ್ಥರಲ್ಲಿ ಉಳಿದಿಲ್ಲ.

ಇಂದು ಜೆಡಿಎಸ್ ಕಾರ್ಯಕರ್ತರ ಸಮಾವೇಶ

ಹೆಬ್ಬಾಳು, ಏ.2– ಅಖಿಲ ಭಾರತ ನಾಮಧಾರಿಗೌಡ ಸಮಾಜದ ಜೆಡಿಎಸ್ ಕಾರ್ಯಕರ್ತರ ಸಮಾವೇಶ ಏ.3ರಂದು ಬೆಳಗ್ಗೆ 11ಕ್ಕೆ ಪಟ್ಟಣದ ನಾಮಧಾರಿಗೌಡ ಸಮುದಾಯ ಭವನದಲ್ಲಿ ನಡೆಯಲಿದೆ. ಇದಕ್ಕೂ ಮುನ್ನಾ ತೋಪಮ್ಮನವರ ದೇವಾಲಯದಿಂದ ಬೈಕ್ ರ್‍ಯಾಲಿ ಮೂಲಕ ಶಾಸಕ ಸಾ.ರಾ.ಮಹೇಶ್ ಅವರನ್ನು ಭವನಕ್ಕೆ ಕರೆತರಲಾಗುವುದು. ಸಮಾಜದ ಬಂಧುಗಳು ಮತ್ತು ಶಾಸಕರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಜೆಡಿಎಸ್ ಮುಖಂಡ ಡೈರಿಪ್ರಕಾಶ್ ತಿಳಿಸಿದ್ದಾರೆ.

ಇಂದು ಅಚ್ಯುತಾನಂದ ಜೆಡಿಎಸ್‌ಗೆ ಸೇರ್ಪಡೆ

ಕೆ.ಆರ್.ನಗರ, ಏ.2–ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಅಚ್ಯುತಾನಂದ ಅವರು ಏ.3ರಂದು ಸೋಮವಾರ ಶಾಸಕ ಸಾ.ರಾ.ಮಹೇಶ್ ನೇತೃತ್ವದಲ್ಲಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸಮ್ಮುಖದಲ್ಲಿ ತಮ್ಮ ಅಪಾರ ಬೆಂಬಲಿಗರೊಂದಿಗೆ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಯಾಗಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಅಚ್ಯುತಾನಂದ ಅವರು ಶಾಸಕ ಸಾ.ರಾ.ಮಹೇಶ್ ಅವರ ಜನಪರ ಆಡಳಿತ, ಅವಳಿ ತಾಲೂಕಿನ ಅಭಿವೃದ್ಧಿ, 15 ವರ್ಷಗಳ ಸುದೀರ್ಘ ಸೇವೆ ಮೆಚ್ಚಿ ಬಿಡದಿಯಲ್ಲಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನಿವಾಸದಲ್ಲಿ ತಾಪಂ ಮಾಜಿ ಸದಸ್ಯ ತಮ್ಮಣ್ಣ ಸೇರಿದಂತೆ ಅಪಾರ ಬೆಂಬಲಿಗರೊಂದಿಗೆ ಜೆಡಿಎಸ್‌ಗೆ ಸೇರ್ಪಡೆಯಾಗುತ್ತಿದ್ದಾರೆ ಎನ್ನಲಾಗಿದೆ.

ಶ್ರೀನಿವಾಸ ನಿಧನ




ಮೈಸೂರು, ಏ.2– ಮೈಸೂರಿನ ತಿಲಕ್‌ನಗರ ನಿವಾಸಿ, ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಅಧಿಕಾರಿ ಶ್ರೀನಿವಾಸ(83) ಭಾನುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಏ.3) ಮಧ್ಯಾಹ್ನ ಬನ್ನಿಮಂಟಪದ ಜೋಡಿ ತೆಂಗಿನಮರ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.





ಸ್ಕೋರ್ ವಿವರ
ಮುಂಬೈ ಇಂಡಿಯನ್ಸ್ 171/7
ಆರ್‌ಸಿಬಿ 172/2
(ಆರ್‌ಸಿಬಿಗೆ 8 ವಿಕೆಟ್ ಜಯ)



ಬೆಂಗಳೂರಲ್ಲಿ ಆರ್‌ಸಿಬಿ ಅಬ್ಬರ: ಮುಂಬೈ ತತ್ತರ

● ಕಿಂಗ್ ಕೊಹ್ಲಿ, ಡುಪ್ಲೆಸಿಸ್ ಶತಕದ ಜೊತೆಯಾಟ
● ಅಭಿಮಾನಿಗಳಿಂದ ಸಂಭ್ರಮಾಚರಣೆ


ಬೆಂಗಳೂರು, ಏ.2– ನಾಯಕ ಫಾಫ್ ಡುಪ್ಲೆಸಿಸ್ ಹಾಗೂ ವಿರಾಟ್ ಕೊಹ್ಲಿ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಮುಂಬೈ ಇಂಡಿಯನ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಆರ್‌ಸಿಬಿ ಪ್ರಸಕ್ತ ಸಾಲಿನ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ತಂಡದ ಮೊತ್ತ 20 ರನ್ ಆಗುವಷ್ಟರಲ್ಲೇ ನಾಯಕ ರೋಹಿತ್ ಶರ್ಮಾ, ಇಶಾನ್ ಕಿಶನ್ ಹಾಗೂ ಕ್ಯಾಮರೂನ್ ಗ್ರೀನ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಬಂದ ಸೂರ್ಯಕುಮಾರ್ ಯಾದವ್ 15 ರನ್ ಗಳಿಸಿ ನಿರ್ಗಮಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ, ಮತ್ತೊಂದೆಡೆ ಅಬ್ಬರಿಸಿದ ತಿಲಕ್ ವರ್ಮಾ 46 ಎಸೆತಗಳಲ್ಲಿ 4 ಸಿಕ್ಸರ್, 9 ಬೌಂಡರಿ ಒಳಗೊಂಡ 84 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ನಿಹಾಲ್ ವಧೇರಾ 21, ಅರ್ಷದ್ ಖಾನ್ 15 ರನ್ ಗಳಿಸಿದರು. ಅಂತಿಮವಾಗಿ ಮುಂಬೈ ಇಂಡಿಯನ್ಸ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 171ರನ್ ಗಳಿಸಿತು. ಆರ್‌ಸಿಬಿ ಪರ ಬೌಲಿಂಗ್‌ನಲ್ಲಿ ಕರಣ್ ಶರ್ಮಾ 2, ಬ್ರೆಸ್‌ವೇಲ್, ಮೊಹಮ್ಮದ್ ಸಿರಾಜ್, ಟಾಪ್ಲಿ, ಆಕಾಶ್ ದೀಪ್ ಹಾಗೂ ಹರ್ಷಲ್ ಪಟೇಲ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಮುಂಬೈ ಇಂಡಿಯನ್ಸ್ ನೀಡಿದ್ದ 172 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆರ್‌ಸಿಬಿ ಪರ ವಿರಾಟ್ ಕೊಹ್ಲಿ ಹಾಗೂ ಡುಪ್ಲೆಸಿಸ್ ಮೊದಲ ಎಸೆತದಿಂದಲೇ ತಮ್ಮ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದರು. ಮುಂಬೈ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಕೊಹ್ಲಿ ಹಾಗೂ ಡುಪ್ಲೆಸಿಸ್ ಮೊದಲ ವಿಕೆಟ್‌ಗೆ 148 ರನ್‌ಗಳ ಜೊತೆಯಾಟವಾಡುವ ಮೂಲಕ ಬೇರ್ಪಟ್ಟಿತ್ತು. ಡುಪ್ಲೆಸಿಸ್ 43 ಎಸೆತಗಳಲ್ಲಿ 6 ಸಿಕ್ಸರ್, 5 ಬೌಂಡರಿ ಒಳಗೊಂಡ 73 ರನ್ ಸಿಡಿಸಿ ನಿರ್ಗಮಿಸಿದರು. ಮತ್ತೊಂದೆಡೆ ಅಬ್ಬರಿಸಿದ ಕೊಹ್ಲಿ 49 ಎಸೆತಗಳಲ್ಲಿ 6 ಬೌಂಡರಿ, 5 ಸಿಕ್ಸರ್ ಒಳಗೊಂಡ 82ರನ್ ಪೇರಿಸಿ ಅಜೇಯರಾಗಿ ಉಳಿದರು. ಈ ವೇಳೆ ಬಂದ ದಿನೇಶ್ ಕಾರ್ತಿಕ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರೇ, ಗ್ಲೆನ್ ಮ್ಯಾಕ್ಸ್‌ವೆಲ್ 3 ಎಸೆತಗಳಲ್ಲಿ 2 ಸಿಕ್ಸರ್ ಒಳಗೊಂಡ 13ರನ್ ಗಳಿಸಿ ಅಜೇಯರಾಗಿ ಉಳಿದರು.

ಮುಂಬೈ ಪರ ಬೌಲಿಂಗ್‌ನಲ್ಲಿ ಕ್ಯಾಮರೂನ್ ಗ್ರಿನ್, ಅರ್ಷದ್ ಖಾನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಆರ್‌ಸಿಬಿ ಪರ ಡುಪ್ಲೆಸಿಸ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸಂಭ್ರಮಾಚರಣೆ: ಪ್ರಸಕ್ತ ಸಾಲಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಮುಂಬೈ ವಿರುದ್ಧದ ಆರಂಭಿಕ ಪಂದ್ಯದಲ್ಲಿ 8 ವಿಕೆಟ್ ಭರ್ಜರಿ ಗೆಲುವು ಸಾಧಿಸುತ್ತಿದ್ದಂತೆಯೇ ಆರ್‌ಸಿಬಿ ಅಭಿಮಾನಿಗಳು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಸೇರಿದಂತೆ ಹೊರ ಭಾಗದಲ್ಲಿ ಸಂಭ್ರಮಾಚರಣೆ ನಡೆಸಿದರು.



[ಏಪ್ರಿಲ್ 03]
ಚೆನ್ನೈ V/S ಲಕ್ನೋ
ಸ್ಥಳ: ಎಂ. ಚಿದಂಬರಂ ಕ್ರೀಡಾಂಗಣ, ಚೆನ್ನೈ
ಸಮಯ: ಸಂಜೆ 7.30



ಚುನಾವಣೆ ಟೆನ್ಷನ್ ನಡುವೆ ಆರ್‌ಸಿಬಿ ಪಂದ್ಯ ವೀಕ್ಷಿಸಿದ ಸಿದ್ದರಾಮಯ್ಯ



ಕ್ರಿಕೆಟ್ ನನ್ನ ಇಷ್ಟದ ಆಟ. ಆರ್‌ಸಿಬಿ ನನ್ನ ಹೆಮ್ಮೆಯ ತಂಡ. ನನ್ನಂತಹ ಕೋಟ್ಯಾಂತರ ಅಭಿಮಾನಿಗಳ ಹಾರೈಕೆ ಆರ್‌ಸಿಬಿ ಹುಡುಗರ ಜೊತೆಗಿದೆ. ಇಂದಲ್ಲ ನಾಳೆ ನಮ್ಮವರೂ ಕಪ್ ಗೆಲ್ಲುತ್ತಾರೆ ಎಂಬ ವಿಶ್ವಾಸವಿದೆ. ಓರ್ವ ಕನ್ನಡಿಗನಾಗಿ ನನ್ನ ಬೆಂಬಲ ಯಾವಾಗಲೂ ನಮ್ಮ ಆರ್‌ಸಿಬಿಗೆ
- ಸಿದ್ದರಾಮಯ್ಯ ಟ್ವೀಟ್

ಬೆಂಗಳೂರು: ಪ್ರಸ್ತುತ ರಾಜ್ಯ ವಿಧಾನಸಭಾ ಚುನಾವಣೆಯ ಕಾವು ಜೋರಾಗಿದ್ದು, ಈ ಒತ್ತಡದ ನಡುವೆಂಯೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಮುಂಬೈ ಇಂಡಿಯನ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಿನ ಪಂದ್ಯ ವೀಕ್ಷಿಸಿದ್ದಾರೆ. ಇವರಿಗೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಇನ್ನಿತರ ಮುಖಂಡರು ಸಾಥ್ ನೀಡಿದರು.

ಒಂದೆಡೆ ಚುನಾವಣಾ ತಯಾರಿ, ವರುಣಾದಲ್ಲಿ ಸ್ಪರ್ಧೆ, ಕೋಲಾರದತ್ತ ಮನಸ್ಸು. ಮತ್ತೊಂದೆಡೆ ಅಭ್ಯರ್ಥಿಗಳ ಟಿಕೆಟ್ ಫೈನಲ್, ಪ್ರಚಾರ ಕಾರ್ಯ. ಹೀಗೆ ವಿಪಕ್ಷನಾಯಕ ಸಿದ್ದರಾಮಯ್ಯ ಫುಲ್ ಷೆಡ್ಯೂಲ್ ನಡುವೆಯೂ ಆರ್‌ಸಿಬಿ ಪಂದ್ಯ ವೀಕ್ಷಿಸಿದ್ದಾರೆ.

ಸಿದ್ದರಾಮಯ್ಯ ರಿಲಾಕ್ಸ್ ಮೂಡ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಮುಂಬೈ ಇಂಡಿಯನ್ಸ್ ನಡುವಿನ ಐಪಿಎಲ್ ಪಂದ್ಯ ವೀಕ್ಷಿಸಿದ್ದು, ಸಿದ್ದರಾಮಯ್ಯನವರೊಂದಿಗೆ ವಿಧಾನ ಪರಿಷತ್ ಸದಸ್ಯ ಗೋವಿಂದರಾಜು, ಮಾಜಿ ರಣಜಿ ಕ್ರಿಕೆಟಿಗ ಪ್ರಕಾಶ್ ರಾಥೋಡ್ ಸಾಥ್ ಸಹ ಪಂದ್ಯ ವೀಕ್ಷಿಸಿದರು.

ಎಸ್‌ಆರ್‌ಹೆಚ್ ವಿರುದ್ಧ ಆರ್‌ಆರ್‌ಗೆ ರಾಯಲ್ ಗೆಲುವು

● ಬಟ್ಲರ್, ಸ್ಯಾಮ್ಸನ್, ಜೈಸ್ವಾಲ್ ಭರ್ಜರಿ ಅರ್ಧಶತಕ ● ಚಹಲ್ ಸ್ಪಿನ್ ಮೋಡಿ



ಹೈದರಾಬಾದ್, ಏ.2– ಪಂದ್ಯದಲ್ಲಿ ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಮಿಂಚಿದ ರಾಜಸ್ಥಾನ್ ರಾಯಲ್ಸ್ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 72 ರನ್‌ಗಳಿಂದ ಭರ್ಜರಿ ಜಯ ಸಾಧಿಸಿತು.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ರಾಯಲ್ಸ್ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಜೋಸ್ ಬಟ್ಲರ್ ಹಾಗೂ ಯಶಸ್ವಿ ಜೈಸ್ವಾಲ್ ತಂಡಕ್ಕೆ ಬಿರುಸಿನ ಆರಂಭ ಒದಗಿಸಿದರು. ಈ ಜೋಡಿ ಮೊದಲ ವಿಕೆಟ್‌ಗೆ 5.5 ಓವರ್‌ಗಳಲ್ಲಿ 85 ರನ್ ಜೊತೆಯಾಟವಾಡಿ ಬೇರ್ಪಟ್ಟಿತ್ತು. ಕೇವಲ 20 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದ ಬಟ್ಲರ್ ವೇಗಕ್ಕೆ ಫಜಲ್ಹಕ್ ಫಾರೂಕಿ ಬ್ರೇಕ್ ಹಾಕಿದರು. 22 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಒಳಗೊಂಡ 54 ರನ್ ಗಳಿಸಿ ಬಟ್ಲರ್ ಫಾರೂಕಿಗೆ ವಿಕೆಟ್ ಒಪ್ಪಿಸಿದರು. ನಂತರ 2ನೇ ವಿಕೆಟ್‌ಗೆ ಜೊತೆಯಾದ ಸಂಜು ಸ್ಯಾಮ್ಸನ್ ಹಾಗೂ ಜೈಸ್ವಾಲ್ ಬಿರುಸಿನ ಬ್ಯಾಟಿಂಗ್ ಮುಂದುವರೆಸಿ ತಂಡದ ಮೊತ್ತ ಹೆಚ್ಚಿಸಿದರು. ಅಲ್ಲದೇ 54 ರನ್ ಗಳ ಜೊತೆಯಾಟವಾಡಿದರು. ಈ ವೇಳೆ 37 ಎಸೆತಗಳಲ್ಲಿ 9 ಬೌಂಡರಿ ಒಳಗೊಂಡ 54 ರನ್ ಗಳಿಸಿದ್ದ ಜೈಸ್ವಾಲ್ ವಿಕೆಟ್ ಒಪ್ಪಿಸಿದರು. ನಂತರ ಬಂದ ದೇವದತ್ ಪಡಿಕ್ಕಲ್ 2, ರಿಯಾನ್ ಪರಾಗ್ 7 ರನ್ ಗಳಿಸಿ ನಿರ್ಗಮಿಸಿದರೇ ಮತ್ತೊಂದೆಡೆ ಅಬ್ಬರಿಸಿದ ನಾಯಕ ಸಂಜು ಸ್ಯಾಮ್ಸನ್ 32 ಎಸೆತಗಳಲ್ಲಿ 4 ಸಿಕ್ಸರ್, 3 ಬೌಂಡರಿ ಒಳಗೊಂಡ 55 ರನ್ ಗಳಿಸಿ ಔಟಾದರು. ಇವರಿಗೆ ಉತ್ತಮ ಸಾಥ್ ನೀಡಿದ ಶಿಮ್ರಾನ್ ಹೆಟ್ಮೆಯರ್ 22 ರನ್ ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ರಾಜಸ್ಥಾನ ರಾಯಲ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 203 ರನ್ ಗಳಿಸಿತು. ಹೈದರಾಬಾದ್ ಪರ ಫಜಲ್ಹಕ್ ಫಾರೂಕಿ ಮತ್ತು ಟಿ.ನಟರಾಜನ್ ತಲಾ 2, ಉಮ್ರಾನ್ ಮಲ್ಲಿಕ್ ಒಂದು ವಿಕೆಟ್ ಕಬಳಿಸಿದರು.

204ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ಹೈದರಾಬಾದ್ ಯಜುವೇಂದ್ರ ಚಹಲ್ ಸ್ಪಿನ್ ಮೋಡಿಗೆ ತತ್ತರಿಸಿ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 131 ರನ್ ಗಳಿಸಲಷ್ಟೇ ಶಕ್ತವಾಯಿತು. ಇನ್ನಿಂಗ್ಸ್ ಆರಂಭಿಸಿದ ಹೈದರಾಬಾದ್ ತಂಡ ಖಾತೆ ತೆರೆಯುವ ಮುನ್ನವೇ ಅಭಿಷೇಕ್ ಶರ್ಮಾ, ರಾಹುಲ್ ತ್ರಿಪಾಠಿ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಇವರಿಬ್ಬರನ್ನು ಶೂನ್ಯಕ್ಕೆ ಔಟ್ ಮಾಡುವ ಮೂಲಕ ವೇಗಿ ಟ್ರೆಂಟ್ ಬೌಲ್ಟ್ ಆಘಾತ ನೀಡಿದರು. ಆರಂಭಿಕ ಆಟಗಾರ ಮಾಯಾಂಕ್ ಅಗರ್ವಾಲ್ 27 ರನ್ ಗಳಿಸಿ ಔಟಾದರು. ಉಳಿದಂತೆ ಹ್ಯಾರಿ ಬ್ರೂಕ್ 13, ಅಬ್ದುಲ್ ಸಮದ್ 32, ಆದೀಲ್ ರಶೀದ್ 18, ಉಮ್ರಾನ್ ಮಲ್ಲಿಕ್ 19 ರನ್ ಗಳಿಸಿದರು.

ರಾಜಸ್ಥಾನ ಪರ ಬಿಗಿ ಬೌಲಿಂಗ್ ದಾಳಿ ನಡೆಸಿದ ಯಜ್ವೇಂದ್ರ ಚಹಾಲ್ 4 ಓವರ್‌ಗಳಲ್ಲಿ 17 ರನ್ ಮಾತ್ರ ಬಿಟ್ಟುಕೊಟ್ಟು 4 ವಿಕೆಟ್ ತನ್ನದಾಗಿಸಿಕೊಂಡರು. ಉಳಿದಂತೆ ಟ್ರೆಂಟ್ ಬೌಲ್ಟ್ 2, ಜೇಸನ್ ಹೋಲ್ಡರ್ ಹಾಗೂ ರವಿಚಂದ್ರನ್ ಅಶ್ವಿನ್ ತಲಾ ಒಂದೊಂದು ವಿಕೆಟ್ ಪಡೆದರು. ಸ್ಫೋಟಕ ಆಟವಾಡಿದ ಜೋಸ್ ಬಟ್ಲರ್ ಪಂದ್ಯ ಶ್ರೇಷ್ಠ ಎನಿಸಿಕೊಂಡರು.

ರಾಜಸ್ಥಾನ ರಾಯಲ್ಸ್
20 ಓವರ್‌ಗಳಲ್ಲಿ 5 ವಿಕೆಟ್‌ಗೆ 203
ಸನ್‌ರೈಸರ್ಸ್ ಹೈದರಾಬಾದ್
20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 131
(ರಾಜಸ್ಥಾನ್ ರಾಯಲ್ಸ್‌ಗೆ 72ರನ್ ಗೆಲುವು)



ಮಾನ್ಯ ಗೌರವಾನ್ವಿತ 2ನೇ ಕಿರಿಯ ಶ್ರೇಣಿ ನ್ಯಾಯಾಲಯ ಮೈಸೂರು ಅಸಲು ದಾವಾ ಸಂಖ್ಯೆ: 109/2022

ವಾದಿಗಳು : 1. ಶ್ರೀಮತಿ. ಕೆ.ಎಸ್.ವಸಂತಿ ಕೋಂ ಲೇಟ್, ಜಯಂತ್ ಕುಮಾರ್ ವಯಸ್ಸು 62 ವರ್ಷ, 2. ಕೀರ್ತನ್ ಕುಮಾರ್ ಹೆಚ್.ಜೆ. ಬಿನ್ ಲೇಟ್, ಜಯಂತ್ ಕುಮಾರ್ ವಯಸ್ಸು 33 ವರ್ಷ, 3. ಅಪೂರ್ವ ಹೆಚ್. ಜೆ., ಬಿನ್ ಲೇಟ್, ಜಯಂತ್ ಕುಮಾರ್ ವಯಸ್ಸು 32 ವರ್ಷ, ಎಲ್ಲರ ವಾಸ: # 401, ಲಕ್ಷ್ಮಿ ರಾಮಸ್ವಾಮಿ ಸೌಧ ಅಪಾರ್ಟ್‌ಮೆಂಟ್, 3ನೇ ಮಹಡಿ, ಜಯಲಕ್ಷ್ಮಿಪುರಂ ವಿಲಾಸ ರಸ್ತೆ, ಚಾಮರಾಜಪುರಂ, ಮೈಸೂರು.

ವಿರುದ್ಧ

ಪ್ರತಿವಾದಿ : ಆಯುಕ್ತರು
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ಸಾರ್ವಜನಿಕ ಪ್ರಕಟಣೆ

1ನೇ ವಾದಿಯ ಗಂಡ, 2 ಮತ್ತು 3ನೇ ವಾದಿಯ ತಂದೆ ಹೆಚ್.ಕೆ.ಜಯಂತ್ ಕುಮಾರ್ ರವರು ದಿನಾಂಕ: 01.05.2004 ರಂದು ಕಾಣೆಯಾಗಿದ್ದು, ಈ ಸಂಬಂಧ ವಾದಿಯರು ಪೋಲೀಸ್ ದೂರನ್ನು ನೀಡಿದ್ದುಮ ಈಗೆ 16 ವರ್ಷ ಕಳೆದರೂ ಅವರು ಪತ್ತೆಯಾಗಿರುವುದಿಲ್ಲ. ಆ ಕಾರಣದಿಂದ ನ್ಯಾಯಲಯದಲ್ಲಿ ಹೆಚ್.ಕೆ.ಜಯಂತ್ ಕುಮಾರ್ ರವರು ಮರಣ ಹೊಂದಿದ್ದಾರೆಂದು ಘೋಷಿಸಬೇಕೆಂದು ಮತ್ತು ವಾದಿಯರು ಮರಣ ಪ್ರಮಾಣ ಪತ್ರವನ್ನು ಕೋರಿ ದಾವೆ ಸಲ್ಲಿಸಿರುತ್ತಾರೆ. ಈ ಸಂಬಂಧವಾಗಿ ಯಾರಿಗಾದರೂ ಆಕ್ಷೇಪಣೆಯಿದ್ದಲ್ಲಿ ಇದರ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ ದಿನಾಂಕ: 23.5.2023 ರಂದು ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಕಾನೂನು ರೀತಿ ಮೇಲ್ಕಂಡ ಪ್ರಕರಣವನ್ನು ಇತ್ಯರ್ಥ ತಿಳಿಯಪಡಿಸಲಾಗುವುದು.

ವಾದಿಗಳ ಪರ ವಕೀಲರು
ರಾಮಕೃಷ್ಣ. ಬಿ.ಎ. ಎಲ್.ಎಲ್.ಬಿ
ನಂ.1131/1ಎ, 1ನೇ ಮಹಡಿ, ಅಂಬೇಡ್ಕರ್ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು.
ಸ್ಥಳ: ಮೈಸೂರು
ದಿನಾಂಕ: 28-03-2023

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
2ನೇ ಕಿರಿಯ ಶ್ರೇಣಿ ನ್ಯಾಯಾಲಯ ಮೈಸೂರು

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	1	1	0	0	2
ಲಕ್ನೋ	1	1	0	0	2
ಆರ್‌ಸಿಬಿ	1	1	0	0	2
ಗುಜರಾತ್	1	1	0	0	2
ಪಂಜಾಬ್	1	1	0	0	2
ಕೊಲ್ಕತ್ತಾ	1	0	1	0	0
ಸಿಎಸ್‌ಕೆ	1	0	1	0	0
ಮುಂಬೈ	1	0	1	0	0
ಡೆಲ್ಲಿ	1	0	1	0	0
ಎಸ್‌ಆರ್‌ಹೆಚ್	1	0	1	0	0

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು